Dr. P. P. Shirodkar
Director of Archives
Archaeology & Museum
Panaji.
COA

H Palkar
Photographer

4-10-82

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

3

48-166
7·10·82

[illegible]

[illegible]

[illegible]

[illegible]

[illegible]

curm

48-166

Date 7-10-82

[illegible]
[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

Photog[illegible]
[illegible] ...res
[illegible] Museum)
[illegible]
No. 48-166
Date 7-12-82

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

Photo...

No. 48-166

Date 7·10·82

ಜಯಕರ್ನಾಟಕ

ॐ सहनाववतु सहनौ भुनक्तु । सह वीर्यं करवावहै ॥
तेजस्विनावधीतमस्तु मा विद्विषावहै ॥ ॐ शान्तिः ॥ ३ ॥

— श्रुतिः

ಸಂಪುಟ ೮	ಪ್ರಮೋದ ಸಂವತ್ಸರ, ಶೀಗಿಯ ಹುಣ್ಣಿವೆ ಚಾಲುಕ್ಯವಿಕ್ರಮ ವರ್ಷ ೮೫೫	ಸಂಚಿಕೆ ೧೨

ಭೂಮಿತಾಯಿಯ ಚೊಚ್ಚಿಲಮಗ

ಭೂಮಿತಾಯಿಯಾ
ಚೊಚ್ಚಿಲಮಗನನು
ಕಣ್ತೆರೆದೊಮ್ಮೆ
ನೋಡಿಹರೇನು ?

+ +

ಮುಗಿಲೆಂಬುವದು
ಕಿಸಿದಿತು ಹಲ್ಲು !
ಬಂಧಾ ಬೆಳೆಯೂ
ಮಿಡಿಚಿಯ ಮೇವು;
ಬಿತ್ತಿದ್ದಾಯಿತು
ಉತ್ತಿಹ ಮಣ್ಣು !
ದಿನವೂ ಸಂಜೆಗೆ
ಬೆವರಿನ ಜಳಕ,
ಉಸುರಿನ ಕೂಳಿಗೆ
ಕಂಬನಿ ನೀರು !
ಹೊಟ್ಟೆಯು ಹತ್ತಿತು
ಬೆನ್ನಿನ ಬೆನ್ನು !
ಎದೆಯ ಗೂಡಿನೊಳು
ಚಿಂತೆಯ ಗೂಗಿ !
ಮಿಂದುಳಿನ ಮೂಲೆಗೆ
ಲೊಟಲೊಟ ಹಲ್ಲಿ !
ಮೋರೆಯು ಸಾವನು
ಅಣಕಿಸುತಿಹುದು !
ಕೊರಳಿಗೆ ಹತ್ತಿದೆ
ಸಾಲದ ಶೂಲಾ

ಆದರು ಬರದೋ
ಯಮನಿಗು ಕರುಣಾ
ಉಸಿರಿಗೆ ಒಮ್ಮೆ
ಜನನಾ ಮರಣಾ !

+ +

ನರಗಳ ನೂಲಿನ
ಪರಿಪರಿ ಚೀಲಾ
ತೆರೆತೆರೆಯಾಗಿದೆ
ಜಿರಿಜಿರಿಯಾಗಿದೆ;
ಅದರೊಳಗೊಂದು
ಎಲುಬಿನ ಬಲೆಯು !
ಟುಕುಟುಕು ಡುಗುಡುಗು
ಉಲಿಯುವ ನರಳುವ
ಜೀವದ ಜಂತುವು
ಹೊರಳುತ ಉರುಳುತ
ಜನುಮವೆಂಬುವಾ
ಕತ್ತಲೆಯಲ್ಲಿ
ಬಿದ್ದಿದೆ ಒಳಗೆ
ಹೇಗೋ ಬಂದು !
ಸಾವಿನ ಬೆಳಕದು
ಕಾಣುವದೆಂದು ?
ಎಂದೋ ಎಂದೋ
ಎಂದೋ ಎಂದು
ಕನಕರಿಸುವದು
ತಳಮಳಿಸುವದು !

— ಅಂಬಿಕಾತನಯದತ್ತ

ಜಯಂ ಭದ್ರಂ ಶುಭಂ ಮಂಗಳಂ

ಈ ವರ್ಷ ಭಾರತದ ರಂಗಭೂಮಿಯು ರಣಾಂಗಣವಾಗಿ ಬಿಟ್ಟಿತು. ಎಲ್ಲಿ ಕೇಳಿದಲ್ಲಿ ರುದ್ರವೀಣೆಯ ಸೊಲ್ಲು! ಎಲ್ಲಿ ನೋಡಿದಲ್ಲಿ ತಾಂಡವನೃತ್ಯ! ಮಹಾತ್ಮಗಾಂಧಿಯವರು ತಮ್ಮ ಶಿವರೂಪದೊಳಗಿನ ರುದ್ರ ಸ್ವರೂಪವನ್ನು ಪ್ರಕಟಿಸಿದಮೇಲೆ ನಿರ್ಜೀವ ಶಾಂತಿಗೆ ನೆಲೆದೊರೆಯಬಹುದೇ? ಕನ್ನಡಿಗರೂ ಕನ್ನಡಿತಿಯರೂ ರಣಧುರಂಧರರಾಗಿ ರಾಷ್ಟ್ರಸಮುದ್ರಮಂಥನದಲ್ಲೊಗೆದ ನಂಜನ್ನು ತಟಕು ತಟಕಾದರೂ ಸವಿದಿರುವರು. ಅವರಿಗೂ ಅವರವರ ಕುಟುಂಬದವರಿಗೂ ಸಹಾನುಭೂತಿಯನ್ನು ವ್ಯಕ್ತಪಡಿಸುವ ಯೋಗ್ಯತೆಯು ನಮ್ಮದಲ್ಲ. ಆ ಮಹಾಜನರ ಆಶೀರ್ವಾದವನ್ನು ಬೇಡುವ ಪಾಮರರು ನಾವು.

ಕನ್ನಡಿಗರ ತೇಜಸ್ಸಿನೊಡನೆ ಕನ್ನಡದ ಓಜಸ್ಸು ಹೆಚ್ಚು ಹೆಚ್ಚು ಪ್ರಜ್ವಲಿಸಲಾರಂಭಿಸಿದೆ. ಈ ವರ್ಷ, ಕನ್ನಡವು ಸಾಹಿತ್ಯದ ಗುಡಿಕಟ್ಟಿದೆ. ಅಪೂರ್ವ ಕಾವ್ಯನಾಟಕ ಕಥಾಕಾದಂಬರಿ ತತ್ತ್ವಜ್ಞಾನ ಗ್ರಂಥಗಳು ಪ್ರಕಟವಾಗಿವೆ. ಕರ್ನಾಟಕದ ಕೀರ್ತಿ ನಾಮಾವಲಿಯು ಭಾರತಮಾಲೆಯ ಬಿರುದಾವಳಿಯಲ್ಲಿ ಸೇರಿಕೊಂಡಿದೆ. ವಿಶಾಲ ಕರ್ನಾಟಕವು ಕಣ್ತೆರೆಯುತ್ತಿದೆ. ಮುಂಬಯಿ ಬಡೋದಾ ಕಲ್ಕತ್ತಾ ಲಖನೌ ಲಾಹೋರದ ಕನ್ನಡಿಗರಿಂದಲಿ ರಂಗೂನ ಆಫ್ರಿಕಾ ಇಂಗ್ಲಂಡದೊಳಗಿನ ಕನ್ನಡಿಗರೂ ತಾಯಿಯ ಸ್ಮರಣೆಯನ್ನು ಮಾಡುತಲಿದ್ದಾರೆ. ಅನಂತಪೂರ ಸೇಲಂ ಕೊಯಿಮುತ್ತೂರಿನ ಸೀಮೆಯ ಕನ್ನಡಿಗರೂ ಹೈದರಾಬಾದು ಮೊದಲಾದ ಕರ್ನಾಟಕ ಸಂಸ್ಥಾನಗಳೊಳಗಿನ ಕನ್ನಡಿಗರೂ ತಾವೆಲ್ಲರೂ ಒಂದೆಂಬ ಭಾವನೆಯನ್ನು ಅನುಭವಿಸುತ್ತಲಿದ್ದಾರೆ. ಕನ್ನಡಿಗರ ವರ್ಧಮಾನವಾದ ಐಕ್ಯಕ್ಕೆ ಸತ್ಯಾಗ್ರಹ ಸಂಗ್ರಾಮದಲ್ಲಿ ಸೇರಿದ ಮೈಸೂರು ಕೊಡಗು ನಾಡಿನ ಅಜ್ಞಾತವೀರರೇ ಸಾಕ್ಷಿ. ಮುಂಬಯಿಯೊಳಗಿನ ಅಖಿಲ ಕರ್ನಾಟಕ ರಾಷ್ಟ್ರೀಯ ಸಭೆಯೆ ಸಾಕ್ಷಿ. ಜಯಕರ್ನಾಟಕ ಮಂಡಲದವರಾದರೂ ಕೈಕೊಂಡ ಸಾಹಿತ್ಯಸೇವೆಯನ್ನು ತನು-ಮನ-ಧನದಿಂದ ಮಾಡಿದ್ದಾರೆ. ಹಾಗು ಹೀಗು ಪತ್ರಿಕೆಗಳು ಜೀವದಿಂದುಳಿದರೆ ಸಾಕು ಎಂದೆನ್ನುವ ಕಾಲದಲ್ಲಿ ನಾವು ಜಯಕರ್ನಾಟಕದ ಮೂರು ನಾಲ್ಕು ಸಾವಿರದ ಸಾಲವನ್ನು ಹೊತ್ತು ನಮ್ಮ ಚಂದಾದಾರರು ನಮಗೆ ಕೊಡುವ ಚಂದಾದ್ರವ್ಯದ ಮಾನದಿಂದ ನೋಡಲಾಗಿ ಕರ್ನಾಟಕದೊಳಗಿನ ಬೇರೆ ಯಾವ ಪತ್ರಿಕೆಗಳಿಗಿಂತಲೂ ಹೆಚ್ಚು ಪ್ರತಿಫಲವನ್ನು ಅವರಿಗೆ ಒದಗಿಸಿಕೊಡುತ್ತಿರುವೆವೆಂಬುದನ್ನು ನಾವು ಒತ್ತಿ ಹೇಳಬೇಕಾಗಿಲ್ಲ. ಮಂಡಲದೊಳಗಿನ ಪ್ರತಿಯೊಬ್ಬ ಕೆಲಸಗಾರರು ತಮ್ಮ ತಮ್ಮ ಹೊಟ್ಟೆಕಟ್ಟಿ ಸಾಲದ ಶೂಲವನ್ನು ಕುತ್ತಿಗೆಯಿಂದ ಕ್ರಮವಾಗಿ ತೆಗೆದೊಗೆಯುವ ಕಾರ್ಯದಲ್ಲಿ ತೊಡಗಿರುವಾಗ್ಗೆಯೂ 'ಜಯಕರ್ನಾಟಕ'ವನ್ನು ಸರ್ವತೋಪರಿಯಾಗಿ ಪಂಡಿತಪಾಮರರಂಜಕವಾಗಿ ಮಾಡಲು ಅಹೋರಾತ್ರಿ ಹೆಣಗಿದ್ದಾರೆ. ಒಂದು ಕನ್ನಡ ಶಿಲ್ಪಿಗಳ ಚಿತ್ರಗಳೇ, ಒಂದು ಜನಪದ ಸಾಹಿತ್ಯವೇ, ಒಂದು ಕರ್ನಾಟಕದ ವಿದುಷಿಯರಿಂದ ಬರೆಸಿದ ವಿವಿಧ ಲೇಖನಗಳೇ, ಒಂದು ನವೀನ ಸಾಹಿತ್ಯ ವಿಮರ್ಶೆಗಳೇ, ಒಂದು ಇತಿಹಾಸಸಂಶೋಧನದ ಲೇಖಗಳೇ— ಒಂದೇ ಎರಡೇ— ಅನೇಕವಿಧದಿಂದ 'ಜಯಕರ್ನಾಟಕ'ವನ್ನು ಹಿಗ್ಗಿಸಿದ್ದೇವೆ. 'ಜಯಕರ್ನಾಟಕ'ವನ್ನು ಎಂಟು ಫಾರ್ಮಿನಿಂದ ಒಂಬತ್ತು ಒಂಬತ್ತುವರೆ ಫಾರ್ಮಿನವರೆಗೆ ಕಾಲಕಾಲಕ್ಕೆ ಬೆಳೆಸಿದ್ದೇವೆ; ಅನೇಕಾನೇಕ ಚಿತ್ರಗಳನ್ನು ಹಾಕಿದ್ದೇವೆ. ಇಷ್ಟಿದ್ದು ನಮ್ಮ ಕೊರತೆಗಳೇನೆಂಬುವನ್ನು ನಾವು ಪೂರಾ ಅರಿತಿರುವೆವು. ಆದರೆ ಎಲ್ಲ ಕೊರತೆಗಳಿಗೂ ದುಡ್ಡಿನ ಕೊರತೆಯೇ ಮುಖ್ಯವಾದ ಕಾರಣವೆಂಬುದನ್ನು ನಮ್ಮ ಚಂದಾದಾರರೂ ಸಹಾಯಕರೂ ಅರಿತು ಎಂಥ ಕಷ್ಟಗಳಿದ್ದರೂ ಈಗಿದ್ದ ಚಂದಾದಾರರು ಒಬ್ಬರೂ ಬಿಡದೆ, ಹೆಚ್ಚು ಜನರನ್ನು ಕೂಡಿಸಿಕೊಡಬೇಕೆಂದು ಹೇಳುವ ಅಧಿಕಾರವು ನಮಗಿದೆಯೆಂದು ನಾವು ಭಾವಿಸಿದ್ದೇವೆ.

ನೂರು ರೂಪಾಯಿ ಕೊಟ್ಟು ಆಜೀವ ಚಂದಾದಾರರಾಗುವ ನೂರು ಇನ್ನೂರು ಜನರು ಇಡೀ ಕರ್ನಾಟಕದಲ್ಲಿ ಸಿಗಲಾರರೇ? ಮಂಡಲವು ವ್ಯಕ್ತಿಗಳ ಲಾಭಕ್ಕೆ ಹೊರಟಿಲ್ಲ. ಸಾಲಕ್ಕೆ ವ್ಯಕ್ತಿಗಳು ಹೊಣೆಯಾಗಿ ನಿಂತು ಲಾಭವಾದರೆ ಮಂಡಲಕ್ಕಿದೆ ಎಂಬ ಭಾವದಿಂದ ಮಂಡಲದ ಸದಸ್ಯರು ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಇಂಥ ಸಾಹಿತ್ಯ ಸಂಸ್ಥೆಯು ಕರ್ನಾಟಕದಲ್ಲಿ ಇದೊಂದೇ ಎಂಬುದನ್ನು ಅರಿತು ನಾ ಮುಂದೆ ನೀ ಮುಂದೆ ಎಂದು ನೂರು ರೂಪಾಯಿ ಕೊಡುವ ಆಜೀವ ಚಂದಾದಾರರು ಬರುವರೆಂದು ನಂಬಿದ್ದೇವೆ. ಈಗಾಗಲೆ ತಾವಾಗಿಯೆ ಆಜೀವ ಚಂದಾದಾರರಾದ ಗುಪ್ತದಾನಿಗಳಿಗೆ ನಮ್ಮ ವಂದನೆಗಳು.

ನಮ್ಮ ಈ ಪಾಡಿನಲ್ಲಿ ಸುಖದ ಅಂಶವೂ ಇದೆ. ಏಳು ನೂರರಿಂದ ಸಾವಿರಕ್ಕೆ ಚಂದಾದಾರರ ಸಂಖ್ಯೆಯು ಏರಲಿದೆ. ಸಾಲವಿರದಿದ್ದರೆ ಸಾಮಾನ್ಯ ಜೀವನಕ್ಕೆ ಇದು ಸಾಕಿದ್ದಿತು. ಜಯಕರ್ನಾಟಕ ಮಂಡಲವು ಚಿರಸ್ಥಾಯಿಯಾದ ಸಾರ್ವಜನಿಕ ಸಂಸ್ಥೆಯಾಗಿ ಕರ್ನಾಟಕದ ಸಾಹಿತ್ಯ ಸಂಸ್ಕೃತಿಗಳ ಪೋಷಣೆ ಮಾಡಿ ಜೀರ್ವರಿಸು ಬಾಳಬೇಕಾದರೆ ಏನಿಲ್ಲೆಂದರೂ ಅದರ ಪ್ರತ್ಯೇಕ ಕಾರ್ಯಾಲಯವೂ ಪ್ರತ್ಯೇಕ ಮುದ್ರಣಾಲಯವೂ ಬೇಕು. ಧನಬಲದಷ್ಟೆ ಜನಬಲವೂ ಬೇಕು. ನಮ್ಮ ಅನೇಕಾನೇಕ ಗೆಳೆಯರು ಮಿತ್ರರು ದೇಶಬಾಂಧವರು ಸಾಹಿತ್ಯ ರಸಿಕರು ಸಾವಿರಾರು ಕೈಗಳಿಂತ ನಮಗೆ ಸಹಾಯಮಾಡುತ್ತಲಿರುವರು ಎಂಬೆ ಈ ಕಾರ್ಯವು ಹೀಗೆ ಸಾಗಿದೆ. ಅವರ ಉಪಕಾರವನ್ನುಚ್ಚರಿಸಲು ನಮಗೆ ಸಾವಿರ ಬಾಯಿಯಿಲ್ಲ. ಮುದ್ರಣಾಲಯದವರ ದಕ್ಷತೆ, ಚಿತ್ರಪಡಿಯಚ್ಚಿನವರ ಜಾಗರೂಕತೆ, ಚಿತ್ರಗಳನ್ನು ಕಳುಹುವರ ಸ್ನೇಹಭಾವ, ಲೇಖಕರ ಆತ್ಮೀಯತೆ, ಚಂದಾದಾರರ ಕ್ಷಮಾಶೀಲತೆ ಇವೆಲ್ಲವುಗಳು ನಮ್ಮ 'ಆನೆ'ಯ ಕೆಲಸವನ್ನು ಆಟವನ್ನಾಗಿ ಮಾಡಿವೆ.

ಮುಂದಿನ ವರ್ಷ ಇದಕ್ಕೂ ಹೆಚ್ಚು ಕೆಲಸಮಾಡಬೇಕೆಂಬ ಹಂಬಲವು ನಮಗಿದೆ. ಜಯಕರ್ನಾಟಕ ಗ್ರಂಥಮಾಲೆಯ ಮೊದಲನೆಯ ಪುಸ್ತಕವಾದ 'ಹಕ್ಕಿ ಹಾರುತಿದೆ' ಎಂಬ ಕವಿತಾಗುಚ್ಛವು ಪ್ರಕಟವಾಗಿ ರಸಿಕರ ಮನ್ನಣೆಯನ್ನು ಪಡೆದಿದೆ. ಇನ್ನು ಇದೇ ಗ್ರಂಥಮಾಲೆಯಲ್ಲಿ ಕಥೆ, ಕಾದಂಬರಿ, ನಾಟಕ, ಪ್ರಹಸನ, ಹರಟೆ, ನಿಬಂಧ, ಚರಿತ್ರೆ, ಕಾವ್ಯಗಳನ್ನು ಪ್ರಸಿದ್ಧಪಡಿಸಿ ಸುಲಭ ಕ್ರಯಕ್ಕೆ ಕೊಡಬೇಕೆಂದು ಗೊತ್ತು ಮಾಡಿದ್ದೇವೆ. ಅದಕ್ಕಾಗಿ ವಾಚನಾಲಯದವರೂ, ಸಾಲೆಗಳವರೂ, ವಿದ್ಯಾರ್ಥಿಗಳೂ ಅದನ್ನು ಪೋಷಿಸಬೇಕು. ಜಯಕರ್ನಾಟಕದ ಚಂದಾದಾರರಿಗೂ ಸಹಾಯಕರಿಗೂ ಬೇರೆಯವರಿಗಿಂತ ಅನುಕೂಲ ದರದಿಂದ ಪುಸ್ತಕಗಳನ್ನು ಕೊಡಲಾಗುವದು. ಅದರ ಪ್ರಕಟನೆಯನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ನೋಡಬೇಕು.

ಕನ್ನಡಿಗರ ಅಂತಃಕರಣವೆ ನಮಗೆ ಪ್ರತ್ಯಕ್ಷ ದೈವತವು. ಆ ಅಂತರ್ಯಾಮಿಯೆ ನಮಗೆ ಸೂತ್ರಧಾರಕನು. ಅವನ ಮೆಚ್ಚಿಗೆ ಪಡೆಯುವದೇ ನಮ್ಮ ಮಾರ್ಗ. ಭಕ್ತನ ಕಾರ್ಯವು ನಮ್ಮಿಂದಾದರೆ ಭಗವಂತನ ಕಾರ್ಯವು ಅವನಿಂದಾಗುವದೆಂಬ ಶ್ರದ್ಧೆಯಿಂದಲೇ ಕೆಲಸದ ಜಟ್ಟವನ್ನು ಹೊತ್ತಿದ್ದೇವೆ. 'ಜಯಕರ್ನಾಟಕ' ವೆಂಬ ಜಪವೆ ಆ ಭಾರವನ್ನು ಹಗರು ಮಾಡಲು ಸಮರ್ಥವಿದೆ. ಏಕೆಂದರೆ ಆ ಕೂಗು ನಮ್ಮದಲ್ಲ ನಿಮ್ಮದಲ್ಲ ಒಬ್ಬಿಬ್ಬರದಲ್ಲ. ಕನ್ನಡಿಗರು ಕನ್ನಡದಿಂದ ಕರ್ನಾಟಕಕ್ಕಾಗಿ ನಡಿಸಿರುವ ರಾಷ್ಟ್ರಯಜ್ಞದೊಳಗಿನ ಕೊನೆ ಮೊದಲಿನ ಮಂತ್ರವದು. ಜಯಕರ್ನಾಟಕ !

ದತ್ತಾತ್ರೇಯ ಬೇಂದ್ರೆ
ಬೆಳಗಾಂವಿ ರಾಮಚಂದ್ರ

ಚಿತ್ರಪರಿಚಯ

ಈ ಸಲದ ಮುಖಚಿತ್ರವನ್ನು ಬರೆದ ಶ್ರೀಮತಿ ಸಾವಿತ್ರಿದೇವಿಯವರು ಬೆಂಗಳೂರಿನ ಕನ್ನಡತಿಯರು. ಶಾಂತಿನಿಕೇತನದಲ್ಲಿ ಚಿತ್ರಕಲಾಭ್ಯಾಸವನ್ನಲ್ಲದೆ ಸಂಗೀತ ಸಾಹಿತ್ಯ ಮೊದಲಾದ ಉಳಿದ ವಿಷಯಗಳನ್ನೂ ವ್ಯಾಸಂಗಿಸುತ್ತಿರುವರು. ಇವರ ಕಲಾಗುರುಗಳಾದ ಶ್ರೀಮಾನ್ ನಂದಲಾಲ ಬಸುಗಳವರು ಈ ಚಿತ್ರವನ್ನು ಜಯಕರ್ನಾಟಕಕ್ಕಾಗಿ ಆರಿಸಿ ಕಳುಹಿದುದಕ್ಕಾಗಿ ಮಂಡಲವು ಅವರಿಗೆ ಉಪಕೃತವಾಗಿದೆ.

ಈ ಚಿತ್ರದಲ್ಲಿ ನಿರೀಕ್ಷಿಸಬೇಕಾದ ಅಂಶವೆಂದರೆ **ಬಣ್ಣಗಾರಿಕೆಯ** ಮತ್ತು **ಸನ್ನಿವೇಶದ** ವಿಶೇಷ **ಸರಲತೆ.** ಸರಲತೆ ಎನ್ನುವುದಕ್ಕಿಂತ **ನಿರಲಂಕಾರತೆ** ಎಂದರೆ ಚೆನ್ನು. ಒಮ್ಮೆ ಬಣ್ಣದಲ್ಲಿ ಅದ್ದಿದ ಕುಂಚದಿಂದ ಇಡಿ ಚಿತ್ರವನ್ನು ಮುಗಿಸಿದಂತಿದೆ. ಮರಗಳು, ಮನೆಗಳು, ಮರಡಿಗಳು, ಮೋಡಗಳು—ಎಲ್ಲವುಗಳೂ ಬಣ್ಣದ ತೊಟ್ಟು ಬಿದ್ದು ತಾವೇ ರೂಪುಗೊಂಡಂತಿವೆ.

ಸನ್ನಿವೇಶವೂ ಅತಿ ಸರಲ. ಬಟ್ಟಬೈಲು. ನಡುವೆ ಒಂದು ಸರಸ್ಸು. ಹಸಿ ನೋಡಿ ಸ್ವಲ್ಪ ಹಸಿರು—ನಾಲ್ಕಾರು ಗಿಡಗಂಟೆ. ಹತ್ತಿರ ನೀರಿಂದು ನಾಲ್ಕಾರು ಮನೆಗಳು. ಉಳಿದುದೆಲ್ಲಾ ಬಣಬಣ......ಕಲೆಯಲ್ಲಿ ಈ ತೆರದ ಸರಲತೆಯನ್ನು ಸಾಧಿಸುವುದೇ ಬಲು ಬಿಗಿ.

ಶ್ರೀಮಾನ್ ಆಲೂರ ವೆಂಕಟರಾಯರ ಸ್ವಭಾವಚಿತ್ರ

(ನಿರೀಕ್ಷಕನಿಂದ)

ಶ್ರೀ. ಆಲೂರರವರು ಈ ಸಲದ ಸಾಹಿತ್ಯಸಂಮೇಲನದ ಅಧ್ಯಕ್ಷರು. ವಿಲ್ ಸ್ಪೆನ್ಸರರ ತತ್ವಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸುವದರಿಂದ ಇವರ ವಾಙ್ಮಯಸೇವೆಗೆ ಪ್ರಾರಂಭ ವಾಯಿತು. ಆಗ್ಗೆ ಇವರಿಗೆ ಕನ್ನಡ ಸಾಹಿತ್ಯದ ಪರಿಚಯವೇ ಇಲ್ಲ. ಉತ್ಕಟವಾದ ನೈಜ ಪ್ರೀತಿಯು ಎಷ್ಟು ಅಮೋಘವಾಗಿ ಕಾರ್ಯವನ್ನು ಮಾಡಿಸಬಲ್ಲದೆಂಬುದಕ್ಕೆ ಇವರು ನಿದರ್ಶನರಾಗಿದ್ದಾರೆ. ಇವರ ರಾಜಕಾರಣವೆ ಇವರಿಗೆ ಕರ್ನಾಟಕದಲ್ಲಿ ದೃಷ್ಟಿಯನ್ನು ನಾಟಿಸಿತು. ಅಂತೆಯೆ ಇವರು ಗ್ರಂಥಕರ್ತನೆಂಬ ಕೀರ್ತಿಯ ರಾಜಮಾರ್ಗವನ್ನು ಬಿಟ್ಟು, 'ವಿದ್ಯಾರಣ್ಯ' 'ಭ್ರಮ ನಿರಸನ'ದಂಥ ಹತ್ತಿಪ್ಪತ್ತು ಪುಟದ ಸಣ್ಣ ಪುಸ್ತಕಗಳನ್ನು ಬರೆಯಲು ಧೈರ್ಯ ಮಾಡಿದರು. ಅವುಗಳ ಮಹತ್ವವು ಅವುಗಳ ಪರಿಣಾಮದಲ್ಲಿದೆ. ಕನ್ನಡಿಗರ ಭ್ರಮನಿರಸನವಾಗಿ ಅವರಿಗೆ ವಿದ್ಯಾರಣ್ಯರ ದರ್ಶನವಾಯಿತು. ಇದೇನು ಸಣ್ಣ ಕೆಲಸವಲ್ಲ. ಕರ್ನಾಟಕದ 'ಗತವೈಭವ'ವನ್ನು ಇವರು ಕಂಡಿದ್ದೂ ಕನ್ನಡಿಗರಿಗೆ ತೋರಿಸಿದ್ದೂ ತದನಂತರದಲ್ಲಿಯೆ ಇದರಿಂದುಂಟಾದ ಜಾಗೃತಿಯೇ ' ಜಯ ಕರ್ನಾಟಕದ ' ಹಾದಿಯನ್ನು ಇವರಿಗೆ ತೋರಿಸಿತು. ಜಯ ಕರ್ನಾಟಕದಿಂದ ' ನವಜೀವನ ಗ್ರಂಥ ' ಮಾಲೆಗೆ ಇವರು ಹಾರಿದುದು ಹಿರಿದಲ್ಲ. ಇವರ ಗತಿಯು ಗಾಳಿಯಂತಿದೆ. ಬಂದರು ಬಂದರು ಎಂಬಷ್ಟರಲ್ಲಿ ಇವರು ಮುಂದೆ ಹೋಗಿಬಿಡುವರು. ಕರ್ನಾಟಕದ ಪ್ರಾಣೋಪಾಸಕರಾದ ಇವರು ವಾಯುಸಂಚಲನಚಂಚಲರಾಗಿ ತೋರುವದು ಸೋಜಿಗವಲ್ಲ.

ಕರ್ನಾಟಕದ ಹಿರಿಯರಲ್ಲಿ ಆಲೂರರವರ ಹೆಸರು ಅದ್ವಿತೀಯವಾಗಿದೆ. ಕಣ್ಣಲ್ಲಿ ತುಂಬುವ ಆಕೃತಿವಿಶೇಷವಾಗಲಿ, ಮನಸ್ಸಿನಲ್ಲಿ ತುಂಬುವ ಮಾತುಗಾರಿಕೆಯಾಗಲಿ ಇವರದಲ್ಲ. ರಾಜಕೀಯ ರಣಾಂಗಣದಲ್ಲಿಯೂ ಇತಿಹಾಸದ ಕ್ಷೇತ್ರದಲ್ಲಿಯೂ ಸಾಹಿತ್ಯಲೋಕದಲ್ಲಿಯೂ ಇವರಿಗೂ ಮಿಗಿಲಾಗಿ ಕೆಲಸ ಮಾಡುವವರಿದ್ದಾರೆ; ಕೈಕೊಂಡ ಕಾರ್ಯಕ್ಕೆ ಧನವನ್ನೂ ಕಾಲವನ್ನೂ ಇವರಿಗಿಂತ ಹೆಚ್ಚು ವೆಚ್ಚ ಮಾಡಿದವರು ಇಲ್ಲವೆಂದಲ್ಲ. ತಮ್ಮ ಆಚಾರದ ಬಲದಿಂದಲೂ ವಿಚಾರದ ತೇಜದಿಂದಲೂ ಇವರಿಗಿಂತಲೂ ಆದರವನ್ನುಂಟುಮಾಡುವವರೂ, ಜಾತಿಯ ಮೂಲಕ ದೊಡ್ಡ ಮುಂದಾಳೆನಿಸಿಕೊಂಡವರೂ ಪದವಿಯ ಮೂಲಕ ಮಹಾಗೌರವಸ್ಥರೆನಿಸಿಕೊಂಡವರೂ ಉಂಟು. ಆಲೂರರಲ್ಲಿ ಸಂಘಟನೆಯ ಶಕ್ತಿಯಾಗಲಿ, ಚಳವಳಿಯ ವೃತ್ತಿಯಾಗಲಿ, ಜನಸಂದೋಹನಾಯಕನ ಸ್ವಭಾವವಾಗಲಿ– ಯಾವುದೂ ಇಲ್ಲ. ಏಕಮುಖವಾಗಿಯೂ ಬಹುಮುಖವಾಗಿಯೂ ತಾತ್ಕಾಲಿಕ ತೀವ್ರಾವೇಶದಿಂದಲೂ, ಏಕನಿಷ್ಠೆಯಿಂದಲೂ ಕಾರ್ಯ ಮಾಡುವ ಹಲ ಕೆಲವರು ಇವರಿಗಿಂತಲೂ ಹೆಸರಾಗಿದ್ದಾರೆ. ಆದರೆ ಬಹು ಮುಖವಾಗಿಯೂ ಏಕನಿಷ್ಠೆಯಿಂದಲೂ, ಅನನ್ಯಬುದ್ಧಿಯಿಂದಲೂ, ಸತತ ಅನುಸಂಧಾನದಿಂದಲೂ ಕರ್ನಾಟಕದ ಸಲುವಾಗಿ ವಿಚಾರ ಮಾಡುವವರೂ ತದನುಸಾರವಾಗಿಯೆ ಆಚರಿಸಲು ಪ್ರಯತ್ನಿಸುವವರೂ ಹಿರಿಯರಾದ ಕನ್ನಡಿಗರಲ್ಲಿ ಇನ್ನೂ ಇವರೊಬ್ಬರೇ ! ಅದೇ ಇವರ ತಪಸ್ಸು. ಇವರ ಅದ್ವಿತೀಯವಾದ ಹೆಸರು ಅದರ ಫಲವು.

ಆಲೂರರವರು ಬಾಯಿ ಹಾಕದ ಮಾತಿಲ್ಲ. ಕೈ ಹಾಕದ ಕೆಲಸವಿಲ್ಲ. ಇವರಿಗೆ ತನ್ನದೆನ್ನುವ ಕಾರ್ಯವಿಲ್ಲ. ಕರ್ನಾಟಕದ ಸರ್ವಾಂಗ ಪೋಷಣೆಗೆ ಬೇಕಾಗುವ ಎಲ್ಲ ಮಾತು ಎಲ್ಲ ಕೆಲಸಗಳೂ ಇವರಿಗೆ ಬೇಕಾದವುಗಳೆ. ಎಲ್ಲವನ್ನೂ ಇವರು ಮಾಡಿ ಮಾಡಿಸಿರುವರು. ಆಡಿ ಆಡಿಸಿರುವರು. ಕರ್ನಾಟಕದ ಕುಲಪುರೋಹಿತರೆಂದು ಒಬ್ಬರು ಇವರಿಗೆ ಪರಿಹಾಸದಲ್ಲಾಡಿದುದು ಈಗ ಪರಮಾರ್ಥವಾಗಿದೆ. ಪುರೋಹಿತರಂತೆಯೆ ಇವರೂ ಕೆಲಸವನ್ನು ಪ್ರಾರಂಭ ಮಾಡಿಸಿ ಬೇರೆ ಯಜಮಾನರಿಗೆ ಕೆಲಸ ಬಿಟ್ಟು ಕೊಡುವರು. ಇವರ ಕಾರ್ಯಪ್ರವೃತ್ತಿಯೊಡನೊಡನೆಯೆ ನಿವೃತ್ತಿಯ ಮಾತೂ ಪ್ರಾರಂಭವಾಗುವವು. ನಾಲ್ಕು ಜನರು ಒಂದು ಕಡೆಗೆ ಕೂಡಿದ ಕೂಡಲೆ ಇವರು ಮತ್ತೊಂದು ಕಡೆಗೆದ್ದು ಹೋಗುವರು. ಇತಿಹಾಸ ಮತ್ತು ಸಾಹಿತ್ಯ ಇವುಗಳು ಜೀವನಮಂಡಲದ ದಕ್ಷಿಣೋತ್ತರ ಧ್ರುವಗಳು. ರಾಜಕಾರಣ ಮತ್ತು ಪತ್ರಿಕಾಸಂಚಾಲನ ಇವುಗಳು ಅವುಗಳ ಪ್ರಯೋಗಶಾಲೆಗಳು. ಈ ಪ್ರಯೋಗಶಾಲೆಯಲ್ಲಿ ಸಿದ್ಧ

ಪಡಿಸಿದ ರಸಾಯನವನ್ನು ಇವರು ತಮ್ಮ ಕರ್ನಾಟಕೋದ್ಯಮದಲ್ಲಿ ಕಾಲಕಾಲಕ್ಕೆ ಉಪಯೋಗಿಸಿರುವರು. ಈ ಪಾಠವನ್ನವರು ಲೋಕಮಾನ್ಯರಿಂದ ಕಲಿತರು. ಯಾವುದಕ್ಕೂ ಧರ್ಮವೂ ತತ್ವಜ್ಞಾನವೂ ಜೀವಾಳವೆಂಬುದನ್ನು ಅರವಿಂದರಿಂದ ತಿಳಿದುಕೊಂಡು ರಾಷ್ಟ್ರಜೀವನವನ್ನು ಯಾವಾಗಲೂ ಇವರು ತತ್ವಶಾಸ್ತ್ರದ ಪರಿಭಾಷೆಯಲ್ಲಿಯೇ ಹೇಳುವರು. ಲೋಕಮಾನ್ಯರೂ ಅರವಿಂದರೂ ಅದ್ವೈತ ಸಿದ್ಧಾಂತಗಳನ್ನು ರಾಷ್ಟ್ರೀಯತ್ವದಲ್ಲಿ ಅನ್ವಯಿಸಿ ತೋರಿಸುವಂತೆ ಇವರು ತಮ್ಮ ದ್ವೈತಸಿದ್ಧಾಂತಗಳನ್ನೂ ಆ ವ್ಯಾಪಕಾರ್ಥದಲ್ಲಿ ಅನ್ವಯಿಸುವರು. ಅಂತೆಯೇ ಇವರು ಕರ್ನಾಟಕಾಂತರ್ಗತ ಭಾರತಮಾತೆಯನ್ನು ಪೂಜಿಸುವರು. ಇವರ ದೇಶಭಕ್ತಿಯು ರಾಷ್ಟ್ರಭಕ್ತಿಯ ಉಪಸಿದ್ಧಾಂತವು.

ಆದರೆ, ಇವರಲ್ಲಿ ಬುದ್ಧಿಯ ಏಕಾಗ್ರವೃತ್ತಿಗಿಂತ ವ್ಯಾಪಕವೃತ್ತಿಯು ಹೆಚ್ಚು; ಮೂರ್ತಿಪೂಜೆಗಿಂತ ತತ್ವ ಪೂಜೆಯು ಅಧಿಕ; ಆಚಾರನಿಷ್ಠೆಗಿಂತ ವಿಚಾರನಿಷ್ಠೆಯು ಬಹಳ. ರಾಷ್ಟ್ರೀಯದೃಷ್ಟಿ ಹೆಚ್ಚು; ರಾಷ್ಟ್ರದರ್ಶನ ಕಡಿಮೆ. ಜನೋದ್ದೀಪನಶಕ್ತಿ ಹೆಚ್ಚು; ಜನನಿರ್ವಹಣಶಕ್ತಿ ಕಡಿಮೆ. ಸಣ್ಣಪುಟ್ಟ ಕೊರತೆಯಿಂದ ಅತೃಪ್ತಿ ಹೆಚ್ಚು. ಅಲ್ಪ ಕಾರ್ಯದಿಂದ ಸಂತುಷ್ಟಿ ಕಡಿಮೆ. ವಿಚಾರಸ್ವಾತಂತ್ರ್ಯದ ಆಡಂಬರಕ್ಕಿಂತ ನಾವೀನ್ಯಪ್ರೀತಿ ಹೆಚ್ಚು. ಪ್ರತಿಯೊಂದು ಮಾತಿನಲ್ಲಿಯೂ ಇವರದ್ದೊಂದು ಪ್ರತ್ಯೇಕಾಭಿಪ್ರಾಯವು ಇದ್ದೇ ಇರುವುದು. ಯಾರು ಯಾವ ಮಾತಿನಲ್ಲಿ ಇವರ ಸಲಹೆ ಕೇಳಿದರೂ ನವೀನವಾದುದೊಂದನ್ನು ಇವರು ಹೇಳೇ ಹೇಳುವರು. ಇವರ ವಿಚಾರದಲ್ಲಿ ಪ್ರಗತಿ ಹೆಚ್ಚು. ಇವರು ನೂತನಪಕ್ಷಗಳನ್ನು ನಿರ್ಮಿಸಿದರೂ ಪಕ್ಷಪಾತ ಕಡಿಮೆ. ಇವರು ಎಲ್ಲ ವಿಚಾರಗಳಿಗೂ ಬೆಂಬಲ ಕೊಟ್ಟರೂ ಯಾವ ವಿಚಾರಕ್ಕೂ ಮುಂಬಲ ಕೊಡುವದು ಕಡಿಮೆ. ಇವರು ಜನರ ನಾಯಕರಾಗದೆ ನೇತ್ರವಾಗಿದ್ದಾರೆ, ಮುಂದಾಳಾಗದೆ ಪ್ರತಿನಿಧಿಗಳಾಗಿದ್ದಾರೆ.

ಗ್ರೀಕರಲ್ಲಿ ಬೌದ್ಧಿಕಸ್ವಾತಂತ್ರ್ಯ

ಲೇಖಕರು:— ಶ್ರೀ. ನಾರಾಯಣಶರ್ಮ, ಬೆಳಗಾಂವಿ

ಪರಕೀಯರ ಆಳಿಕೆ ನಡೆಯದಿರುವದು, ಮತ್ತು ವ್ಯಕ್ತಿಯ ಸ್ವಂತ ಕಾರ್ಯಭಾರದೊಳಗೆ ಸರಕಾರದವರು ಕೈಹಾಕದಿರುವದು ಇಷ್ಟಕ್ಕೇ ಅಥೀನಿಯರು ಸ್ವಾತಂತ್ರ್ಯವೆಂದರ್ಥಮಾಡುತ್ತಿರಲಿಲ್ಲ. ಇವೆರಡಕ್ಕಿಂತ ಉದಾತ್ತವೂ ಅಮೂರ್ತವೂ ಆದದ್ದೊಂದು ಸ್ವಾತಂತ್ರ್ಯವು ಅವರ ಕಣ್ಮುಂದೆ ನಲಿದಾಡುತ್ತಿತ್ತು; ಅದನ್ನೇ ಅವರು ತಮ್ಮ ಆದರ್ಶವನ್ನಾಗಿ ಇಟ್ಟುಕೊಂಡಿದ್ದರು; ಮ್ಯಾಥ್ಯೂ ಅರನಾಲ್ಡರು ಅಂದಿರುವಂತೆ, ನಮಗೆ ಪ್ರಾಪ್ತವಾಗಿರುವ ಸ್ವಾತಂತ್ರ್ಯದಿಂದ ಹೇಗೆ ಪ್ರಯೋಜನ ಪಡೆಯಬೇಕೆಂಬುದು ಯಾರಿಗೆ ಹೊಳೆಯುವದಿಲ್ಲವೋ ಅವರಿಗೆ ಸ್ವಾತಂತ್ರ್ಯವಿದ್ದರೂ ಅಷ್ಟೇ! ಇಲ್ಲದಿದ್ದರೂ ಅಷ್ಟೇ! ಇಷ್ಟದಂತೆ ನಡೆಯಲಿಕ್ಕೆ ಯಾರದು ಅಡ್ಡಿಯೇದಿದ್ದರೂ ಯಾವ ಮಾರ್ಗದಿಂದ ನಡೆದರೆ, ಹಿತವಾಗುವದೆಂಬುದನ್ನು ತಿಳಿದು ನಡೆಯುವ ಬುದ್ಧಿಯಿದ್ದರಲ್ಲವೇ ಅದರ ಪ್ರಯೋಜನವು! ಆದ್ದರಿಂದ **ಸ್ವಾತಂತ್ರ್ಯವೆಂಬುದು ಸಾಧನವಷ್ಟೇ ಹೊರತು ಸಾಧ್ಯವಲ್ಲ;** ಇತಿಹಾಸದ ಓಲೆಗಳನ್ನು ತಿರುವಿಹಾಕಿದರೆ, ಸ್ವಾತಂತ್ರ್ಯಕ್ಕಾಗಿ ಹೆಣಗಾಡಿ ಅವರಲ್ಲಿ ನಾನಾ ಎಂಬುವಂಥ ಜನಾಂಗರತ್ನಗಳನ್ನು ಕಳೆದುಕೊಂಡು ಸ್ವಾತಂತ್ರ್ಯ ಪಡೆದವರೇ, ಸ್ವಾತಂತ್ರ್ಯವು ಕೈಸೇರಿದ ಮೇಲೆ ಅದನ್ನು ಉಪಯೋಗಿಸುವವರಲ್ಲಿ ಬಹು ಹೇಡಿತನವನ್ನು ತೋರಿಸಿದ್ದು ಕಂಡುಬರುತ್ತದೆ; ಹಾಗೆ ಅಥೀನಿಯರ ಸ್ವಾತಂತ್ರ್ಯ ಕಲ್ಪನೆಯು ಬರಿ ಬಂಜೆ ಭಾವನೆಯಾಗಿರಲಿಲ್ಲ; ಅದು ಅಥೀನಿಯರಲ್ಲಿ ಮೊಳೆಕೆಯೊಡೆಯುವದೊಂದೆ ತಡ, ವಿದ್ಯೆ ಕಲೆಗಳ ವಿಷಯವಾಗಿ ಇನ್ನೂವರೆಗೆ ಎಲ್ಲಿಯು ಕಾಣಿಸದಂಥ ಅಪೂರ್ವ ಕಲಾಭಿರುಚಿಯನ್ನುಂಟುಮಾಡಿ ತಮ್ಮ ದೀಪ್ತಿಯಿಂದ ಜನಾಂಗಗಳ ಕಣ್ಣು ಮಂಜುಗೊಳಿಸಿದ್ದು ಈಗ್ಯೂ ಇತಿಹಾಸದಲ್ಲಿ ಅಮರವಾಗಿದೆ; ಮತ್ತು ಅದಕ್ಕಿಂತ ಮುಂದೆಹೋಗುವ ಎದೆಗಾರಿಕೆಯು ಈಗಿನ ನಾಗರೀಕತೆಯ ಶತಮಾನದಲ್ಲಿ ಕೂಡ ಎಲ್ಲಿಯೂ ಕೇಳಬರುವದಿಲ್ಲ. ಪೆರಿಕ್ಲೀಜನು ತನ್ನ ಪ್ರಖ್ಯಾತಿಗೊಂಡ ಭಾಷಣದೊಳಗೆ ಅನ್ನುವದೇನಂದರೆ, 'ನಾವು ಕಲಾಕೌಶಲ್ಯಗಳನ್ನು ಪ್ರೋತ್ಸಾಹಿಸುತ್ತೇವೆ; ಆದರೆ ಮರ್ಯಾದೆ

ಮೀರಿ ನಡೆಯುವದಿಲ್ಲ; ವಿದ್ಯೆಯನ್ನು ಕಲಿಸಿ ಪ್ರೋತ್ಸಾಹಿಸುವಾಗಲೂ ನಮ್ಮ ಪೌರುಷಕ್ಕೆ ಹಾನಿ ತಟ್ಟದಂತೆ ನಾವು ಯಾವಾಗಲೂ ಜಾಗರೂಕರಾಗಿರುತ್ತೇವೆ.' ಮೇಲಿನ ಗೂಢವಾಕ್ಯದಿಂದ ಈಗಣ ಆಧುನಿಕ ಸುಧಾರಣೆಯ ಭಕ್ತರು ಬೇಕಾದಷ್ಟು ಕಲಿತುಕೊಳ್ಳಬಹುದು; ಅಥಿನಿಯರ ನಾಗರೀಕತೆಯು ಬರಿಯ ಪೊಳ್ಳು ಶಸ್ತ್ರಾಸ್ತ್ರಗಳನ್ನೇ ಅವಲಂಬಿಸಿರಲಿಲ್ಲ. ಶಸ್ತ್ರಾಸ್ತ್ರ, ದಂಡುದಳಗಳಲ್ಲದೆ ಮತ್ತೊಂದು ಯಾವುದೋ ವಿಶೇಷವಾಗಿ ಎಲ್ಲವನ್ನು ಆಳುವಂಥ ಶಕ್ತಿಯು ತಮ್ಮ ಜನಾಂಗದಲ್ಲಿ ವಾಸವಾಗಿರುವದೆಂದು ಅವರ ದೃಢವಾದ ಮನವರಿಕೆಯಿತ್ತು. ಚಿಕ್ಕ ಜನಾಂಗಗಳನ್ನು ತಮ್ಮ ದಂಡಿನ ಬಲದಿಂದಲೂ ವಿನಾಶಕವಾದ ಶಸ್ತ್ರಾಸ್ತ್ರಗಳ ಬಲದಿಂದಲೂ ಮಣ್ಣುಗಾಣಿಸುವದು ನಾಗರೀಕತೆಯೆಂದು ಇವರೆಂದೂ ಬಗೆಯಲಿಲ್ಲ; ದುರ್ದೈವವಶಾತ್, ಅಥೀನಿಯನ್ನರ ಸ್ವಾತಂತ್ರ್ಯವು ಶಿರಾಳಶೆಟ್ಟಿಯ ಆಳಿಕೆಯಂತೆ ಕಾಲುಗಳಿಗೆಯ ರಾಜ್ಯವಾದರೂ, ಅಷ್ಟರಲ್ಲಿ ಅವರು ಮನಸ್ಸು, ಬುದ್ಧಿಗಳೆಲ್ಲವನ್ನು ವಿದ್ಯೆಕಲೆಗಳ ಅಭಿವೃದ್ಧಿಗಾಗಿಯೇ ಸೂರೆಗೊಂಡು ತನ್ಮಯರಾಗಿಹೋಗಿದ್ದರು, ಸಾಲಾಮೀಸದ ಯುದ್ಧದೊಳಗೆ ಗ್ರೀಕರಿಗಾದ ಅನ್ಯಾದೃಶವಾದ ಗೆಲುವಿನಿಂದ ಅವರ ಸ್ವಾತಂತ್ರ್ಯದ ಬೇರು ಹೆಚ್ಚು ಗಟ್ಟಿಮುಟ್ಟಿ ಆಯಿತು; ಆದರೆ ಈ ಸಂದರ್ಭದಲ್ಲಿ ವಾಚಕರಿಗೆ ಹೇಳಬೇಕಾದ ಸ್ಮರಣೀಯವಾದ ಸಂಗತಿಯೊಂದರಿಂದ ಅತ್ಯಂತಾಶ್ಚರ್ಯವಾಗುವದು; ಅದೇನಂದರೆ, ಅಥೇನ್ಸದ ವಿಖ್ಯಾತ ನಾಟಕಕಾರರಾದ ಅಸ್ಕೈಲೀಜ, ಸೋಫೊಕ್ಲೀಜ, ಯುರಿಪಿಡೀಜ ಎಂಬ ಮೂವರೂ ಈ ಯುದ್ಧದೊಳಗೆ ಮನಸ್ಸಿನಿಂದ ಮೈಗೊಂಡಿದ್ದರೆಂಬುದೇ ! ಸ್ವತಂತ್ರವಾದ ಅಥೆನ್ಸದೊಳಗೆ ಸ್ವಚ್ಛಂದವಾಗಿ ಹರಿದಾಡುವ ಪ್ರತಿಭೆಗೆ ಹೇಗೆ ಸ್ವಾತಂತ್ರ್ಯವೂ ಅವಕಾಶವೂ ದೊರೆಯುತ್ತಿತ್ತೆಂಬುದು ಸ್ಫುಟವಾಗುತ್ತಿದೆ; ಅಥೇನ್ಸನೊಳಗೆ ವಿದ್ಯೆಕಲೆಗಳ ವಿಷಯದಲ್ಲಿ ಈ ತೆರನಾದ ಆಸ್ಥೆಯು ನಾಲ್ಕಾರು ಬಿಳೆ ಬಟ್ಟೆಗಳನ್ನುಡುವ ಜನರಲ್ಲಿಯೇ ಹುದುಗಿಕೊಂಡಿರದೆ, ಅದು ಇಡೀ ಜನಾಂಗದೊಳಗೇನೇ ಹರಡಿಕೊಂಡು ಹರಿದಾಡುತ್ತಿತ್ತು; ಪ್ಲೇಟೋ ಅಥವಾ ಝುನೋಫೋನ ಮೊದಲಾದವರ ಗ್ರಂಥದೊಳಗೆ ವಿಷಯಾಂತರಗಳನ್ನು ಕುರಿತು ದೃಗ್ಗೋಚರವಾಗುವ ಸಂವಾದಗಳೂ, ಅವುಗಳೊಳಗಿನ ಪಾತ್ರಗಳೂ ಬರಿಯ ಸುಶಿಕ್ಷಿತರೂ, ಸುಖವಸ್ತುಗಳೂ ಆಗಿರದೆ, ವರ್ತಕರೂ, ಶಿಲ್ಪಿಗರೂ, ಇದ್ದರೆಂಬುದರ ಮೇಲಿಂದ ಅಥೀನಿಯರ ನಾಗರೀಕತೆಯ ಬೇರುಗಳು ಎಷ್ಟು ಆಳವಾಗಿ ಬಿಟ್ಟುಕೊಂಡಿದ್ದವೆಂಬುದರ ಅನುಮಾನವಾಗುವಂತಿದೆ. ಅಥೀನಿಯರು ದೇವರು ತಮ್ಮ ಪಾಲಿಗೆ ಕೊಟ್ಟ ದೈವವನ್ನು ತಮ್ಮ ಬುದ್ಧಿ ಹರಿದ ಮಟ್ಟಿಗೆ ಪ್ರಯತ್ನಪೂರ್ವಕವಾಗಿ ಸರ್ವಾಂಗಮನೋಹರವೂ, ದೈವಿಕವೂ, ಆಗಿ ಮಾರ್ಪಡಿಸಲಿಕ್ಕೆ ಹೆಣಗಿದರು. ಮತ್ತು ಅದರೊಳಗೆ ಅವರಿಗೆ ಚೆನ್ನಾಗಿಯೇ ಜಯ ದೊರೆಯಿತು.

ರಾಜಕೀಯ ಸಮಾಚಾರ

(ಶ್ರೀ ಕುಡ್ವರವರು ಸಂಗ್ರಹಿಸಿದುದು)

ಗಾಂಧಿ ಸಂಸ್ಥೆ

ಅಮೇರಿಕದ ನ್ಯೂಯಾರ್ಕ ಪಟ್ಟಣದ ರೈನಕ್ಲಿಫ್ ಎಂಬಲ್ಲಿ ಜೋನ ಹೋಮ್ಸ್, ಸಂದರಲೇಂಡ್, ಪೋನ್ ಬ್ಲೋಮಬರ್ಗ, ಕೇದಾರ ನಾಥದಾಸ ಗುಪ್ತ ಮೊದಲಾದವರು ಗಾಂಧಿ ಸಂಸ್ಥೆಯನ್ನು ಸ್ಥಾಪಿಸಿರುವರು. ಅದರ ಮುಖ್ಯ ಆಫೀಸು ನ್ಯೂಯಾರ್ಕ ಪಟ್ಟಣದ 1286 Fifth Avenue ಎಂಬ ಮುಖ್ಯ ಮಾರ್ಗದಲ್ಲಿರುವದು. ನ್ಯೂಯಾರ್ಕ ಪಟ್ಟಣದ ೯೦ ಮೈಲು ದೂರದಲ್ಲಿ ಇದು ಇರುತ್ತದೆ. ಈ ಸಂಸ್ಥೆಯು ೪೦ ಎಕ್ರೆ ವಿಸ್ತೀರ್ಣವಾಗಿದ್ದು ೧೪ ಸಣ್ಣ ಮನೆ ಮತ್ತು ಒಂದು ದೊಡ್ಡ (mansion) ಮಹಾಲು ಇರುವ ಸ್ಥಳದಲ್ಲಿರುವದು. ೧೯೧೪ರಲ್ಲಿ ಗಾಂಧಿಯವರು ಸ್ಥಾಪಿಸಿದ ಎಂಬುಲೆನ್ಸ ಸೈನ್ಯದಲ್ಲಿದ್ದ ದಾಸಗುಪ್ತರು ಗಾಂಧಿಯವರ ಮುಖ್ಯ ಸೂತ್ರಗಳಾದ ಬ್ರಹ್ಮಚರ್ಯ ಮೊದಲಾದ ಸೂತ್ರಗಳನ್ನು ನ್ಯೂಯಾರ್ಕಿನಲ್ಲಿಯೂ ಅಮೇರಿಕದಲ್ಲಿಯೂ ಪ್ರಚಾರಮಾಡುತ್ತಿರುವರು.

— ಹಿಂದು ಪತ್ರಿಕೆ

ವಿಲಾಯತಿಯ ವ್ಯಾಪಾರದ ಕ್ಷೀಣತೆ

ಬರ್ನಲಿ (Burnley) ಎಂಬ ಪಟ್ಟಣದಲ್ಲಿ ೨೩ ಸಾವಿರ ಮಗ್ಗಗಳನ್ನು ತೆಗೆದು ಹಾಕಿರುತ್ತಾರೆ. ೨೩ ಸಾವಿರ ಮಗ್ಗಗಳಲ್ಲಿ ಕೆಲಸವು ನಡೆಯುವದಿಲ್ಲ. ಈ ಪಟ್ಟಣದಲ್ಲಿ ೯೭ ಸಾವಿರ ಜನರು ವಾಸವಾಗಿರುವರು. ಅವರಲ್ಲಿ ೫೦೦೦ ಜನರು ಕೆಲಸವಿಲ್ಲದೆ ಇರುವರು. ಉಳಿದ ಕೆಲವು ಸಾವಿರ ಜನರಿಗೆ ಸಾಕಷ್ಟು ಕೆಲಸವಿರುವದಿಲ್ಲ. ಅರ್ಧ ದಿವಸವೇ ಅವರಿಗೆ ಕೆಲಸ. ನೆಲ್ಸಿನ್ ಎಂಬ ೪೨ ಸಾವಿರವಿರುವ ಪಟ್ಟಣದಲ್ಲಿ ೧೮ ಸಾವಿರ ಮಗ್ಗಗಳಿಗೆ ಕೆಲಸವಿಲ್ಲ. ೮೦ ಸಾವಿರ ಪವನು ಮೌಲ್ಯದ ಒಂದು ದೊಡ್ಡ ಅರಳೆ ಕಾರಖಾನೆಯನ್ನು ಬಹಿಷ್ಕಾರದ ಸಂಬಂಧವಾಗಿ ೪೩೭೫ ಪವನಿಗೆ ಅವರು ಮಾರಬೇಕಾಯಿತು.

ಬಟ್ಟೆಯ ಬಹಿಷ್ಕಾರದ ಫಲ

(ಇಂಡಿಯಾಕ್ಕೆ ಇಂಗ್ಲಂಡದಿಂದ ಆಮದು)

	೧೯೨೯ ಎಪ್ರಿಲ್	೧೯೩೦ ಎಪ್ರಿಲ್
ಬೊಂಬಾಯಿ ಬಂದರ ಮುಖಾಂತರ	೬೭ ಮಿಲಿಯ ಗಜ	೧೯ ಮಿಲಿಯ ಗಜ
ಆಮದು (ಕರಾಚಿ ಮಾರ್ಗ)–	ಇದಕ್ಕೆ ೪೭೬ ಸಾವಿರ ಪವನಿನ ಮೌಲ್ಯ	೩೧೨ ಸಾವಿರ ಪವನು
ಬೇರೆ ಬಂದರಗಳು	೨೯ ಮಿಲಿಯ ಗಜ	೧೫ ಮಿಲಿಯ ಗಜ
(ಬೊಂಬಾಯಿ ಬಂದರದಿಂದ)	೬೫೯ ಮಿಲಿಯ ಪವನು ಮೌಲ್ಯ	೩೨೦ ಸಾವಿರ ಪವನು ಮೌಲ್ಯ
ಮದ್ರಾಸು	೧೦ ಮಿಲಿಯ ಗಜ	೬ ಮಿಲಿಯ ಗಜ
ಬಂದರ	೧೮೫ ಸಾವಿರ ಪವನಿನ ಮೌಲ್ಯದ್ದು	೧೦೩ ಪವನಿನ ಮೌಲ್ಯದ್ದು
ಬಂಗಾಳ ಅಸ್ಸಾಮು	೮೮ ಮಿಲಿಯಗಳು	೪೨ ಮಿಲಿಯ ಗಜ
ಬಿಹಾರ ಒರಿಸಾ	೧೪೫೫ ಸಾವಿರ ಪವನಿನ ಮೌಲ್ಯದ್ದು	೬೪೯ ಸಾವಿರ ಪವನಿನ ಮೌಲ್ಯ
ಬರ್ಮಾ	೬ ಮಿಲಿಯ ಗಜ	೩ ಮಿಲಿಯ ಗಜ
	೧೫೭ ಸಾವಿರ ಪವನು ಮೌಲ್ಯ	೮೩ ಸಾವಿರ ಪವನಿನ ಮೌಲ್ಯ

— ಮೊಡರ್ನರಿವ್ಯೂ

ಹಿಂದುಸ್ತಾನವು ಇಂಗ್ಲಂಡಕ್ಕೆ ಯಾಕೆ ಅಗತ್ಯ?

ಮಿಸ್‌ಕೌಂಟ ರೊದರ್‌ಮಿಯರರು ಇಂಗ್ಲಂಡದ ೧೯೩೦ನೆ ಇಸ್ವಿ ಜೂನ್ ತಾ॥ ೩ ರ " ಡೈಲಿ ಮೈಲ" ಪತ್ರಿಕೆಯಲ್ಲಿ ಬರೆದದ್ದು –

"ಇಂಗ್ಲಂಡಿನ ಹುಚ್ಚ ಜನರು, ನಮ್ಮ ಸಾಮ್ರಾಜ್ಯದಿಂದ ಹಿಂದುದೇಶವನ್ನು ಬಿಡುವದರಿಂದ ಬ್ರಿಟಿಷ ಗಯಾನವನ್ನು ಬಿಟ್ಟ ಹಾಗೆ ನಮ್ಮ ಸಂಪತ್ತಿಗೆ ಏನೂ ಹಾನಿಯಿಲ್ಲವಾಗಿ ಅಭಿಪ್ರಾಯ ಪಡುತ್ತಾರೆ.

ಆಲೋಚನೆಯಿಲ್ಲದೆ ಅವರು ಹೇಳುವ ಮೇರೆಗೆ ನಡೆದರೆ ಬ್ರಿಟಿಷರ ಮಹತ್ವವು ಕೊನೆಗಾಣುವದು. ಭೂಲೋಕದಲ್ಲಿ ಪ್ರಬಲವಾಗಿರುವ ನಮ್ಮ ಮಹತ್ವವು ಇದರಿಂದ ನಾಶವಾಗಿ ನಮ್ಮ ದೇಶಕ್ಕೆ ಬಡತನವು ಬರುವದು. ಈಗ ನಮ್ಮಲ್ಲಿ ೨ ಮಿಲಿಯ ಜನರು ಕೆಲಸವಿಲ್ಲದೆ ಇರುವರು. ನಂತರ ೪ ಮಿಲಿಯ ಜನರಾಗುವರು. ಅವರ ಹಸಿವೆಯನ್ನು ನಿವಾರಿಸಲಿಕ್ಕೆ ಯಾವ ಪ್ರಯತ್ನವೂ ನಮ್ಮಿಂದ ಸಾಧ್ಯವಾಗದು.

ಬ್ರಿಟಿಷ ಸಾಮಗ್ರಿಗಳು ಹಿಂದುಸ್ಥಾನಕ್ಕೆ ರಫ್ತು ಆಗುವಷ್ಟು ಯಾವ ರಾಜ್ಯಕ್ಕೂ ಆಗುವದಿಲ್ಲ, ಅಮೇರಿಕದಿಂದ ನಮಗೆ ಆಮದು ಆಗುವದಕ್ಕಿಂತ ಸ್ವಲ್ಪ ಕಡಿಮೆ ಸಾಮಗ್ರಿಗಳು ಹಿಂದುಸ್ಥಾನದಿಂದ ಅಂಗ್ಲಾಳಕ್ಕೆ ಆಮದಾಗಿ ಬರುತ್ತವೆ.

ಇಂಗ್ಲಂಡವು ಹಿಂದುದೇಶವನ್ನು ಬಿಟ್ಟರೆ ಪ್ರಾಯಹೋದವರಿಗೆ ಕೊಡುವ ಪೆನ್ಸನು, ಕೆಲಸವಿಲ್ಲದವರಿಗೆ ನಾವು ಕೊಡುವ ದ್ರವ್ಯ ಸಹಾಯ, ವಿದ್ಯಾಭ್ಯಾಸಕ್ಕೆ ನಾವು ಕೊಡುವ ಗ್ರಾಂಟು, ಹಾಗೂ ನಮ್ಮ ಕಜಾನೆಯಿಂದ ಹೊರಗೆ ಸಲ್ಲುವ ಹಣ ಇವನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಇಂಡಿಯಾ ದೇಶದೊಡನೆ ನಾವು ನಡಿಸುವ ವ್ಯಾಪಾರದಿಂದಲೂ ನಮಗೆ ಸಿಕ್ಕುವ ಲಾಭದಿಂದಲೂ ನಮ್ಮ ಈ ಜೀವನಕ್ರಮಗಳೆಲ್ಲ ಸರಾಗವಾಗಿ ನಡೆಯುವವು.

ಈ ಎಲ್ಲ ಅನುಕೂಲತೆಗಳು ಬೇರೆ ಯಾವ ಜನಾಂಗಕ್ಕೂ ಇಲ್ಲ. ೩೨೦ ಮಿಲಿಯ ಇಂಡಿಯನ ಜನರು ನಮ್ಮ ಸಾಮಾನನ್ನು ಕೊಂಡುಕೊಳ್ಳುವದರಿಂದ ಇದೆಲ್ಲ ಸಾಧ್ಯ.

ಬ್ರಿಟಿಷ ಜನಾಂಗದ ಪ್ರತಿಒಬ್ಬ ವ್ಯಕ್ತಿಯ ಆದಾಯದ ಪ್ರತಿ ಒಂದು ಪವನಿನ ⅛ನೇ ಅಂಶವು ನಮ್ಮ ಹಿಂದುದೇಶದ ವ್ಯಾಪಾರದಿಂದ ಹುಟ್ಟುವದು.

– ಮೋಡರ್ನರಿವ್ಯೂ

ಕರ್ನಾಟಕ ಮಹಿಳೆಯರು

ಬಳ್ಳಾರಿಯ ರಾಷ್ಟ್ರೀಯ ಸಭೆಯ ಉಪಾಧ್ಯಕ್ಷರಾದ

ಸೌಭಾಗ್ಯವತಿ ಕೆ. ಲಕ್ಷ್ಮಮ್ಮನವರು

ಶ್ರೀಮತಿ ಲಕ್ಷ್ಮಮ್ಮನವರು ಬಳ್ಳಾರಿ ಜಿಲ್ಲೆಯ ರಾಷ್ಟ್ರೀಯ ಕಾರ್ಯಗಳಿಗೆ ಮಾತೃಸ್ವರೂಪರಾಗಿದ್ದಾರೆ. ಬಳ್ಳಾರಿಯ ವಕೀಲರಾದ ಎನ್. ಮೃತ್ಯುಂಜಯಶಾಸ್ತ್ರಿಗಳ ಸಹಧರ್ಮಿಣಿಯರು. ಇವರು ಮುಂಬಯಿಯ ಎಲ್. ಸಿ. ಪಿ. ಎಸ್ (ವೈದ್ಯಕ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಹೆಚ್ಚಿನ ಶಿಕ್ಷಣಕ್ಕಾಗಿ ಇಂಗ್ಲಂಡಕ್ಕೆ ಹೋಗುವವರಿದ್ದರು, ಆದರೆ ದೇಶದ ಗಭೀರ ಗಂಭೀರ ರಾಜಕೀಯ ಪರಿಸ್ಥಿತಿಯನ್ನು ಕಂಡು ಆ ಶಿಕ್ಷಣಕ್ಕೆ ಶರಣು ಹೊಡೆದು ರಾಷ್ಟ್ರಕಾರ್ಯದಲ್ಲಿ ಧುಮ್ಮಿಕ್ಕಿರುವರು. ಮೊನ್ನಿನ ಬಳ್ಳಾರಿ ಜಿಲ್ಲೆಯ ಕೌನ್ಸಿಲ್ ಬಹಿಷ್ಕಾರ ಕಾರ್ಯದಲ್ಲಿ ಸತತ ಪರಿಶ್ರಮ ವಹಿಸಿ ಕಾರ್ಯಮಾಡಿದರು. ಸಾಮಾಜಿಕ ಕಾರ್ಯರಂಗದಲ್ಲಿಯೂ ಇವರು ಭಾಗವಹಿಸುವರು. ಅಂತ್ಯಜೋದ್ಧಾರದ ಕಾರ್ಯಕ್ಕೆ ಇವರು ಬಹು ಮಹತ್ವವನ್ನು ಕೊಡುತ್ತಿಗುವರು.

ಬಳ್ಳಾರಿಯ ಪ್ರಸಿದ್ಧ ಸಮಾಜಸೇವಿಕೆಯರಾದ

ಬಳ್ಳಾರಿಯಲ್ಲಿ ಸಾಮಾಜಿಕ ಕಾರ್ಯವನ್ನು ಮನಮುಟ್ಟಿ ಮಾಡುವವರಲ್ಲಿ ಶ್ರೀಮತಿ ವ್ಯಾ. ವೆಂಕಟೇಶ್ವರಮ್ಮನವರು ಮುಂದಾಗಿರುವರು. ಇವರು ಉದಾರಹೃದಯರೂ ವ್ಯವಸಾಯ ಖಾತೆಯಲ್ಲಿ ಅಸಿಸ್ಟಂಟ ಡೈರೆಕ್ಟರರೂ ಆದ ಶ್ರೀ ನಾಯುಡು ಕೃಷ್ಣರಾಯರ ಧರ್ಮಪತ್ನಿಯುವರು. ಇವರು ಬಹು ಕೋಮಲ ಸ್ವಭಾವದವರಿದ್ದು ಸಾಮಾಜಿಕ ಸೇವೆಗಾಗಿ ತಮ್ಮ ತನುಮನಧನಗಳನ್ನು ಕೊಟ್ಟುಬಿಟ್ಟಿದ್ದಾರೆ. ಮದ್ರಾಸ ಯುನಿವ್ಹರ್ಸಿಟಿಯ ಅಂಡರ ಗ್ರ್ಯಾಜುಯೇಟರಿದ್ದು ಸ್ತ್ರೀಯರ ಹಾಗೂ ಅಸ್ಪೃಶ್ಯರ ಸಂಬಂಧವಾದ ಚಟುವಟಿಕೆಗಳಲ್ಲಿ ಯಾವಾಗಲೂ ಸೇರಿರುವರು. ಮೊನ್ನೆ ಮೊನ್ನೆ ಆದ ಆರೋಗ್ಯ ಶಿಶು ಸಪ್ತಾಹದಲ್ಲಿ ಇವರ ಪರಿಶ್ರಮದಿಂದಲೇ ಅಂತ್ಯಜರನ್ನು ಸೇರಿಸಿಕೊಳ್ಳಲಾಗಿತ್ತು.

ಸೌಭಾಗ್ಯವತಿ ವೆಂಕಟೇಶ್ವರಮ್ಮನವರು

ಇದು ನಿಮ್ಮ ಮತವೋ ?

ಕತೆಗಾರರು:— ಇ. ಎ. ಭಾಸ್ಕರರಾವ್, ಮಂಗಳೂರು

"ಬೇಡಿ, ಇನ್ನೂ......ದಯವಿಟ್ಟು......"

ತರುಣನು ಆಕೆಯ ಕೈಗಳನ್ನು ಬಿಟ್ಟು ಬಿಟ್ಟು, ಹಳೇ ಕಬ್ಬಿಣದ ಪೆಟ್ಟಿಗೆಯ ಮೇಲೆ ಕಾಲೊಂದನ್ನೂರಿ ಆಕೆಯ ಮುಖವನ್ನೇ ಗಮನಿಸುತ್ತ ನಿಂತನು.

"ಚಾ ಕುಡಿದು ಬೇರೆ ಬಟ್ಟೆಗಳನ್ನು ಹಾಕಿಕೊಳ್ಳಿ. ದೇವಾರಾಧನೆಗೆ ಹೋಗಿ ಬರೋಣ. ಈ ಹೊತ್ತು ಭಾನುವಾರವಲ್ಲವೆ ?

ಆಕೆಯ ಮುಖವು ಬಾಡಿತು.

"ದೇವಾಲಯದ ಹುಚ್ಚು ನಿನಗಿನ್ನೂ ಬಿಟ್ಟಿಲ್ಲವೆ ಗ್ರೇಸಿ ? ದೇವಾಲಯವೆಲ್ಲಿದೆ ? ಎಲ್ಲವೂ ದೆವ್ವಾಲಯಗಳೇ. ನಾನು ಬರೋದಿಲ್ಲ; ಬೇಕಾದರೆ ನೀನೇ ಹೋಗಿ ಬಾ."

"ಹಾಗನ್ನಬೇಡಿ. ಮನುಷ್ಯರು ಬಾಯಿಗೆ ಬಂದಂತೆ ಆಡಿಕೊಂಡರೂ ದೇವರು ದೂಡಿಬಿಡುವುದಿಲ್ಲ ನಮ್ಮನ್ನು; ಬನ್ನಿ."

"ನಾವಿಲ್ಲಿಗೆ ಬಂದು ಇನ್ನೂ ಮೂರು ಗಂಟೆಯಾಗಿಲ್ಲ. ಸಾಮಾನುಗಳೆಲ್ಲಾ ಬಿದ್ದಿರುವುದನ್ನು ನೋಡು. ಇದನ್ನೆಲ್ಲಾ ನಾನು ಸರಿಯಾಗಿ ಎತ್ತಿಟ್ಟು, ಸ್ನಾನ ಮಾಡಿಕೊಂಡು, ಕಾರ್ಖಾನೆಯ ಯಜಮಾನರನ್ನು ನೋಡಿಕೊಂಡು ಬರಬೇಕು. ಹೊತ್ತಿಲ್ಲ."

"ಸಾಮಾನುಗಳಿಗೇನು ? ಹೀಗೇ ಬಿದ್ದಿರಲಿ. ಎತ್ತಿಡುವುದಕ್ಕೆ ನಾನೂ ಸಹಾಯ ಮಾಡುತ್ತೇನೆ – ಯಾರ ಯಾರ ಮೇಲಿನ ಕೋಪವನ್ನೆಲ್ಲ ದೇವರ ಮೇಲೆ ಬಿಡುವುದು ಸರಿಯೆ ? ನನಗಾಗಿ ..."

"ಬರುತ್ತೇನೆ."

ತಟ್ಟನೆ ಬಂದ ಈ ಮರುತ್ತರವು ನೈಜವಾದುದೋ ಅಲ್ಲವೋ ಎಂಬುದನ್ನು ಗಮನಿಸಿ, ಕಾಠಿಣ್ಯವಿಲ್ಲವೆಂಬುದನ್ನರಿತುಕೊಂಡು, ಗೆಲುವಿನಿಂದ ಆಕೆ ಕೇಳಿದಳು. "ಚಾ ತಣ್ಣಗಾಯಿತೇನೋ ! ಬಿಸಿ ಮಾಡಿ ಕೊಡಲೆ ?" ಎಂದು.

ಕಥಾವಸ್ತುವಿನಲ್ಲಿ ಕ್ರಿಸ್ತಮತೀಯರ ನಡತೆ ನಡಾವಳಿಗಳ ಉಲ್ಲೇಖವು ತುಂಬಾ ಇರುವುದರಿಂದ, ಎಲ್ಲರಿಗೂ ಸುಗಮವಾಗಬೇಕೆಂದು ಪಾರಿಭಾಷಿಕವಾಗಿ ಉಪಯೋಗಿಸಿದ ಶಬ್ದಗಳ ಇಂಗ್ಲಿಷ ಮೂಲವನ್ನು ಕೆಳಗೆ ಕೊಟ್ಟಿದೆ.

ಪಾಲಕರು = Paster of the Church. ದೇವಾಲಯದ ಹಿರೀ ಪುರೋಹಿತರು.

ದೇವಾಲಯ = Church

ಸತ್ಯವೇದ, ಈಸಾಯಿವೇದ, ವೇದ = Bible

ಕೀರ್ತನೆ = ದೇವರ ನಾಮಗಳ ಪುಸ್ತಕ Book of Lyrics. Psalms ಎಂದೂ ಒಮ್ಮೊಮ್ಮೆ ಅರ್ಥವಾಗುತ್ತದೆ.

ಪೂಜ್ಯ = Reverend

ಗ್ರೇಸ ಬೆಂಗೆರಸನ್ ಸತಿ = Mrs. Grace Bengerson

ಬೈಬಲ್ ವುಮನ್ = Bible Women; Women who go from house to house propagating the Gospels among women.

ಮಿಸಮ್ಮ = ಅವಿವಾಹಿತರಾದ ಆಂಗ್ಲ ಸ್ತ್ರೀಯರನ್ನು ಈಸಾಯಿಗಳು ಮಿಸಮ್ಮನವರೆಂದು ಕರೆಯುವುದು ಸಾಮಾನ್ಯ ಪದ್ಧತಿ 'Miss+ಅಮ್ಮ'

ರೊಟ್ಟಿ = Bread

ತ್ಯಾಗಪತ್ರ = Divorce deed.

ಕರ್ತನ ಸಹಪಂಕ್ತಿ ಭೋಜನ = Holy communion, ಯೇಸು ಕ್ರಿಸ್ತನು ಲೋಕವಿಮೋಚನೆಗಾಗಿ ಶಿಲುಬೆಯ ಮೇಲೆ ರಕ್ತವನ್ನು ಸುರಿಸಿ, ದೇಹವನ್ನು ದಂಡಿಸಿಕೊಂಡು, ಪ್ರಾಣಬಿಟ್ಟುದನ್ನು ನೆನೆಸಿಕೊಳ್ಳುವುದಕ್ಕೋಸ್ಕರ, ತಿಂಗಳಿಗೊಂದಾವರ್ತಿ ಬಂದು ಚೂರು ರೊಟ್ಟಿಯನ್ನು ತಿಂದು ಒಂದು ಗುಟುಕು ದ್ರಾಕ್ಷಾರಸವನ್ನು ಕುಡಿಯುವ ಪದ್ಧತಿಯಿದೆ. ಸಕಾರಣಗಳನ್ನು ತಿಳಿಸದೆ ಇದಕ್ಕೆ ಬಾರದೇ ಹೋದಲ್ಲಿ, ಮಾಡಬಾರದ ಕೆಲಸವನ್ನು ಮಾಡಿ ಮನೋಧೈರ್ಯವಿಲ್ಲದೆ ಹಿಂದುಳಿದಿರಬಹುದೆಂದು ಈಸಾಯಿಗಳು ಶಂಕಿಸುವರು. ಮತ್ತು ಈಸಾಯಿಗಳಲ್ಲಿ ಬಹಿಷ್ಕಾರವಾದರೆ ಈ ಸಹಪಂಕ್ತಿ ಭೋಜನಕ್ಕೆ ಸೇರಿಸುವುದಿಲ್ಲ ಎಂಬುದು.

ತಂದೆ ಮಗ ಪರಿಶುದ್ಧಾತ್ಮಸಾಕ್ಷಿಯಾಗಿ God the father God the son, God the Holy Ghost as witnesses. ಈಸಾಯಿ ಮದುವೆಗಳಲ್ಲಿ ಮೇಲ್ಕಾಣಿಸಿರುವಂತೆ ತಂದೆ ಮಗ ಪರಿಶುದ್ಧಾತ್ಮಸಾಕ್ಷಿಯಾಗಿ ಮದುವೆಯಾಗಿದೆ ಎಂದರೆ, ಶಾಸ್ತ್ರೋಕ್ತವಾಗಿ 'ಅಗ್ನಿ ಸಾಕ್ಷಿಯಾಗಿ' ಮದುವೆಯಾಗಿದೆ ಎಂಬರ್ಥ.

ತರುಣನು ಕೈಮೇಲಿದ್ದ ಧೂಳವನ್ನೊರಸಿಕೊಂಡು, ಕೊಂಚ 'ಚಾ' ಕುಡಿದು, "ಬಹಳ ಚೆನ್ನಾಗಿದೆ; ಪರವಾ ಇಲ್ಲ; ಬಿಸಿಯಾಗಿಯೇ ಇದೆ — ಕೊಂಚವೂ ಸುಧಾರಿಸಿಕೊಳ್ಳದೆ ಈಗ ನೀನೇಕೆ ಮಾಡಿದೆ ಇದನ್ನು ! ಎನ್ನುತ್ತಾ ಎಲ್ಲವನ್ನೂ ಕುಡಿದ ಮೇಲೆ ಬಟ್ಟಲನ್ನು ಪೆಟ್ಟಿಗೆಯ ಮೇಲಿಟ್ಟು, ಅವಳ ಸೊಂಟಕ್ಕೆ ಕೈ ಹಾಕಿ ಮೆಲ್ಲನೆ ತನ್ನ ಬಳಿಗೆ ಸೆಳೆದುಕೊಳ್ಳಲೆತ್ನಿಸಿದನು.

ಗ್ರೇಸ್ ಬೆಂಗರಸನ್ ಸತಿಯು ಮೆಲ್ಲನೆ ಆತನ ಹಿಡಿತದಿಂದ ಬಿಡಿಸಿಕೊಂಡು, "ಬಿಡ್ರಿ — ಕೋಪಿಸಿಕೊಳ್ಳಬೇಡಿ. ನಾನು ಬೇರೆ ಬಟ್ಟೆ ಹಾಕಿಕೊಂಡು ಬರುತ್ತೇನೆ; ಅಷ್ಟರಲ್ಲಿ ನೀವೂ ಸಿದ್ಧವಾಗಿರ್ರಿ" ಎನ್ನುತ್ತಾ ಒಳಕ್ಕೆ ಹೋದಳು.

ಈತನು ಹಸರು ಕಾಲುಚೀಲಗಳನ್ನು ಹಾಕಿಕೊಂಡು, ತೇಪೆ ಹಾಕಿದ್ದ 'ಕಾಕಿ' ಷರಾಯಿ ತೊಟ್ಟು, ರೂಪಾಯಿ ಅಗಲದ ಎರಡು ಮೂರು ಬಿಲ್ಲೆಗಳನ್ನು ಹೊಲೆದಿದ್ದರೂ ಕೊಂಚ ಕೊಂಚ ಸೀಳು ಬಿಟ್ಟಿದ್ದ ಕರೇ ಮೋಜೆಗಳನ್ನು ಮೆಟ್ಟಿ, ಗುಂಡಿಗಳಿಲ್ಲದ ಬಿಳೀ ಅಂಗಿಯನ್ನು ಹಾಕಿಕೊಂಡು ಆಕೆಗಾಗಿ ಕಾದಿದ್ದನು. ಆಕೆಯು ಬಿಳೀ ಸೀರೆಯನ್ನೂ ಗುಲಾಬಿ ಬಣ್ಣದ ಜಪಾನ ರೇಷ್ಮೆ ಕುಬಸವನ್ನೂ ತೊಟ್ಟು ನಗುನಗುತ್ತಾ ಹೊರಗೆ ಬಂದಳು. ಉಡುಪಿನ ಈ ಆಡಂಬರವನ್ನು ನೋಡಿ ಬೆರಗಾಗಿ ನಿಂತನು, ಆತನು. "ಈ ಸಣ್ಣ ಮೋಸವನ್ನು ಕ್ಷಮಿಸಿರಿ. ಬೇಕಂತ ಇದನ್ನು ಮರೆಸಿಟ್ಟಿದ್ದೆ. ಏಳು ರೂಪಾಯಿ ನಾನು ಕೂಡಿಸಿಟ್ಟಿದ್ದೆ; ಅದರಲ್ಲಿ ಈ ಸೀರೆ ಕೊಂಡುಕೊಂಡೆ. ನನ್ನ ಸ್ನೇಹಿತಿ ನುಸಾನ ಈ ಜಾಕೆಟ್ ತೆಗೆದುಕೊಟ್ಟಳು. ಕೋಪವೇನು ? ಹೇಳ್ರಿ, — ಕೋಪವೆ ?"

ಆಕೆಯ ಮಾತುಗಳಿಗಿಂತಲೂ, ಕಣ್ಣುಗಳನ್ನು ಗಮನಿಸುತ್ತಿದ್ದ ಆತನು "ನಿನ್ನ ಮೇಲೆ ಕೋಪವೆ ? ಗ್ರೇಸ್, ಆ ಚಂಡಾಳನ ಮೇಲಲ್ಲದೆ, ಮತ್ತ್ಯಾರಮೇಲೂ ಕೋಪವಿಲ್ಲ" ಅಂದನು.

ಕೊಂಚ ಬಾಡಿದ ಮುಖವನ್ನು ಮರೆಸಿಕೊಳ್ಳಲು ಈಸಾಯಿ ವೇದವನ್ನು ಹುಡುಕುವಂತೆ ನಟಿಸಿ, ಅಟ್ಟೆ ಕಿತ್ತು ಹೋಗಿದ್ದ ವೇದವನ್ನೂ, ಕೊನೆಗಳು ಮುದುರಿ ಹೋಗಿದ್ದ ಕೀರ್ತನೆಗಳ ಪುಸ್ತಕವನ್ನೂ ಆತನ ಕೈಗೆ ಕೊಟ್ಟು, ತಾನು ಮನೆಯ ಬಾಗಿಲಿಗೆ ಬೀಗವನ್ನು ಹಾಕಿ, ದೇವಾಲಯಕ್ಕೆ ಹೊರಟಳು.

'— ದೇವಾಲಯವು' ಸಣ್ಣದು. ಅದರಲ್ಲಿಯೂ ಅನೇಕ ಬೆಂಚುಗಳು ಬರಿದಾಗಿದ್ದುವು ! ಕಡೆಯ ಸಾಲಿನ ಒಂದು ಬೆಂಚಿನ ಕೊನೆಯಲ್ಲೀತನೂ, ಈತನಿಗೆ ಸಮೀಪವಾಗಿದ್ದ ಕೊನೆಯಲ್ಲಿ ಹೆಂಗಸರು ಕುಳಿತುಕೊಳ್ಳುವಂತೆ ಆಕೆಯೂ, ಕುಳಿತುಕೊಂಡರು.

ವ್ಯಭಿಚಾರಿಣಿಯಾದೊಬ್ಬಳನ್ನು ಕಲ್ಲೆಸೆದು ಕೊಲ್ಲಲಪ್ಪಣೆಯನ್ನು ಕೊಡಬೇಕೆಂದು ಯೇಸುಕ್ರಿಸ್ತನ ಬಳಿಗೆ ಬಂದಿದ್ದ ಶಾಸ್ತ್ರಿಗಳಿಗೆ ಆತನು ಕೊಟ್ಟ ಉತ್ತರವನ್ನೂ, ಆ ವ್ಯಭಿಚಾರಿಣಿಗೆ ಸ್ವಾಮಿಯು ತೋರಿಸಿದ ಕರುಣೆಯನ್ನೂ ಕುರಿತು ಆ ದೇವಾಲಯದ ಪಾಲಕರಾದ ಪೂಜ್ಯ ಶಾಂತಪ್ಪ ಇಟ್ಟಂಗಿಯವರು ಉಪದೇಶ ಮಾಡಿದರು. ಈ ವಿಷಯವನ್ನೆತ್ತುತ್ತಲೇ ಇವರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಉಪದೇಶ ಮಾಡುತ್ತಿದ್ದಾಗಲೇ ಪಾಲಕರು ಹೊಸಬರನ್ನು ಗಮನಿಸಿ, ಆರಾಧನೆಯು ಮುಗಿದ ಬಳಿಕ ಅವರನ್ನು ಮಾತನಾಡಿಸಬೇಕೆಂದಿದ್ದರು. ಆದರೆ ಅದು ಮುಗಿಯುತ್ತಲೇ, 'ಕರ್ತನ ಸಹಪಂಕ್ತಿ ಭೋಜನ' ಕ್ಕೆ ಅವರಿಬ್ಬರೂ ನಿಲ್ಲದೇ ಹೊರಟು ಹೋಗಿದ್ದುದರಿಂದ ಅವರನ್ನು ಮಾತನಾಡಿಸಲಾಗಲಿಲ್ಲ. ಪಾಲಕರು ಹೊಸಬರ ಪರಿಚಯವು ತಪ್ಪಿತೆಂದು ವ್ಯಸನಪಡುತ್ತಾ, ಹೊರಗಿದ್ದವರಿಗೆ ಇವರ ವಿಷಯವೇನಾದರೂ ತಿಳಿದಿರುವುದೇನೋ ವಿಚಾರಿಸಲು ಬಂದರು. ಇವರ ಪ್ರಶ್ನೆಗೆ ದೇವಾಲಯದ ಪರಿಚಾರಕನು ಮುಂದೆ ಬಂದು ಉತ್ತರ ಕೊಟ್ಟನು.

"ಅವರು ಮೈಸೂರು ಕಡಿಯವರೆಂದು ಕಾಣ್ತದ್ರಿಯ್ಯ. ಆಯಪ್ಪನು ಮೊನ್ನೇನೆ ಬಂದು '— ಕೇರಿ' ಯಲ್ಲಿ ಇಮ್ಮಾನುಯೇಲ್ ಮಾಸ್ತರ್ ಮನೆಯ ಕೊಟ್ಟಿಗೆಯನ್ನು ಬಾಡಿಗ್ಗಿಗೊತ್ತು ಮಾಡಿಕೊಂಡು ಓದ. ದೇವಪ್ರಿಯಪ್ಪನಂತೆ ಎಸರು. ಏನು ಕೆಲ್ಸ ಮಾಡ್ತಾನೋ ತಿಳೀದ್ರಯ್ಯ" ಎಂದು.

ತಮ್ಮ ಕೆಲಸಗಳನ್ನೆಲ್ಲ ತೀರಿಸಿಕೊಂಡು, ಪಾಲಕರು ಮನೆಗೆ ಹೋಗುವಾಗ್ಗೆ, ಅಂಚೆಯಾಳು ಕಾಗದಗಳನ್ನು ತಂದುಕೊಟ್ಟಿದ್ದನು. ಅವುಗಳಲ್ಲೊಂದನ್ನು '—' ಊರಿನ ಅಪರಿಚಿತರಾದ ಪಾಲಕರು ಬರೆದಿದ್ದರು.

"— ನ ಕನ್ನಡ ಸಭೆಯ ಪಾಲಕರಾದ ಪೂಜ್ಯ ಶಾಂತಪ್ಪ ಇಟ್ಟಂಗಿ ಇವರಿಗೆ:—

"ಪೂಜ್ಯರೆ,

ತಮಗೊಂದು ವಿಷಯವನ್ನು ತಿಳಿಸಲೇಬೇಕಾಗಿದೆ. ಬಹಳ ವ್ಯಸನದಿಂದ ಇದನ್ನು ಬರೆಯುತ್ತಿರುವೆನು. ಮದುವೆಯಾಗಿ

ರುವ ಗ್ರೇಸ್ ಬೆಂಗರಸನ್ ಎಂಬ ಹೆಂಗಸಿನ ಕೂಡ — ಅವಳ ಗಂಡನು ಜೀವಂತನಾಗಿದ್ದರೂ — ನಮ್ಮ ಸಭೆಯ ಸದಸ್ಯನಾದ ದೇವಪ್ರಿಯಪ್ಪನೆಂಬ ಮದುವೆಯಾಗದ ಕಬ್ಬಿಣ ಕೆಲಸಗಾರನೊಬ್ಬನು ನಿಮ್ಮೂರಿಗೆ ಹೊರಟಿರುವನೆಂದು ಸುದ್ದಿ ಬಂದಿರುತ್ತದೆ. ಆತನೂ ಆಕೆಯೂ ಮದುವೆಯಾಗಬೇಕೆಂದು ಇದ್ದುದೇನೋ ನಿಜ. ಆದರೆ ಗ್ರೇಸಮ್ಮನು ಸುಮಾರು ಒಂದು ವರ್ಷಕ್ಕೆ ಹಿಂದೆ, '—ಸಭೆಗೆ' ಸೇರಿದ ಭಂಗಿ ಅರಸಪ್ಪನ ಮಗ ಸಾಮುವೇಲ್ ಬೆಂಗರಸನ್ ಎಂಬಾತನನ್ನು ದೈವನಿಯಾಮಕವಾಗಿದ್ದಂತೆ, ತಂದೆ ಮಗ ಪರಿಶುದ್ಧಾತ್ಮ ಸಾಕ್ಷಿಯಾಗಿ ಮದುವೆಯಾದಳು. ಆಮೇಲೆ ಸತಿಪತಿಗಳಿಗೆ ಯಾವುದೋ ಕಾರಣದಿಂದ ಪರಸ್ಪರ ಅನ್ಯೋನ್ಯವು ತಪ್ಪಿ ಹೋಗಿ, ಬೆಂಗರಸನ್ನನು ಸುಮಾರು ೨ ತಿಂಗಳ ಹಿಂದೆ ಎಲ್ಲಿಗೋ ಓಡಿ ಹೋದನಂತೆ; ಅನಂತರ ಯಾವುದೋ ತಪ್ಪಿಗಾಗಿ ಎರಡು ವರ್ಷ ಕಠಿಣ ಶಿಕ್ಷೆಯಾಗಿ ಕಾರಾಗೃಹದಲ್ಲಿರುವನಂತೆ. ಇದು ಹೇಳಿಕೆಯ ಮಾತು; ನಿಶ್ಚಯವಾದುದು ತಿಳಿಯದು.

"ಆತನು ಓಡಿ ಹೋದಾಗ ಗ್ರೇಸಮ್ಮನು ಆಸ್ಪತ್ರೆಯಲ್ಲಿ ನರಳುತ್ತಿದ್ದಳು. ದೇವಪ್ರಿಯನು ಪ್ರತಿದಿನವೂ ಬಂದು ನೋಡಿಕೊಂಡು ಹೋಗುತ್ತಿದ್ದುದಲ್ಲದೆ, ಹಣ್ಣು ಹಂಪಲುಗಳನ್ನು ಆಕೆಗೆ ಕೊಡುತ್ತಲೂ ಅಲ್ಲಿನ ದಾದಿಯರಿಗೆ ಹಣಕೊಟ್ಟು ಆಕೆಗೆ ಚೆನ್ನಾಗಿ ಆರೈಕೆ ಮಾಡಬೇಕೆಂದು ಹೇಳುತ್ತಲೂ ಇದ್ದನು. ಕರ್ತನ ಪ್ರೀತಿಯಲ್ಲಿ ಐಕ್ಯವಾದ ಸೋದರಿಗೆ ಸೋದರ ಪ್ರೀತಿಯಿಂದ ಹೀಗೆ ಮಾಡುತ್ತಿರುವನೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಆಕೆ ಆಸ್ಪತ್ರೆಯಿಂದ ಹೊರಗೆ ಬಂದಮೇಲೆ, ಆಕೆಯ ಮನೆಯಲ್ಲಿಯೇ ತಾನೂ ವಾಸಮಾಡಹತ್ತಿದನು. ಇದನ್ನು ನಾವು ಪ್ರೀತಿಯಿಂದ ಪ್ರತಿಭಟಿಸಲು ನಮ್ಮನ್ನೇ ನಿಂದಿಸಿ, ದೇವಾಲಯದ ನೇಮಗಳನ್ನುಲ್ಲಂಘಿಸಲಾರಂಭಿಸಿದನು; ಅಲ್ಲದೆ ಅವನ ಹೇಳಿಕೆಯಿಂದ ತಪ್ಪು ಹಾದಿಗಿಳಿದ ಗ್ರೇಸಮ್ಮನೂ ಹಾಗೆಯೇ ಮಾಡಲಾರಂಭಿಸಿದಳು. ಈ ಕಾರಣದಿಂದ ಬಹಳ ಆಲೋಚಿಸಿ, ಕೊನೆಗೆ ಬಹಿಷ್ಕಾರ ಹಾಕಿದೆವು; ಮತ್ತು ದೇವಪ್ರಿಯಪ್ಪನಿಗೆ ಕೆಲಸವನ್ನೂ ತಪ್ಪಿಸಿದೆವು.

"ಇದನ್ನೆಲ್ಲ ಪ್ರತಿಭಟಿಸಿ, ಈಗ '— ನಲ್ಲಿ' ಕೆಲಸ ಖಾಲಿ ಇದೆಯೆಂದು ತಿಳಿದು, ಆ ಕೆಲಸವನ್ನು ದೊರಕಿಸಿಕೊಂಡು ಅಲ್ಲಿ ಮನೆ ಮಾಡಿ ಗ್ರೇಸಮ್ಮನನ್ನು ತನ್ನ ಹೆಂಡತಿಯೆಂದು ಹೇಳಿಕೊಂಡು, ಜೀವಿಸಬೇಕೆಂದಿರುವನಂತೆ. ಈ ವಿಚಾರವೊಂದನ್ನು ಬಿಟ್ಟರೆ ಅವರಿಬ್ಬರೂ ತೀರ ಒಳ್ಳೆಯವರೆಂದೇ ಹೇಳಬೇಕು. ಬೇರೆ ಯಾವ ದುರಭ್ಯಾಸವಾಗಲಿ, ಕೆಟ್ಟತನವಾಗಲಿ ಅವರಲ್ಲಿ ಕೂಡು ಬಂದಿರುವದಿಲ್ಲ. ಹೀಗಿರುವುದರಿಂದ ನಿಮ್ಮ ಕೈಲಾದಮಟ್ಟಿಗೆ ಅವರಿಬ್ಬರನ್ನೂ ಬೇರೆ ಮಾಡಿ, ದೇವರ ಮಕ್ಕಳೆನಿಸಿಕೊಂಡು ಬದುಕುವಂತೆ ಪ್ರಾರ್ಥನೆ ಸದ್ಬೋಧನೆಗಳ ಮೂಲಕ ಮಾಡಲು ಯತ್ನಿಸಬೇಕೆಂದು ವಿಜ್ಞಾಪನೆ.

'—ಸಭೆ'ಯ ಪಾಲಕ ಹೀಗೆ ಕರ್ತನಲ್ಲಿ
೨೬—೫—೧೯ ನಿಮ್ಮವನಾದ

ಸಾಮುವೆಲ್ ಸಾಧು."

ಈ ಕಾಗದವನ್ನೋದಿ, ಮುಂದೇನು ಮಾಡಬೇಕೆಂಬ ಯೋಚನೆಯಲ್ಲಿ ಅವರ ಸತಿ ಸತ್ಯಮ್ಮನು, "ಊಟ ನೀಡಿದ್ದೇನ್ರಿ" ಎಂದು ಹೇಳಿದುದನ್ನೂ ಗಮನಿಸಲಿಲ್ಲ!

೨

ದೇವಪ್ರಿಯನೂ ಗ್ರೇಸಮ್ಮನೂ ದಾರಿಯಲ್ಲಿ ಒಂದು ಮಾತನ್ನಾದರೂ ಆಡದೆ ಮನೆಯನ್ನು ಸೇರಿದರು. ಗ್ರೇಸಮ್ಮನ ಮುಖವು ಬಾಡಿದ್ದಿತು. "ಏಕೆ ಗ್ರೇಸಾ, ಹೀಗಿರುವೆ?"

"ನೋಡಿ, ನನ್ನಿಂದ ನಿಮಗೂ ಬಹಿಷ್ಕಾರ! ನನ್ನ ಪಾಪದ ಫಲ ನೀವೂ ಉಣ್ಣಬೇಕಾಗಿರುತ್ತದೆ. ನನ್ನನ್ನು ಉದ್ಧಾರ ಮಾಡಲು ಹೀಗೆ ಓಡಿಬಾರದೆ, ಬೇರೆ ಇನ್ನೊಬ್ಬಳನ್ನು ಮದುವೆಯಾಗಿದ್ದರೆ ಈ ಹೊತ್ತು ಸಂತೋಷವಾಗಿ 'ಸಹ ಪಂಕ್ತಿ ಭೋಜನ'ಕ್ಕೆ ನೀವೂ ಸೇರಬಹುದಾಗಿತ್ತು."

"ಅದನ್ನು ಹೇಳಬೇಡ, ಚಿನ್ನ. ನಿನ್ನ ಪಾಪವಾದರೂ ಏನು? ಆ ಚಂಡಾಳನಿಂದ ಹೊಡೆಸಿಕೊಂಡು ಒದೆಸಿಕೊಂಡು ಚಿತ್ರಹಿಂಸೆಗೊಳಗಾಗಿದ್ದುದೆ? ನಿನ್ನಿಂದ ನನಗೇನು ಕೊರತೆ? ಅನೇಕ ವರ್ಷಗಳಿಂದ ಬಚ್ಚಿಟ್ಟುಕೊಂಡಿದ್ದ ಪ್ರೀತಿ ಈಗ ಹೊರಬಿದ್ದಿರುವುದೆ? ಹುಚ್ಚಿ, ಇದಕ್ಕೇ ನಿನಗೆ ಬುದ್ಧಿ ಕಡಿಮೆ ಎನ್ನುವುದು."

"ಹೌದು, ಬುದ್ಧಿ ಕಡಿಮೆಯೇ ಸರಿ. ನಾನು... ಅವರನ್ನು ನಂಬಿ...ಊಟಮಾಡಿಡುತ್ತಿದ್ದುದೇ ತಪ್ಪಾಯಿತು...ನಂಬಿ... ಮೋಸಹೋದೆ. ಆ ಮೇಲೆ...'ಮಿಸಮ್ಮನವರು'...ಮದುವೆ ಮಾಡಿಕೊಳ್ಳಲೇಬೇಕೆಂದು......"

ಕಣ್ಣಿನಲ್ಲಿ ನೀರು ಹರಿಯಲಾರಂಭಿಸಿತು. ದೇವಪ್ರಿಯನು ಆಕೆಯ ಸೊಂಟಕ್ಕೆ ಕೈಹಾಕಿ, ಅಪ್ಪಿಕೊಂಡು, ಕಣ್ಣೀರನ್ನು ತೊಡೆಯುತ್ತ ಸಮಾಧಾನಮಾಡಿದನು.

"ಇದನ್ನೆಲ್ಲಾ ಯಾರು ಕೇಳಿದ್ರೆ, ಹುಡುಗಿ ? ನೀನು ನನ್ನನ್ನು ಪ್ರೀತಿಸುತ್ತಿದ್ದಾಗ ನಿನ್ನ ಮನಸ್ಸು ಕೊಂಚ ಚಂಚಲವಾಯಿತು, ಜನರು ನನ್ನನ್ನು ಒರಟ-ಪೋಲಿ ಎಂದು ಏನೇನೋ ಆಡುತ್ತಿದ್ದುದರಿಂದ ಆ ಸಮಯವನ್ನೇ ಕಾದು, ಅವನು......ಆ... ಪಾಷಂಡನು ನಿನಗೆ ಮೋಸಮಾಡಿದ. ಇದನ್ನು ನಾನು ಬಲ್ಲೆ. ಹಾಗಿಲ್ಲದಿದ್ದರೆ ಅವನು ಪಾಲ್ಕಾರಯ್ಯನ ಹೆಂಡತಿಯನ್ನೆತ್ತಿಕೊಂಡು ಓಡಿಹೋಗುತ್ತಿಲ್ಲೇ, ನಿನ್ನ ಸಹಾಯಕ್ಕೆ ನಾನು ಬರುತ್ತಿದ್ದೆನೇನು? ಹೋಗಲಿ, ಬಿಡು. ಅದನ್ನೆಲ್ಲಾ ನೆನಸಿಕೊಳ್ಳಬೇಡ.

ದೇವಾಲಯದಲ್ಲಿ ನಾವು ಪಾಪದರಿಕೆ ಮಾಡಿಕೊಂಡಾಗಲೇ ದೇವರು ನಮ್ಮನ್ನು ಕ್ಷಮಿಸಿ ಬಿಟ್ಟಿರುತ್ತಾನೆ. ಇದು ಹೊಸ ಬಾಳು. ಕಳಂಕವಿಲ್ಲದ ಬಾಳನ್ನು ಇಂದಿನಿಂದ ಬಾಳೋಣ. ದೇವರು ಇದನ್ನು ಖಂಡಿಸಲಾರ. ಅಳಬೇಡ, ಗ್ರೇಸ. ಇಂದಿನಿಂದ ನಿನಗೆ, ನಾನು; ನನಗೆ, ನೀನು; ನಮ್ಮಿಬ್ಬರಿಗೆ ದೇವರು. "

"ನನಗೂ, ನೀವು; ನಿಮಗೂ, ನಾನು. ದೇವರೇ ! ಇದನ್ನು ನಡಿಸಿಕೊಂಡು ಬರುವ ಭಾರ ನಿನ್ನದು "

ಆಕೆಯು ಮೊರೆಯಿಟ್ಟ ದನಿಯಲ್ಲಡಕವಾಗಿದ್ದ ತಿಳಿಯೊಲವಿನ ಅನುಸ್ವರವು ದೇವಪ್ರಿಯನೊಲವನ್ನೂ ಸೆಳೆಯಲು, ಮೈಮರೆತಳ ಕೆನ್ನೆಗಳಿಗೆ ಮುದ್ದಿಟ್ಟನು.

ಇದರಿಂದ ಕೊಂಚ ಸಮಾಧಾನವಾಗಿ, ಆಕೆಯು ಅಡಿಗೆ ಮಾಡಲು ಹೋದಳು. ದೇವಪ್ರಿಯನು ಸಾಮಾನುಗಳನ್ನೆಲ್ಲಾ-ಒಡಕಾಗಿದ್ದರೂ, ಹಳೆಯವಾಗಿದ್ದರೂ-ನಾಜೋಕಾಗಿ ಎತ್ತಿಟ್ಟು 'ಸ್ನಾನ ಊಟಮಾಡಿಕೊಂಡು 'ಕಾರ್ಖಾನೆ'ಯ ಯಜಮಾನನನ್ನು ನೋಡಿಕೊಂಡು ಬರಲು ಹೊರಟನು.

ಸಾಯಂಕಾಲದಾರಾಧನೆಯು ಮುಗಿದ ಮೇಲೆ ಪೂಜ್ಯ ಶಾಂತಪ್ಪನವರ ಮನಸ್ಸು ನಿಲ್ಲದೆ, ಮನೆಯಲ್ಲಿದ್ದರೆ ಮಾತನಾಡಿಸಿಕೊಂಡು ಬರೋಣ, ಇಲ್ಲವಾದರೆ ಮನೆಯನ್ನಾದರೂ ಗೊತ್ತುಹಚ್ಚಿಕೊಂಡು ಬರೋಣ ಎಂದು ಹೊರಟರು.

ಇಮಾನ್ಯುಯೆಲ್ ಮಾಸ್ತರ ಮನೆಯು ಅವರಿಗೆ ತಿಳಿದಿದ್ದುದರಿಂದ ಅಲ್ಲಿಗೆ ನೆಟ್ಟಗೆ ಹೋಗಿ ಅಂಗಳದಲ್ಲಿ ನಿಲ್ಲಲ್ಲು, ಗ್ರೇಸಮ್ಮನೇ ಹಿಂದಿನಂಗಳದಿಂದ ಹೊರಗೆ ಬಂದು "ಸಲಾಂರಯ್ಯ, ಮಾಸ್ತರ್ ಮನೆಯವರೆಲ್ಲರೂ ಊರಿಗೆ ಹೋಗಿದ್ದಾರೆ." ಎಂದಳು.

"ನಂಗೆ ಗೊತ್ತದಮ್ಮ. ನಿಮ್ಮ......ನಿಮ್ಮ ......ದೇವಪ್ರಿಯಪ್ಪನು ಮನೆಯಲ್ಲಿದ್ದಾರೇನು ? "

"ಇಲ್ಲ ; ಕಾರ್ಖಾನೆ ಯಜಮಾನರನ್ನು ಕಂಡುಬರಲಿಕ್ಕೆ ಹೋಗಿದ್ದಾರೆ. ಒಳಗೆ ಬಂದು ಕೂತುಕೊಳ್ರಯ್ಯ "

ಒಂದು ಸಣ್ಣ ಮೂರುಕಾಲು ಮಣೆಯನ್ನು ಹಾಕಿ, "ಕೂತ್ಕೊಳ್ಳಿ-ಬಡವರು ನಾವ್ರ; ಒಳ್ಳೇ ಕುರ್ಚಿಗಳಿಲ್ರಯ್ಯ" ಅಂದಳು.

"ಸಾಕಮ್ಮ ತಂಗೀ ಸಾಕು. ನೀವು ನಿನ್ನೇನೆ ಬಂದಿರೋ ಇಲ್ಲಿಗೆ ? "

"ಹೌದ್ರಿ "

"ಈಗ ದೇವಪ್ರಿಯಪ್ಪನಿಗೆ ಕೆಲಸ ಸಿಕ್ಕಿರುವುದು ಚಲೋ ಆಯಿತು. ಪಗಾರ ಎಷ್ಟಂತೆ ? "

"ಏನಂದ್ರಯ್ಯ ? "

"ಪಗಾರ-ಸಗಾರ- ಹಣ ಎಷ್ಟು ಕೊಡ್ತಾರೆ ? "

"ದಿನಗೂಲೀನ್ರಯ್ಯ- ಹತ್ತಾಣೆ ಅಂತೆ. ಮುಂಪಕ್ಕೆ ಹೆಚ್ಚಿಸಬಹುದು. ಭಾನುವಾರಗಳಲ್ಲಿ ಕೆಲಸವಿಲ್ಲ; ಕೂಲಿಯೂ ಇಲ್ಲ.

"ಹದಿನೈದು ರೂಪಾಯಿ ತಿಂಗಳಿಗೆ ಅಂತ ಇಟ್ಕೊಂಡರೂ ಕಷ್ಟ ಆಗ್ತದಲ್ಲಮ್ಮ. ಬಾಡಿಗಿ ಏನು ಕೊಡ್ತೀರಿ? "

"ಮಾಸ್ತರ್‌ರವರು ಮೂರು ತಿಂಗಳು ಬರೋದಿಲ್ಲವಂತೆ. ಅವರು ಬರೋತನಕ ಮನೆ ಉಸ್ತುವಾರಿ ನೋಡಿಕೊಂಡಿರುತ್ತೇವೆ; ಅದಕ್ಕೆ ಬದಲು ಈ ಎರಡು ಕೊಠಡಿಗಳನ್ನು ಕೊಟ್ಟಿರುತ್ತಾರೆ."

"ಚಲೋ ಅದೆ, ಬಹಳ ಚಲೋ ಅದೆ. ಆದರೂ ಹದಿನೈದು ರೂಪಾಯಿ ಸಾಕಾಗ್ತದೇನು ? ನೀವೇನೂ ಕೆಲಸ ಮಾಡ್ತೀರಲಿಲ್ಲವೆ ? "

"ಇರೋದು ನಾವಿಬ್ಬರೇ. ಹೇಗೋ ಕಾಲತಳ್ಳಿಕೊಂಡು ಹೋಗ್ತೇವೆ. "

"ನೀವೇನೂ ಕೆಲಸಮಾಡುತ್ತಿರಲಿಲ್ಲವೆ ?"

"ಬೈಬಿಲ್ ಉಮನ್ ಕೆಲಸ ಮಾಡ್ತಿದ್ದೆ; ತೆಗೆದುಹಾಕಿಬಿಟ್ಟರು. ಆ ಮೇಲೆ ಇಲ್ಲಿಗೆ ಬಂದು ಬಿಟ್ಟೆವು. "

"ತೆಗೆದು ಹಾಕಿಬಿಟ್ಟರು ! ಯಾಕೆ ತಂಗೀ ? "

"ಮಿಸಮ್ಮನವರು ಹೇಳಿದಂತೆ ಒಂದು ವಿಚಾರದಲ್ಲಿ ನಡೆದುಕೊಳ್ಳಲಾಗಲಿಲ್ಲ. ಆದುದರಿಂದ- "

"ಹಾಗಾದರೆ ಆ...ವಿಷಯ...ನಿಜವೆನ್ನುವಿರೇನು ? "

"ಯಾವ ವಿಷಯ ? "

ಗ್ರೇಸಮ್ಮನು ಚಕಿತಳಾಗಿ ಕೇಳಿದಳು. ಪಾಲಕರು ಹೇಳಲು ಬಾಯಿಲ್ಲದೆ ಕುಳಿತರು. ಈ ಸಮಯಕ್ಕೆ ಸರಿಯಾಗಿ ದೇವಪ್ರಿಯನು ಬಂದನು.

" ದೇವರ ದಯು ಗ್ರೇಸಾ...ನೋಡಲಿಲ್ಲ ಕ್ಷಮಿಸಿರಯ್ಯ, ಸಲಾಂ."

"ಸಲಾಂ ದೇವಪ್ರಿಯಪ್ಪ. ಸೌಖ್ಯವೋ ? ಹೋದ ಕೆಲಸ ಚಲೋ ಆಯಿತೋ ? "

ಊರಿನ ಪಾಲಕರು ಇವರಿಗೆ ಪತ್ರಬರೆದು ಎಲ್ಲಾ ವಿಷಯಗಳನ್ನು ತಿಳಿಸಿರಲೇಬೇಕೆಂದು ಪೂಜ್ಯ ಶಾಂತಪ್ಪ ಇಟ್ಟುಂಗಿಯವರ ಮಾತಿನಿಂದ ಊಹಿಸಿದನು. ಈ ಕಾರಣದಿಂದ ಅವನ ಮುಖವು ಕೊಂಚ ಕಪ್ಪೇರಿತು.

"ದೇವರ ದಯವೊಂದಿದ್ದರೆ ಎಲ್ಲವೂ ನೆಟ್ಟಗಾಗುತ್ತ್ರಯ್ಯ. ನಾಳೆಯಿಂದಲೆ ಹನ್ನೆರಡಾಣೆ–ಮುಂಚೆ ಹತ್ತಾಣೆ ಅಂತ ಹೇಳಿದ್ದರೂ–ಕೆಲಸ ಸಿಕ್ಕಿದೆ. "

"ಬಹಳ ಸಂತೋಷ, ಬಹಳ ಸಂತೋಷ. ದೇವರು ಪಾಪಿಷ್ಟರ ಪಕ್ಷಪಾತಿ– ನಾವೆಲ್ಲರೂ ಪಾಪಿಷ್ಟರೇ ದೇವರೆದುರಿನಲ್ಲಿ."

" ನೀವು ಮಾತಾಡುತ್ತಾ ಇರ್ರಿ; ಅಯ್ಯಾವರಿಗೂ ನಿಮಗೂ ಚಾ ಮಾಡಿಕೊಡುತ್ತೇನೆ. "

" ಬೇಡಮ್ಮ. ನಿಮಗೆ ಅನೇಕ ತೊಂದರೆಗಳಿರಬಹುದು. ಚಾ ಗೋಜಿಗೆ ಕೈಹಚ್ಚ ಬೇಡಿ."

"ನೀವು ನಮ್ಮ ಮನೆಗೆ ಬರುವುದು ಹೆಚ್ಚೋ ನಾವು ಮಾಡುವುದು ಹೆಚ್ಚೋ ? ಕಷ್ಟಗಳಿಗೇನು, ಇದ್ದೇ ಇರುತ್ತವೆ" ಎಂದು ಮುಂಗುಳ್ನಗೆಯಿಂದ ಒಳಕ್ಕೆ ಹೋದಳು.

ಪಾಲಕರು ವಿಷಯಗಳನ್ನು ತಾನು ತಿಳಿದುಕೊಂಡು ಸಹಾಯ ಮಾಡಬೇಕೆಂದು ತವಕಪಡುತ್ತಿದ್ದುದರಿಂದ, ಕೊಂಚ ಹೊತ್ತು ಯೋಚಿಸಿ, ಕೊನೆಗೆ " ಎಷ್ಟು ಮಕ್ಕಳಪ್ಪ, ತಮ್ಮ ? " ಎಂದು ಕೇಳಿದರು. "ಮಕ್ಕಳಿಲ್ಲ" ಎಂದು ದೇವಪ್ರಿಯಪ್ಪನು ಹೇಳಿದನು.

" ಮದುವೆಯಾಗಿ ಎಷ್ಟುದಿನಗಳಾದುವು? "

"ನಮ್ಮ ಲೆಕ್ಕದ ಪ್ರಕಾರ ಈ ದಿವಸ ಬೆಳಿಗ್ಗೆ ಮದುವೆಯಾಯಿತು."

"ಏನು! ಹಾಗಂದರೆ....."

" ಏನೂ ತಿಳಿದವರಂತೆ ಏಕೆ ನಟಿಸುತ್ತೀರ್ರಯ್ಯ ? ನಿಮಗಾಗಲೇ ನನ್ನ ವಿಚಾರ ಕಾಗದ ಬಂದಿರಬೇಕು,...ಊರಿನ ಪಾಲಕರಿಂದ. ಇಲ್ಲದಿದ್ದರೆ ನಮ್ಮ ಮನೆ ಹುಡುಕಿಕೊಂಡು ನೀವೇಕೆ ಬರುತ್ತಿದ್ದಿರಿ ? ನಾಳೆ ನಮ್ಮ ಕಾರ್ಖಾನೆಗೆ ಹೋಗಿ ಮೇನೇಜರ ಹತ್ತಿರ ಇದನ್ನೆಲ್ಲಾ ಹೇಳಿ, ಅಲ್ಲಿ ಕೆಲಸಕೊಡದಂತೆ ಮಾಡುತ್ತೀರಿ ತಾನೆ ? ಆಗಲಿ, ನಿಮ್ಮ ಕೈಲಾದುದನ್ನು..."

"ತಮ್ಮ! ಸಿಟ್ಟುಮಾಡಿಕೊಳ್ಳಬೇಡಪ್ಪ ಪತ್ರವೇನೋ ಬಂದದೆ; ಇಲ್ಲವೆನ್ನೋದಿಲ್ಲ. ಆದರೆ ನಿಮ್ಮ ಮೇನೇಜರವರಲ್ಲಿ ಇದನ್ನೆಲ್ಲಾ ಹೇಳಿ, ಕೆಲಸ ತಪ್ಪಿಸುತ್ತೇನೆಂದು ತಿಳೀಬೇಡಿ, ಕಾಲಕ್ಕೂ ತಿಳೀಬೇಡ. ಪ್ರೀತಿಯಿಂದ ಒಂದೆರಡು ಮಾತಾಡಿ ಹೋಗೋಣ ಎಂದು ಬಂದಿದ್ದೇನು, ಅಷ್ಟೆ."

"ನಿಮ್ಮ ಪ್ರೀತಿಯ ಮಾತುಗಳೇನು, ಹೇಳಿ ? "

"ಹಾಂಗೆ ಸವಾಲು ಮಾಡಬಾರದು, ತಮ್ಮ. ಇಂಥಾ ಬಾಳು ಬಾಳೋದಾದರೆ ಅದರ ಪರಿಣಾಮವೇನಾದೀತೆಂದು ಯೋಚಿಸಿದ್ದೀ ಏನು?"

" ಪರಿಣಾಮವೇನು ? ತಿಳಿದೇ ಇದೆ. ನೀವು ಕರ್ತನ ಸಹಪಂಕ್ತಿ ಭೋಜನಕ್ಕೆ ಸೇರಿಸೋದಿಲ್ಲ, ನಮ್ಮ ಮನೆಗೆ ನೀವ್ಯಾರೂ ಬರೋದಿಲ್ಲ. ಹಾದಿಯಲ್ಲಿ ಹೋಗುತ್ತಿರುವಾಗ ನನ್ನ ಕಡೆ, ಇಲ್ಲವೇ ನನ್ನ ಹೆಂಡತಿಯ ಕಡೆ ಬೊಟ್ಟುತೋರಿಸಿ ಹಾಸ್ಯ ಮಾಡುತ್ತಾರೆ. "

" ಛೆ! ಛೆ! ಇಷ್ಟು ಸುಲಭವಾಗಿ ಇದನ್ನೆಲ್ಲಾ ಹೇಳಬೇಡ, ತಮ್ಮ. ಮಂದಿ ಬೇಕಾದುದನ್ನು ಹೇಳಿಕೊಳ್ಳಲಿ; ಅದು ನಮಗೆ ಬೇಡ. ನಮ್ಮ ಮನಸ್ಸಿಗೇ ನಾವು ಪಾಪಿಷ್ಟರೆಂದು ತೋರುವಂತೆ ಇರಬಾರದು. "

"ನನ್ನ–ನವಿಬ್ಬರ ಮನಸ್ಸಿಗೇನೋ ನಾವು ಪಾಪಿಷ್ಟರೆಂದು ತೋರುವುದಿಲ್ಲ. ಮಂದಿ ಬೇಕಾದುದನ್ನು ಹೇಳಿಕೊಳ್ಳಲಿ; ಅದರಿಂದ ನಮ್ಮಿಬ್ಬರಿಗೇನು ? "

"ತೋರದೇ ಏನು– ತೋರುತ್ತದೆ. ಆದರೆ ಹೇಳುವುದಿಲ್ಲ. ನೋಡು, ತಮ್ಮ! ಗಂಡನು ಬದುಕಿದ್ದರೂ, ಅವನ ಹೆಂಡತಿಯು ನ್ನೆತ್ತಿಕೊಂಡು ಬಂದು ಅವಳೊಂದಿಗೆ..."

"ಹೌದ್ರಯ್ಯ. ಹೆಂಡಕುಡುಕ ವ್ಯಭಿಚಾರಿಯಾದ ಗಂಡನು ಎಲ್ಲಿಗೋ ಓಡಿ ಹೋದರೂ, ತನ್ನ ಹೆಂಡತಿ ಸತ್ತರೂ ಸಾಯಲಿ ಎಂದು ಬಿಟ್ಟರೆ ಪಾಪವಲ್ಲ ! ಆದರೆ ದಿಕ್ಕುಗಾಣದಿರುವವಳಿಗೆ, ಹಿಂದಿನ ಪ್ರೇಮದ ಸಲುವಾಗಿ, ಸಹಾಯ ಮಾಡುವುದು ಪಾಪ. ಆಕೆಯ ಹೊಟ್ಟೆಯಲ್ಲಿ ಹುಟ್ಟುವುದಕ್ಕಿರುವ ಮಗುವಿನ ತಂದೆಯೆನಿಸಿಕೊಳ್ಳುವವನಿಗೆ ಅದನ್ನು ಸಾಕುವ ಯೋಗ್ಯತೆಯಿಲ್ಲದಿದ್ದರೂ ' ನಮಗೇಕೆ ? ' ಎಂದು ಸುಮ್ಮನಿದ್ದರೆ ಪಾಪವಿಲ್ಲ ! ಆದರೆ ಅದನ್ನೂ ಕಟ್ಟಿಕೊಂಡು ಹೊಟ್ಟೆಯಲ್ಲಿ ಹುಟ್ಟಿದ ಮಗುವಿನಂತೆ ನೋಡಿಕೊಳ್ಳಬೇಕೆಂದು

ಮನಸ್ಸು ಮಾಡಿಕೊಂಡರೆ ಅದು ಪಾಪ. ಪಾಪಿಗಳನ್ನು ಉದ್ಧಾರ ಮಾಡುವುದಕ್ಕೋಸ್ಕರ ದೇವರು ತನ್ನ ಮಗನನ್ನು ಕುಳುಹಿಸಿ ಕೊಟ್ಟದ್ದೂ ಪಾಪವಲ್ಲವೆ, ನಿಮ್ಮ ಮತದ ಪ್ರಕಾರ ?"

ಪಾಲಕರಿಗೆ ಯೋಚನೆಗಳು ಹುಟ್ಟಲಾರಂಭಿಸಿದುವು. ಅವರು ಮಕ್ಕಳೊಂದಿಗರು; ಅವುಗಳಲ್ಲಿ ಬಹಳ ಪ್ರೀತಿಯಿಟ್ಟುಕೊಂಡಿದ್ದರು. ಅನಾಥಳಾದ ಹೆಣ್ಣುಮಗಳೊಬ್ಬಳಿಗೆ ಆಶ್ರಯವನ್ನಿತ್ತು, ಅವಳ ಮಗುವನ್ನೂ ಸಾಕಲು ಸಿದ್ಧನಾಗಿರುವುದನ್ನು ನೋಡಿ, ಅವರ ಹೃದಯವು ಹಿಗ್ಗಲಾರಂಭಿಸಿದರೂ, ಮದುವೆಯಾಗದ ಹೆಂಗಸಿನೊಂದಿಗೆ ಸಹವಾಸಮಾಡಿರುವನೆಂಬುದನ್ನು ನೆನಸಿಕೊಂಡು ಕುಗ್ಗುತ್ತಿದ್ದಿತು. ಇಂತಹ ಮನೋಚಂಡಮಾರುತದಲ್ಲಿ ಅವರು ಮೂಕರಂತೆ ಕುಳಿತುಬಿಟ್ಟರು. ಕೊನೆಗೆ "ಅಯ್ಯಾ, ದೇವಪ್ರಿಯಪ್ಪ, ನಾನು ಹೊರಡುತ್ತೇನೆ. ಮತ್ತೆ ಭೆಟ್ಟಿಯಾಗಿ ಇದನ್ನು ಮಾತನಾಡೋಣ. ಗ್ರೇಸಮ್ಮನಿಗೂ ಸಲಾಂ ಹೇಳಿ ಬಿಡು" ಎಂದು, ಹೊರಗೆ ಬರುತ್ತಾ, ಕರವಸ್ತ್ರದಿಂದ ಕಣ್ಣೊರಿಸಿಕೊಂಡು, ಮನೆಯ ಹಾದಿಯನ್ನು ಹಿಡಿದರು.

ದೇವಪ್ರಿಯನು ಕೊಂಚ ಹೊತ್ತು ಕೈಮೇಲೆ ತಲೆಯನ್ನಿಟ್ಟುಕೊಂಡು ಚಿಂತಿಸುತ್ತಿದ್ದವನು, ತಟ್ಟನೆದ್ದು ಒಳಗಿನ ಕೊಠಡಿಗೆ ಹೋದನು.

"ಗ್ರೇಸಾ, ಪಾಲಕರಿಗೆ ಟೀ— — — —"

ಮಾತು ಅರ್ಧದಲ್ಲಿಯೇ ನಿಂತಿತು. ಒಲೆಯ ಮುಂದೆ ಕುಳಿತಿದ್ದ ಆಕೆಯು ಅಳುತ್ತಿದ್ದಳು ! ಒಲೆಯಾರಿ ಹೋಗಿದ್ದಿತು. ಒಲೆಯ ಮೇಲಿದ್ದ ಪಾತ್ರೆಯು ತಣ್ಣಗಾಗಿದ್ದಿತು.

"ಏನಿದು ಗ್ರೇಸಾ ! ಕೆಲಸಕ್ಕೆ ಬಾರದ್ದನ್ನೆಲ್ಲಾ ಹಚ್ಚಿಕೊಂಡು, ಅತ್ತತ್ತು ಮೈ ಕೆಡಿಸಿಕೊಳ್ಳುತ್ತೀಯೇನು ! ಅಳುವುದೇಕೆ ?"

"ನೋಡಿ, ಅವಮಾನವು ಇಲ್ಲಿಗೆ ಬಂದರೂ ತಪ್ಪಿಲ್ಲ. ಎಲ್ಲಿ ತಾನೇ ಮರೆಸಿಕೊಳ್ಳುವುದು ? ನನ್ನಿಂದ ನೀವಿಷ್ಟು........"

"ಆ ಮಾತನ್ನಾಡಬೇಡ. ನಾನು ನನ್ನ ಮನಸ್ಸೊಪ್ಪಿದ್ದನ್ನಲ್ಲದೆ ಬೇರೆ ಯಾವುದನ್ನೂ ಎಂದೂ ಮಾಡಲಾರೆ."

"ನಿಮ್ಮಲ್ಲಾವ ತಪ್ಪೂ ಇಲ್ಲ. ತಪ್ಪು ನನ್ನದು."

"ಏನು ಹುಚ್ಚು ಮಾತುಗಳನ್ನಾಡುವೆ ?"

"ನೋಡಿ .... ಅವರನ್ನು...ಮದುವೆಯಾದಾಗ ದೇವಾಲಯದಲ್ಲಿ ಕೊಟ್ಟ ಮಾತಿನಂತೆ ನಾನು ನಡೆದಿಲ್ಲ."

"ಆ ಸುದ್ದಿಯನ್ನೇ ಬಿಟ್ಟುಬಿಡು, ಗ್ರೇಸ."

"ಹೇಗೆ ಬಿಡಲಾಗುವುದು ? 'ಎಲ್ಲಾ ಕಷ್ಟ ಸುಖಗಳಲ್ಲಿಯೂ, ಮೇಲು ಕೀಳುಗಳಲ್ಲಿಯೂ, ಮರಣವು ನಮ್ಮಿಬ್ಬರನ್ನಗಲಿಸುವತನಕ' ಒಟ್ಟಿಗಿರುವುದಾಗಿ ನಾನು ಮದುವೆಯಾದಾಗ ಮಾತು ಕೊಡಲಿಲ್ಲವೆ ? ಈಗ ಹಾಗೆ ಮಾಡದಿರುವುದು ತಪ್ಪಲ್ಲವೇ ?"

"ಹಾಗಾದರೆ ನೀನೂ ಕಳ್ಳತನ ಮಾಡಿ, ಪೋಲೀಸಿನವರ ಕೈಗೆ ಸಿಕ್ಕಿ ಬಿದ್ದು, ಜೈಲಿಗೆ ಹೋಗಿ, ಆ......ಆ......ಚಂಡಾಳನ ಕೂಡ ಇರು ಹೋಗು."

ಗ್ರೇಸಮ್ಮನು ನಡುಗಿ, ತಲೆಯೆತ್ತಿ ನೀರವವಾಗಿ ದೇವಪ್ರಿಯನನ್ನು ನೋಡಿದಳು. ಆಕೆಯ ತಲೆಯನ್ನು ತನ್ನೆರಡು ಕೈಗಳಿಂದಲೂ ಹಿಡಿದು, ತನ್ನ ತೊಡೆಯ ಮೇಲಿಟ್ಟುಕೊಂಡು, ಮುಂಗುರುಳನ್ನು ಸರಿಮಾಡುತ್ತಾ, ಹೇಳತೊಡಗಿದನು;

"ಕೇಳು ಗ್ರೇಸ — ಅವನೂ ಕೊಟ್ಟ ಮಾತನ್ನು ನಡಿಸಿಕೊಂಡು ಬಂದಿದ್ದರೆ, ನೀನು ನಿನ್ನ ಮಾತನ್ನು ನಡಿಸಲಿಲ್ಲವೆಂತ ಕೊರಗಬಹುದಾಗಿತ್ತು. ಅಂದರೆ ಅವನು ತಪ್ಪು ಮಾಡಿದರೆ ನೀನೂ ತಪ್ಪು ಮಾಡಬೇಕೆಂದಲ್ಲ. ಆದರೆ ಯಾವಾಗ 'ಈಕೆಯೊಬ್ಬಳೊಂದಿಗೆ ಮಾತ್ರ ಬದುಕುವೆನೆಂದು ಮಾತುಕೊಡುತ್ತೇನೆ' ಎಂಬುದನ್ನು ಮರೆತು, ಬೇರೆ ಸಂಸಾರಗಳನ್ನು ಮುರಿದನೋ, ಅಂದಿಗೇ ಅವನು ಆತ್ಮದಲ್ಲಿ ಸತ್ತ. ಮರಣವೆಂದರೆ ದೇಹಕ್ಕೆ ಮಾತ್ರ ಎಂದು ಸತ್ಯವೇದದಲ್ಲಿ ಎಲ್ಲಿ ಹೇಳಿದೆ ? ಆದುದರಿಂದ ಅವನು ಸತ್ತ. ಅಲ್ಲಿಗೆ ನಿನ್ನ ಮಾತೂ ಮುಗಿಯಿತು. ಈಗ ಹೊಸದಾಗಿ ನಾವಿಬ್ಬರೂ ಒಬ್ಬರಿಗೊಬ್ಬರು ಮಾತು ಕೊಟ್ಟುಕೊಂಡಿರುತ್ತೇವೆ. ಇದನ್ನು ನಡಿಸೋಣ."

"ನಡಿಸಲು ಯಾವ ಅಡ್ಡಿಯೂ ಬರದಂತೆ ಮಾಡಬೇಕೆಂದು ಯಾವಾಗಲೂ ದೇವರಿಗೆ ಬೇಡುತ್ತೇನೆ. ನನಗೇನೋ ಮತ್ತೆ... ಅವರೊಂದಿಗೆ...ವಾಸಮಾಡುವುದಕ್ಕೆ ಮನಸ್ಸಿಲ್ಲ. ನೆನಸಿಕೊಂಡರೇನೇ ಹೆದರಿಕೆಯಾಗುತ್ತದೆ. ಆದರೆ ನೀವು ಹೇಳುವಂತೆ ...ಅವರು... ಆತ್ಮದಲ್ಲಿ ಸತ್ತಿದ್ದರೆ, ನಮಗೇಕೆ ಗುಡಿಯಲ್ಲಿ... ಮದುವೆಯಾಗುವುದಕ್ಕೆ ... ಬಿಡುವುದಿಲ್ಲ ?"

"ಅಯ್ಯೋ ಹುಚ್ಚಿ !— ಈ ಫರಂಗಿ ಪಾದ್ರಿಗಳೆಲ್ಲರೂ ಕಳ್ಳರು ! ಈ ದೇಶೀಯ ಪಾಲಕರೂ ಉಪದೇಶಿಗಳೂ ಹೊಟ್ಟೆಗಾಗಿ ಅವರು ಹೇಳಿದಂತೆ ಕುಣಿಯುವವರು ! ಇಂಥವರಿಂದ ನಮಗೆ ನ್ಯಾಯವು ಸಿಕ್ಕೀತೇ ?"

" ಹಾಗಾದರೆ ನಮ್ಮ ಗತಿ ? "

" ದೇವರೇ ನಮ್ಮ ಗತಿ. "

ಮಾತುಗಳು ಬಹಳ ಹೊತ್ತು ನಡೆದವು. ಪಕ್ಕದ ಠಾಣೆಯಲ್ಲಿ ಗಂಟೆ ಹೊಡೆಯಲಾರಂಭಿಸಿತು.

"......ಏಳು, ಎಂಟು, ಒಂಭತ್ತು ! ಚೆನ್ನಾಯಿತು !! ಇನ್ನೂ ಅಕ್ಕೀ ಹಾಕಲಿಲ್ಲ. ಒಲೆಯ ಮೇಲೆ........."

ಆಕೆ ಏಳುವುದರಲ್ಲಿದ್ದಳು.

" ಬೇಡ, ಗ್ರೇಸ ಈಗ ಮಾಡುವುದಂದರೇನು ! ಅಂಗಡಿಗೆ ಹೋಗಿ ರೊಟ್ಟಿ-ಬಾಳೆಹಣ್ಣು ತರುತ್ತೇನೆ. ಅದನ್ನು ತಿಂದು, ಒಲೆಯ ಮೇಲಿನ ನೀರನ್ನೇ ಮತ್ತೆ ಮರಳಿಸಿ, ಚಾ ಮಾಡಿ, ಕುಡಿದು ಮಲಗಿ ಬಿಡೋಣ. "

ದೇವಪ್ರಿಯನು ಅಂಗಡಿಗೆ ಹೋದನು. ಆಕೆ ಅಡಿಗೆ ಮನೆಗೆ ಹೋದಳು.

೩.

ಶನಿವಾರ ಸಾಯಂಕಾಲ ದೇವಪ್ರಿಯನು ಅರ್ಧದಿನದ ಕೆಲಸ ತೀರಿಸಿಕೊಂಡು ಬಂದು ಸ್ನಾನ ಮಾಡಿ, ಅಂಗಳದಲ್ಲಿ ಮೈ ಒರಸಿ ಕೊಳ್ಳುತ್ತಿದ್ದನು, ಪಾಲಕರಾದ ಪೂಜ್ಯ ಶಾಂತಪ್ಪ ಇಟ್ಟಂಗಿಯ ವರು ಬಂದಾಗ.

"ಏನು ದೇವಪ್ರಿಯಪ್ಪನವರೆ, ಹ್ಯಾಂಗಿದ್ಧೀರಿ ?—ಓಹೊ ! ಸ್ನಾನ ಮಾಡ್ತಿದ್ದೀರೇನು ? ಗೊತ್ತಾಗ್ಲಿಲ್ರಿ. "

" ಪರವಾಯಿಲ್ಲ ಬನ್ರಯ್ಯ. ಏನು ಮಾಡೋದು, ಬಚ್ಚಲ ಮನೆ ಬೇರೆಯಿಲ್ಲ. "

"ಮಾಸ್ತರ್ ಮನಿಯೊಳಗೆ ಒಂದು ಇರಬೇಕಲ್ರಿ ? "

" ಅವರು ನಮಗೆ ಈ ಎರಡು ಕೊಠಡಿ ಬಿಟ್ಟುಕೊಟ್ಟಿ ರೋದು. ಬೀಗ ಇವೆ ಅಂತ ಅವರ್ನ ಕೇಳ್ದೇ ಮಾಡ್ವೇ ಉಪ ಯೋಗಿಸಲಾಗುವುದೇನು ? "

" ಚೆಂದ ಕಾಣೋದಿಲ್ಲ. ಅದಿರಲಿ. ತಮ್ಮಯ್ಯ ...... ಆ ಹೊತ್ತು ನಾವು ಮಾತಾಡ್ತಿದ್ದೆವಲ್ಲಾ, ಆ ವಿಷಯ, ಅದರ ವಿಚಾರ ಒಂದು ಮಾತದೆ. ಕೊಂಚಕಾಲ ಈಕೆಯನ್ನ ನಮ್ಮ ಹೆಣ್ಣುಮಕ್ಕಳ ಶಾಲೆಯಲ್ಲಿ ಬಿಟ್ಟಿದ್ದರೆ ಒಳ್ಳೇದಂತ ನಂಗೆ ಕಾಣಿ ಸ್ತದೆ. "

"ಅಯ್ಯಾ, ನಿಮ್ಮ ಮಿಷನೆರಿಗಳ ಸಹಾಯ ಸಾಕು, ಸಲಾಂ."

" ಏಕೆ ತಮ್ಮಯ್ಯ ಹಾಂಗಂತೀ ? "

" ನಾವು ಮಿಷನೆರಿಗಳ ಕೈ ಕೆಳಗೆ ಅದರಲ್ಲೂ ಅಮೆರಿಕನ್ ಮಿಷನ್‌ರಿಗಳ ಕೈಕೆಳಗೆ ಕೆಲಸ ಮಾಡಿದವರು. ಆ ಸುಖ ಗೊತ್ತಿದೆ. "

" ಇಲ್ಲ, ಹಾಗನ್ನಬೇಡ; ಅವರು ತುಂಬಾ ದಯಾಳು ಗಳು........."

"ನಾ ಬಲ್ಲೆ ಅವರ ದಯವನ್ನು. ಹಿಂದಿನ ಕಾಲದಲ್ಲಿ ಮುದ್ರೆ ಯೊತ್ತಿಸಿಕೊಂಡ ಗುಲಾಮರಿಗೆ ತೋರಿಸಿದ ದಯೆಯನ್ನೇ, ಮುದ್ರೆಯೊತ್ತಿಸಿಕೊಳ್ಳದ ಗುಲಾಮರೆಂದು ನಮ್ಮನ್ನೆಣಿಸಿ ಕೊಂಡು, ನಮಗೂ ತೋರಿಸುತ್ತಾರೆ. ಅದರಲ್ಲೂ ಅಮೇರಿಕ ದೇಶದಲ್ಲಿ ಮನಸ್ಸಿ ಗುಲಾಮ ವ್ಯಾಪಾರವನ್ನು ಮಾಡಿದವರ ಸಂತತಿಯವರಾದುದರಿಂದ ಈ ಅಮೆರಿಕನ್ ಮಿಷನೆರಿಗಳಲ್ಲಿ ಆ ಗುಲಾಮರಿಗೆ ತೋರಿಸುತ್ತಿದ್ದ ದಯೆಯು ಅವರ ರಕ್ತದಲ್ಲಿ ಈಗಲೂ ಹರಿಯುತ್ತಿದೆಯಲ್ಲವೆ ? "

" ಹೀಗೆಲ್ಲಾ ಬಾಯಿಗೆ ಬಂದಂತೆ ಅನ್ನಬಾರದು, ತಮ್ಮ. ಒಂದು ವೇಳೆ ಆಕೆಯ ಗಂಡ ಇದ್ದಕ್ಕಿದ್ದ ಹಾಂಗೆ ಬಂದು, ತನ್ನ ಹೆಂಡತಿಯನ್ನು........."

" ಹೆಂಡತಿ ? ಹೆಂಡತಿ ! ಅವನಿಗೆ ಹೆಂಡತಿ ! ನನ್ನ ಬಾಗಿ ಲಿಗೆ ಬರಲಿ, ಅವನನ್ನು ಕೆಳಕ್ಕೆ ಕೆಡವಿ, ಅವನ ಗೋಮಾಳೆ ಕಡಿದು ರಕ್ತವನ್ನು ಹೀರಿಬಿಡುವೆನು. ಹೆಂಡತಿಯಂತೆ, ಆ ಹೆಂಡ ಕುಡುಕನಿಗೆ ! "

" ಇಂಥ ರೌದ್ರ ಭಾವವು ಸರಿಯಲ್ಲ ತಮ್ಮಯ್ಯ. ದೇವರ ಮಕ್ಕಳಿಗೆ ಇಂಥಾ ಕೋಪವಿರಬಾರದು. ಅದರಲ್ಲೂ ತಪ್ಪಿರು ವಾಗ........."

ಮನೆಯ ಮುಂದೆ ಮೋಟರೊಂದು ಬಂದು ನಿಂತ ಶಬ್ದವಾ ಯಿತು. ಪಾಲಕರು ಮೆಲ್ಲನೆ ದೇವಪ್ರಿಯನಿಗೆ ' ಇದೇ ವಿಚಾರ ವನ್ನು ಮಾತನಾಡುವುದಕ್ಕೆ ಬರುವುದಾಗಿ ಹೇಳಿದ್ದರು; ಅವರೇ ಅಂತ ಕಾಣುತ್ತೆ ' ಎಂದು ಹೇಳುವುದರೊಳಗಾಗಿ ಪೂಜ್ಯ ಸ್ಪಿಯರ್ಸ್ ಸಾಹೇಬರು ಬಂದರು.

ಅಂಗಳದಲ್ಲಿ ಕಾಲುಮಣೆಯನ್ನು ಹಾಕಿ ಅದರ ಮೇಲೆ ಅವ ರನ್ನು ಕೂಡಿಸಿದ ಮೇಲೆ ಮಾತು ಮುಂದರಿಯಿತು. ಹೆಚ್ಚಿನ ಗುಣವೇನೂ ಕಂಡು ಬರಲಿಲ್ಲ.

" ಗ್ರೇಸ ನನ್ನ ವಶದಲ್ಲಿರುವಳು. ನಾನು ನಿಮ್ಮ ಸಭೆಗೆ ಸೇರಿಲ್ಲ. ನೀವು ಹೇಗೆ ಅಧಿಕಾರವನ್ನು ನನ್ನ ಮೇಲೆ ಚಲಾಯಿ ಸುತ್ತೀರಿ ? " ಎಂದು ಕೂತು ಬಿಟ್ಟ, ದೇವಪ್ರಿಯನು.

" ನಿನ್ನ ವಶದಲ್ಲಿರುವಳೆಂದರೇನು ? ನೀವಿಬ್ಬರೂ ಪಾಪದ ವಶದಲ್ಲಿರುವಿರಿ. "

"ಸಾಹೇಬರೆ, ಪ್ರೀತಿಯು ಎಂದೂ ಪಾಪ ಮಾಡುವುದಿಲ್ಲ ಎಂಬುದು ನಿಮಗೆ ತಿಳಿಯದೆ ? ಪ್ರೀತಿಯು ಪಾಪವಾಗಿದ್ದಲ್ಲಿ ಯೇಸು ಕ್ರಿಸ್ತನಿಗಿಂತ ಹೆಚ್ಚು ಪಾಪಿ ಮತ್ತೊಬ್ಬನಿರಲಾರನು."

" ನಿನ್ನನ್ನೇ ನೀನು ಮೋಸಪಡಿಸಿಕೊಳ್ಳುತ್ತಿದ್ದೀಯ. ಪ್ರೀತಿ ನಿನ್ನಲ್ಲಿರುವುದಾದರೆ ಆಕೆಗೆ ಹಣ ಕೊಡು, ಬೇಡವೆನ್ನುವದಿಲ್ಲ."

" ಹೌದು, ಹಣ ಕೊಟ್ಟು, ಜೀವಾವಧಿ ನರಳುತ್ತಿರು ಎಂದು ಹೇಳಿದರೆ ಪುಣ್ಯ; ನನ್ನ ಮನೆಯಲ್ಲಿಟ್ಟುಕೊಂಡು ಆರೈಕೆ ಮಾಡಿ, ನೊಂದು ಬೆಂದಿರುವ ಜೀವಕ್ಕೆ ಆನಂದ ವನ್ನುಂಟು ಮಾಡಿದರೆ ಪಾಪ. ಇದು ನಿಮ್ಮ ಮತವೋ!"

" ಆಕೆ ಮದುವೆಯಾಗಿರುವವಳು ...... "

"ಮದುವೆ ? ಎಂಥಾ ಮದುವೆ ? ಹೆಂಡಕುಡುಕನು ಕಾಮಾಂಧನಾಗಿ ಕೊಟ್ಟ ಮಾತನ್ನು ಜೀವಾವಧಿ ಪಾಲಿಸಬೇಕೇನು ? ಅದನ್ನು ಮದುವೆಯನ್ನುವಿರಾ ? ಅದು ಪವಿತ್ರವೆ ?"

"ನೀನು ಇಷ್ಟು ಹಠಮಾಡುವುದು ಸರಿಯಲ್ಲ, ದೇವಪ್ರಿಯ. ಬೇಕಾದರೆ, ನಿಧಾನವಾಗಿ ತ್ಯಾಗಪತ್ರವನ್ನು ಆಕೆ ತೆಗೆದುಕೊಳ್ಳಲಿ. "

"ತ್ಯಾಗಪತ್ರದಿಂದೇನು ಫಲ ? ಆ ಮೇಲೆ ಕೂಡ ನಮಗೆ ದೇವಾಲಯದಲ್ಲಿ ಮದುವೆಯಾಗುವುದಿಲ್ಲವಲ್ಲ! ನಿಮ್ಮಲ್ಲಿ ಬೇಕಾದಾಗ ತ್ಯಾಗಪತ್ರ ತೆಗೆದುಕೊಂಡು ಬೇರೆ ಮದುವೆಯಾಗ ಬಹುದು. ಆದರೆ ನಮಗಾಗುವುದಿಲ್ಲವಂತೆ, ನನಗೊಬ್ಬರು ಹೇಳಿದರು."

ಮಾತನಾಡಿ ಸುಖವಿಲ್ಲವೆಂದರಿತು, ಪೂಜ್ಯ ಸ್ಪಿಯರ್ಸ ಬೋಧಕರು " ಅವರನ್ನು ಕರೆದುಕೊಂಡು ಬಾ " ಎನ್ನಲು, ಪೂಜ್ಯ ಇಟ್ಟಿಂಗಿಯವರು ಕರೆದುಕೊಂಡು ಬಂದರು. ಸ್ಪಿಯರ್ಸ ಸತಿಯವರು; ಠಾಣೇದಾರನು; ...... ಬೆಂಗರಸನ್ನನು ! ಬೆಂಗರಸನ್ನನು !!

ದೇವಪ್ರಿಯನ ರಕ್ತವು ಕುದಿಯಲಾರಂಭಿಸಿತು. ಠಾಣೇದಾರನು ಅವನ ಪಕ್ಕದಲ್ಲಿ ನಿಂತನು. ಕರ್ಕಶ ಧ್ವನಿಯಲ್ಲಿ " ಅವಳೆಲ್ಲಿ ? ಲೇ ಗ್ರೇಸ್, ಹೊರಗೆ ಬಾ. " ಎಂದು ಬೆಂಗರಸನ್ನನು ಕೂಗಿದನು. ಕಿಟಕಿಯಿಂದ ಇದೆಲ್ಲವನ್ನೂ ನೋಡುತ್ತಿದ್ದ ಗ್ರೇಸಳ ಕೈಕಾಲು ನಡುಗಿ ನಿಂತುಕೊಳ್ಳಲಾಗದೆ ಕುಳಿತುಬಿಟ್ಟಳು.

ಶಾಸ್ತ್ರೋಕ್ತವಾಗಿ ಗಂಡನೆನಿಸಿಕೊಂಡವನ ಮುಂದೆ ದೇವಪ್ರಿಯನ ಹಠವು ನಡಿಯಲಿಲ್ಲ. ಗ್ರೇಸಳನ್ನು ಸ್ಪಿಯರ್ಸ ಸತಿಯವರು ಕೈಹಿಡಿದುಕೊಂಡು ಹೋಗಿ ಮೋಟರಿನಲ್ಲಿ ಕುಳ್ಳಿರಿಸಿ, ಬೆಂಗರಸನ್ನನೊಂದಿಗೆ ಹೊರಟುಹೋದರು. ದೇವಪ್ರಿಯನು ಹುಚ್ಚನಂತೆ ನಿಂತಿದ್ದನು.

ಮೂರನೆಯ ದಿನ ದೇವಾಲಯದ ಪಂಚಾಯತಿಯಲ್ಲಿ ವಿಚಾರಣೆಯಾಗಬೇಕಾಗಿದ್ದಿತು. ಆದರೆ ಬೆಂಗರಸನ್ನನು ಪರಾರಿ ! " ತಪ್ಪಿಸಿಕೊಂಡು ಹೋದ ಕೈದಿ " ಎಂದು ವೃತ್ತಪತ್ರಗಳಲ್ಲಿ ಅವನ ಭಾವಚಿತ್ರವು ಬಂದಿದ್ದುದೇ ಅದಕ್ಕೆ ಕಾರಣ! ಗ್ರೇಸಮ್ಮನು ಮಿಷನೆರಿಗಳ ಅಧೀನಳಾದಳು. ದೇವಪ್ರಿಯನು ಒಬ್ಬೊಂಟಿಗನಾದ.

೪

ಕೆಲವು ದಿನಗಳು ಕಳೆದವು. ದೇವಪ್ರಿಯನಿಗೆ ಯಾವುದರಲ್ಲಿಯೂ ಉತ್ಸಾಹವಿಲ್ಲ. ಈ ಮಧ್ಯೆ ಆತನನ್ನು ಕೆಲಸದಿಂದ ತೆಗೆದುಹಾಕಿದ್ದುದೂ ಅವನಿಗೆ ಲಕ್ಷ್ಯವಿರಲಿಲ್ಲ. ಒಂದು ದಿನ ರಾತ್ರಿ, ಸುಮಾರು ಹತ್ತು ಗಂಟೆಯಲ್ಲಿ, ಮಿಷನ್ ಹೆರಿಗೆ ಆಸ್ಪತ್ರಿಗೆ ಹೋದನು.

ಒಂದು ಹಾಸಿಗೆಯ ಮೇಲೆ ಗ್ರೇಸಮ್ಮನು ಮಲಗಿದ್ದಳು. ಬಾಗಿಲಿನಲ್ಲಿ ನಿಂತು 'ಗ್ರೇಸಾ' ಎಂದನು. ತಟ್ಟನೆದ್ದು ಕುಳಿತಳು. ಮೆಲ್ಲನೆ ಅವಳ ಬಳಿಗೆ ಸರಿದು ಅವಳ ಹಣೆಗೆ ಮುದ್ದಿಟ್ಟನು. ಇಬ್ಬರೂ ಅತ್ತರು; ಮನದಣಿಯುವಂತೆ ಅತ್ತರು. ದೇವಪ್ರಿಯನನ್ನು ಒಳಕ್ಕೆ ಬಿಡಬಾರದೆಂಬ ಅಪ್ಪಣೆಯನ್ನು ಸಿರಾಕರಿಸಿ ಇವನನ್ನು ಒಳಕ್ಕೆ ಬಿಟ್ಟಿದ್ದ ದಾದಿಯ ಕಣ್ಣಿನಲ್ಲಿಯೂ ನೀರು ಹನಿಯಿತು. ತಿಳಿಯೊಲವಿನ ಗಮನವರಿತವರಾರು ? ಇವರಿಗೆ ಸಮಾಧಾನವನ್ನು ಮಾಡುವುದಕ್ಕೇನೋ, ಆ ದಾದಿ, ಮುದ್ದು-ಮುದ್ದಾದ ಮೂರು ದಿನದ ಗಂಡು ಮಗುವೊಂದನ್ನು ತಂದು ಅವರ ಮುಂದಿಟ್ಟಳು. ದೇವಪ್ರಿಯನು ಅದನ್ನೆತ್ತಿ, ಎದೆಗಪ್ಪಿ ಮುದ್ದಿಟ್ಟನು.

" ಗ್ರೇಸಾ ! ಈ ಮಗುವಿನ ಬಾಳು ಬಹಳ ಕಷ್ಟ" ಅಂದನು.

" ನೀವಿರುವಾಗ ನನಗೇನು ಕೊರತೆ " ಎಂದಳು ಆಕೆ.

ಕರ್ನಾಟಕದ ಬಲಿದಾನ



ಇವರು ಮುಂಬಯಿಯಲ್ಲಿ ಕ್ರಾನಿಕಲ್ ಪತ್ರದ ಸಂಪಾದಕ ವರ್ಗದಲ್ಲಿದ್ದುಕೊಂಡು, ಅಲ್ಲಿಯ ಸತ್ಯಾಗ್ರಹ ಸಮರದಲ್ಲಿ ಒಳಿತಾಗಿ ಭಾಗವಹಿಸಿದುದಕ್ಕೋಸುಗ, ಆಳರಸರಿಂದ ಆಮಂತ್ರಿತರಾಗಿ, ಕಾರಾಗೃಹವಾಸವನ್ನನುಭವಿಸುತ್ತಿರುವರು. ಹಿಂದಿನ ಅಸಹಕಾರ ಚಳವಳಿಯಲ್ಲಿ ಅಲ್ಲಿಯ ರಾಷ್ಟ್ರೀಯ ಕಾಲೇಜಿನ ಮುಖ್ಯಾಧ್ಯಾಪಕರಾಗಿದ್ದರು. ಮುಂಬಯಿಯೊಳಗಿನ ಕನ್ನಡ ಸಾರಸ್ವತ ಸಮಾಜದ ಮುಂದಾಳುಗಳಾಗಿರುವರಲ್ಲದೆ, ಅಲ್ಲಿಯ ಅಖಿಲ ಕರ್ನಾಟಕ ರಾಷ್ಟ್ರೀಯ ಸಭೆಯ ಪ್ರಸ್ಥಾಪಕರಲ್ಲೊಬ್ಬರೂ ಇರುವರು.

ಶ್ರೀಮಾನ್ ಆರ್. ಎಸ್. ಪಡಬಿದ್ರಿ, ಎಂ. ಎ.

ಶಿರ್ಶಿಯಲ್ಲಿ ಅನ್ಯಾದೃಶವಾಗಿ ಸಾಗಿದ ಕಾನನಶಾಸನಭಂಗದ ಸತ್ಯಾಗ್ರಹವನ್ನು ಏರ್ಪಡಿಸಿದವರಲ್ಲಿ ಇವರೊಬ್ಬರು.

ಶ್ರೀ ವೆಂಕಟರಾಮಯ್ಯನವರು

ಶ್ರೀ. ಎಂ. ಸಿ. ಮಾತಂಡೆ

ಹಿಂದುಸ್ತಾನೀ ಸೇವಾದಲದಲ್ಲಿ ಕಾರ್ಯಕರ್ತರೊಬ್ಬರು. ಕಾರವಾರದ ಕಾಡಿನ ಸತ್ಯಾಗ್ರಹದಲ್ಲಿ ೧ ತಿಂಗಳ ಸಕ್ರಮಶಿಕ್ಷೆಯನ್ನು ಪಡೆದರು.

ಶ್ರೀ ಗುರ್ಪುರ ವೆಂಕಟರಾಯರು

ಮಂಗಳೂರಿನ ಪ್ರಮುಖ ವ್ಯಾಪಾರಿಗಳಲ್ಲೊಬ್ಬರಾದ ಇವರಿಗೆ ಸತ್ಯಾಗ್ರಹಿಗಳಿಗೆ ಧನ ಸಹಾಯವನ್ನು ಮಾಡಿದುದಕ್ಕಾಗಿ ೬ ತಿಂಗಳ ಶಿಕ್ಷೆಯನ್ನು ಕೊಡಲಾಯಿತು.

* ಗೋಮಾಂತಕವೂ ನಾಡಿನ ಹಾಡುಗಳೂ

ಲೇಖಕರು:—ಶ್ರೀ. ಮಲ್ಲೇಶ ಪ್ರಭು ವಾಲಿ, ಎಮ್. ಎ., ಬೆಳಗಾಂವಿ

ನಾಡಿನ ಹಾಡುಗಳೆಂದರೆ ಹಳ್ಳಿಯ ಸಾಹಿತ್ಯವು. ಪ್ರತಿಯೊಂದು ನಾಡಿನಲ್ಲಿಯೂ ಇಂಥ ಸಾಹಿತ್ಯವು ಇದ್ದೇ ಇರುವದು. ಮನುಷ್ಯನ ಅಂತರಂಗದೊಳಗೆ ಸ್ವಾಭಾವಿಕವಾಗಿಯೇ ಸ್ಫುರಣ ಹೊಂದುವ ಭಾವನೆಗಳು ಇಂಥ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಒಡೆದು ಕಾಣುವ ಹಾಗೆ ಬಹು ಶ್ರಮಬಟ್ಟು ರಚಿಸಿದ ಗಡಚಾದ ಕಾವ್ಯಗಳಲ್ಲಿ ತಲೆದೋರವು. ಈ ಸಾಹಿತ್ಯವು ವಿಶೇಷತಃ ಹಾಡಿನ ರೂಪದಲ್ಲಿಯೇ ಇರುವದು. ಮತ್ತು ಹಾಗೆ ಇರುವುದಾದರೂ ಸಹಜವಾಗಿದೆ ಯಾಕೆಂದರೆ ಮನುಷ್ಯನ ಹೃದಯದೊಳಗಿನ ಬಲವಾದ ಭಾವನೆಗಳು ಆತನ ಮುಖದಿಂದ ಹೊರಬೀಳುವಾಗ್ಯೆ ಅವು ಹಾಡಿನ ರೂಪದಿಂದಲೇ ಬರುವವು. ವೇದಕಾಲೀನ ಋಷಿಗಳ ಹೃದಯದೊಳಗೆ ಅಗ್ನಿ, ಸೂರ್ಯ, ಚಂದ್ರ ಮೊದಲಾದ ನಿಸರ್ಗದೇವತೆಗಳ ವಿಷಯಕ್ಕೆ ದೃಢವಾಗಿ ಮೂಡಿದ ಭಾವನೆಗಳು ಋಕ್ಕಿನ ರೂಪದಿಂದಲೇ ಹೊರಬಿದ್ದವು. ಪುರಂದರದಾಸ, ಕನಕದಾಸ, ತುಕಾರಾಮ, ಏಕನಾಥ ಮೊದಲಾದ ಸಾಧುಸಂತರ ಹೃದಯಗಳು ಪರಮೇಶ್ವರನ ಗುಣಗಳ ವಿಷಯವಾಗಿ ಉಕ್ಕೇರಿ ಬರಲು ಅವರ ಭಾವನೆಗಳು ಪದ್ಯಗಳಲ್ಲಿಯೇ ಮೂರ್ತಗೊಂಡವು. ಅದರಂತೆಯೇ ಹಳ್ಳಿಗರೊಳಗಿನ ನಿಸರ್ಗಸಿದ್ಧವಾದ ಸೊಬಗನ್ನು ನಿರರ್ಗಲವಾಗಿ ಅನುಭವಿಸುವ ಹಳ್ಳಿಗರ ಭಾವನೆಗಳೆಲ್ಲವೂ ಅವರ ಹಾಡುಗಳಲ್ಲಿಯೇ ಮಡುಗಟ್ಟಿ ತುಂಬಿರುವವು. ಎಲ್ಲ ನಾಡುಗಳೊಳಗೆ ಗೋಮಾಂತಕವು ನಾಡಿನ ಹಾಡುಗಳೊಳಗೆ ಮಿಗಿಲಾದದ್ದು. ಅಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಮನೆಮನೆಗೂ ಸ್ತ್ರೀ-ಪುರುಷರ ಮುಖಗಳಿಂದ ಸಾವಿರಗಟ್ಟಲೆ ಹಾಡುಗಳನ್ನು ಕೇಳಬಹುದು. ಅವರಲ್ಲಿಯೂ ಫೇಸ್ತ ಮೊದಲಾದ ಕ್ರಿಶ್ಚನ್ ಹಬ್ಬಗಳಲ್ಲಿ ಸ್ತ್ರೀ-ಪುರುಷರು ಕೂಡಿ ನೃತ್ಯದೊಡನೆ ಮಂಜುಳವಾಗಿ ಹಳ್ಳಿಯ ಹಾಡುಗಳನ್ನು ಅನ್ನುವದನ್ನು ಕೇಳುವದು ಬಲು ಸೊಗಸಾಗಿರುವದು. ಮೊದಲೇ ನಿಸರ್ಗ ದೇವತೆಯಿಂದ ಅಖಂಡವಾಗಿ ಮನ್ನಿಸಲ್ಪಟ್ಟ ದೇಶವು, ಎಲ್ಲಿ ನೋಡಿದಲ್ಲೆಲ್ಲ ಜುಡುಪು ಜುಡುಪಾಗಿ ಗೊಂಚಲುಗಟ್ಟಲೆ ಕಾಯಿಗಳನ್ನು ಹೊತ್ತುಕೊಂಡು ನಿಂತಿರುವ ಟೆಂಗಿನ ಗಿಡಗಳು, ಆ ಗಿಡಗಳ ಎಲೆಗಳ ಮಧ್ಯದೊಳಗಿಂದ ದೂರವಲ್ಲಿ ನೋಡಲು ಬೆಳ್ಳಿಯ ಗುಡ್ಡದಂತೆ ಸೂರ್ಯಪ್ರಕಾಶದಲ್ಲಿ ಲಕಲಕಿಸುವ ಸಮುದ್ರದ ತೆರೆಗಳು. ಕೇದಗೆಯ ಬಣ್ಣದಿಂದೊಪ್ಪುವ ಮಂಜುಳ ದನಿಯ ಸೊಬಗಿನ ಮುಗುದೆಯರು ಪ್ರತಿಯೊಂದು ಹಳ್ಳಿಯಲ್ಲಿಯೂ ಮಿನುಗುವರು. ಅದರಲ್ಲಿಯೂ ಅಲ್ಲಿಯ ಭಾಷೆಯ ಮಾಧುರ್ಯವೇ ಬೇರೆ ತರದ್ದು. ಆ ಮಾಧುರ್ಯವನ್ನು ಸವಿಯಬೇಕಾದರೆ ಅಲ್ಲಿಯ ವಿಲಾಸಿನಿಯರು ಹಾವಭಾವಗಳೊಡನೆ ಮಾತನಾಡುವಾಗಲೇ ಕೇಳಬೇಕು. ಇಂಥ ಪ್ರದೇಶದಲ್ಲಿ ಶ್ರುತಿಮನೋಹರವಾದ ಹಳ್ಳಿಯ ಸಾಹಿತ್ಯವು ಯಥೇಚ್ಛವಾಗಿ ಇರುವುದರಲ್ಲೇನಾಶ್ಚರ್ಯ ? ಈ ಸಾಹಿತ್ಯವನ್ನು ಒಟ್ಟುಗೂಡಿಸಿ ಸಾಹಸಿಗರು ಪ್ರಸಿದ್ಧ ಪಡಿಸಿದರೆ ಅದು ಬಹು ಮನರಂಜಕವಾಗಿ ಮೆರೆಯಬಹುದು. ಇರಲಿ. ಇದರ ಸವಿಯನ್ನು ಸ್ವಲ್ಪಮಟ್ಟಿಗಾದರೂ ಕನ್ನಡಿಗರಿಗೆ ತೋರಿಸಿಕೊಡುವುದೇ ನನ್ನ ಉದ್ದೇಶವಾಗಿರುವುದರಿಂದ ಕೆಲವು ಹಾಡುಗಳನ್ನು ಕನ್ನಡ ಅನುವಾದದೊಂದಿಗೆ ಇದರಡಿಯಲ್ಲಿ ಕೊಡುವೆನು.

೧

ಪಾಶ್ಚಿಮಾತ್ಯ ಸುಧಾರಣೆಯನ್ನು ಸಂಪೂರ್ಣವಾಗಿ ಅನುಕರಿಸಿದ ಗೋಮಾಂತಕದೊಳಗಿನ ಕ್ರಿಶ್ಚನ್ ಸಮಾಜದಲ್ಲಿ ಸುಧಾರಣಾಸಹಜವಾದ ಪ್ರೇಮಗೀತೆಗಳೂ, ವಿರಹಗೀತೆಗಳೂ, ಪ್ರೇಮಬಂಧನ— ಮಧ್ಯೇತ್ರೋಟನ— ಅಂತ್ಯಸಂಘಟನ ಇವೇ ಮೊದಲಾದ ಪ್ರೇಮದ ಅನೇಕ ಸ್ವರೂಪಗಳ ವಿಷಯವಾದ ಗೀತೆಗಳೂ ಹೇರಳವಾಗಿ ಕಂಡುಬರುವದರಲ್ಲಿ

---

* ಈ ಲೇಖದೊಳಗಿನ ಕೊಂಕಣೀ ಭಾಷೆಯ ಹಾಡುಗಳನ್ನು ನನ್ನ ಮಿತ್ರರಾದ ಶ್ರೀಯುತ ವಿನಾಯಕರಾವ ಸದಾಶಿವರಾವ ಸುಖಟಣಕರ ಪಣಜಿ (ಗೋವಾ) ಇವರು ನನಗೆ ಹೇಳಿಕೊಟ್ಟು ಅವುಗಳ ಅರ್ಥವನ್ನು ಬಿಡಿಸಿ ಹೇಳಿದ್ದಕ್ಕಾಗಿ ನಾನು ಅವರಿಗೆ ತುಂಬಾ ಆಭಾರಿಯಾಗಿದ್ದೇನೆ.

—ಲೇಖಕ.

ಸಂದೇಹವಿಲ್ಲ. ಈ ಕೆಳಗಿನ ಪದ್ಯವು ಒಬ್ಬ ಸ್ತ್ರೀಯಳ ಮುಖದಿಂದ ಬಂದಿದೆ. ಅವಳು ಚಿಕ್ಕವಳಿದ್ದಾಗ್ಯೆ ಆಕೆಯ ಪ್ರೇಮವು ಒಬ್ಬ ತರುಣನ ಮೇಲೆ ಕೂತಿದ್ದಿತು. ಆದರೆ ಅನೇಕ ವಿಘ್ನಗಳಿಗೋಸುಗ ಅವರೀರ್ವರ ಲಗ್ನದ ಸುಯೋಗವು ಕೂಡಿ ಬರಲಿಲ್ಲ. ಮುಂದೆ ಸಂಪೂರ್ಣ ೧೩ ವರುಷಗಳ ವರೆಗೆ ಅವರಿಬ್ಬರೂ ಲಗ್ನವಾಗದೆ ಇದ್ದರು. ಆ ಮೇಲೆ ಸುದೈವದಿಂದ ಅನುಕೂಲ ಪರಿಸ್ಥಿತಿಯು ಒಂದೊದಗಲು ಅವರೀರ್ವರ ಲಗ್ನವಾಯಿತು. ಆನಂತರ ಅವರು ತಮ್ಮ ಆಯುಷ್ಯದಲ್ಲಿ ಸಂಘಟಿಸಿದ ಈ ಪ್ರಸಂಗವನ್ನು ಸ್ಮರಿಸಿ ಸಂವಾದ ರೂಪದಿಂದ ಆಡಿದ ಮಾತುಗಳು ಈ ಹಾಡಿನಲ್ಲಿವೆ.

(ಮೂಲ ಕೊಂಕಣೀ ಹಾಡು)

ತೀ:— ಬಾರಾ ತೇರಾ ವೋರ್ಸಾ ಜಾಲೀ ॥
ಬಾರಾ ದಿಸೋಲೆ ನಾಯರೆ ದಿಸೋ ! ॥
ವಾಟೇ ವಾತೋಡ ಆಣಿ ಮೋಡ ದೇಖುನ ಮಾಲ್ಲೀ, ॥
ಓಶೇ ಆಸ್ತಾನಾ ಆಬಾಲಾರ ನಾರೇ ಜಾಲೀ ! ॥೧॥
ಯೋ, ಯೋ, ಯೋ ರೇ ಮೋಗಾ, ಉತ್ರೀ ಕೇಲ್ಯಾ
ತುಕಾ ॥ಪಲ್ಲ॥
ತುಜ್ಯಾ ಉತರಾರ ರೇ ಪಾತಯೋನೂ ॥
ಆಜಿಸಾನ ಆಂಕವಾರ ರಾವಲೀ ಆವು ॥
ಜಾಯತೆ ಕೋಷ್ಟ ಆಂವೇ ಭೋಗೀಲೆ ॥
ಜಾಯತೆ ದೊಗೋದ ಆಂವೇ ಸೋಶಿಲೆ ॥
ಆಯ್ಜ ದೇವಾನು ಚುರಚುರೆ ಆಮಚೇ ಕೇಲೆ ॥೨॥
ಯೋ, ಯೋ, ಯೋರೇ ಮೋಗಾ, ಉತ್ರೀ ಕೇಲ್ಯಾ ತುಕಾ॥

ತೋ— ಸೊಪ್ಣೆಂಬ್ರಾಚೆ ಬಾರಾ ವೆರೂ ಮೋಗಾ ॥
ತೂ ಹಾಂಸಲೇಲೇ ಮುಂಗೋ ಮಾಕಾ ॥
ತ್ಯಾ ತುಜ್ಯಾ ಹಾಂಶಾಕು ಲಾಗೋನೂ ॥
ತ್ಯಾ ತುಜ್ಯಾ ಬೋಂಚ್ಯಾಕು ಚೋವನೂ ॥
ತುಕಾ ಆಡಚೆ ಕೇಲೆ ಮೋಗಾ ॥೩॥
ಯೋ, ಯೋ, ರೇ ಮೋಗಾ,
ಮೋಗಾಚೊ ಬೇಯ್ರ್ಝು ದಿಂವಚ್ಯಾ ಮಾಕಾ ॥

(ಕನ್ನಡ ಅನುವಾದ)

ಆಕೆಯು— ಸಂದಿದವು ಹನ್ನೆರಡು ಹದಿಮೂರು ವರುಷಗಳು
ಹನ್ನೆರಡು ದಿನ ಗತಿಸಿದಂತೆನಿಸಲಿಲ್ಲೆನಗೆ
ಗುಡುಗು ಗದರಿಸಿದವೆನಿತು ಮಿಂಚು
ಮಿಂಚಿದವೆನಿತು;
ಎನ್ನೆದೆಯು ಅಣಿಯಲಿಲ್ಲವಕೆ ॥೧॥
ಬಾ, ಬಾರ, ಬಾ, ಬಾ ಎನ್ನೆರೆಯಾ !
ಎನ್ನ ಸೊತ್ತೆಲ್ಲ ನೀನೇ ಬಾ ! ॥ಪ॥
ನೀ ನುಡಿದ ಮಾತುಗಳ ನಂಬಿ, ಇದೊ !
ಕನ್ನಿಕೆಯ ಉಳಿದಿಹೆನು ಇದುವರೆಗು,
ಕಷ್ಟವನು ಸೋಸಿದೆನೆಷ್ಟೊ,
ದುಃಖಗಳ ಭೋಗಿಸಿದೆನೆಷ್ಟೊ,
ದೇವನಿಂದೆನ್ನ ಕರುಣಿಸ್ಸಿದ್ದನಲ್ಲೇ ? ॥೨॥
ಬಾ, ಬಾರ, ಬಾ, ಬಾ…ಇತ್ಯಾದಿ.

ಅವನು— ನವ್ವಂಬರದ ಹನ್ನೆರಡನೆಯ ದಿವಸ
ನೀನಲ್ಲವೇ ನಕ್ಕೆ! ಎನ್ನನ್ನು ನೋಡಿ !
ಆ ನಿನ್ನ ಹಾಸವನು ಕಂಡು,
ಅಹಹ ! ಆ ನಿನ್ನ ಮೊಗವನು ನೋಡಿ,
ಮನಸು ಮಾಡಿದೆನು ನಿನ್ನ ತರುವುದಕೆ ॥೩॥
ಬಾ, ಬಾರೆ, ಬಾ, ಬಾ ಎನ್ನರಸಿಯೇ !
ಪ್ರೇಮದಿಂದೆನಗೆ ಚುಂಬನವನೊಂದು ನೀಡು ಬಾ॥

೨

ಪಾಶ್ಚಿಮಾತ್ಯ ವಿವಾಹ ಶಾಸ್ತ್ರದ ಪ್ರಕಾರ ವಿವಾಹದ ಪೂರ್ವದಲ್ಲಿ ವರನು ಪ್ರಿಯಾರಾಧನೆ (Courting) ಎಂಬ ಪೂರ್ವರಂಗದಲ್ಲಿ ಜಯಶೀಲನಾಗಬೇಕಾಗುವದು. ಆ ಸಮಯದಲ್ಲಿ ಅವನು ತನ್ನ ಭಾವೀ ಪತ್ನಿಯ ಕಣ್ಣೆದುರಿಗೆ ತಾನು ಮುಂದೆ ಸಜ್ಜುಗೊಳಿಸತಕ್ಕ ಇಂದ್ರಭವನದ ಚಿತ್ರವನ್ನೇ ತಂದಿರಿಸುವನು. ಅನೇಕ ಪ್ರಕಾರದ ವಸ್ತ್ರಾಲಂಕಾರಗಳ ವರ್ಣನಗಳಿಗೆ ಕೊರತೆಯೇ ಇಲ್ಲ. ವರನ ರಸಿಕತೆಯ ಮೇರೆಗೆ ಆತನ ಭಾವೀ ಪತ್ನಿಯು ಆಗಲೇ ಪ್ಯಾರಿಸ ಮಾರ್ಕೆಟನೊಳಗಿನ ಅತಿ ಸೂಕ್ಷ್ಮವಾದ ನಿಲುವಂಗಿಯ (Frock) ಮತ್ತು ಕಂಠವಸ್ತ್ರದ (Scarf) ಸ್ವಪ್ನಗಳನ್ನು ಕಾಣಹತ್ತುವಳು. ಮನೋಹರವಾದ ಮುತ್ತಿನ ಮಾಲೆಯನ್ನು ಆಗಲೇ ಹಾಕಿಕೊಂಡಿರುವಳೋ ಎಂಬಂತೆ ಕೊರಳ ಮೇಲೆ ಕೈಯಾಡಿಸಿಕೊಳ್ಳುವಳು. ತನ್ನ ಪ್ರಿಯನು ತಂದು ಕೊಡಬಹುದಾದ ಪಚ್ಚದುಂಗುರವನ್ನಿಡುವ ಬೆರಳಿನ ಕಡೆಗೆ ಸಸ್ಮಿತವಾಗಿ ಓರೆಗಣ್ಣಿನಿಂದ ನೋಡುವಳು. ಚಿಕ್ಕದಾದ ಮುಂಗೈ ಗಡಿಯಾರದ ಚಿತ್ರವನ್ನು ಧ್ಯಾನಿಸಿ ಕಣ್ಣುಗಳನ್ನು

ಆರಳಿಸುವಳು. ಉಚ್ಚತಮವಾದ ಸುಗಂಧ ದ್ರವ್ಯದ Scents ಕುಪ್ಪಿಯನ್ನು ಒಂದು ಕೈಯಲ್ಲಿ ಹಿಡಿದಂತೆಮಾಡಿ ಬೇರೊಂದು ಕೈಯಲ್ಲಿ ತನ್ನ ಭಾವೀ ಪತಿಯು ತಂದು ಕೊಡಬಹುದಾದ ಸುಸೂಕ್ಷ್ಮವಾದ ರೇಶಿಮೆಯ ಕರವಸ್ತ್ರವನ್ನು ಹಿಡಿದಂತೆ ಭಾವಿಸಿಕೊಂಡು ಅದರಮೇಲೆ ಆ ಸ್ವಪ್ನಮಯ ಸುಗಂಧದ್ರವ್ಯವನ್ನು ...ಪಡಿಸಿ ಸುಮ್ಮಸುಮ್ಮನೆ ಆಘ್ರಾಣಿಸಿ ದೀರ್ಘವಾದ ಶ್ವಾಸವನ್ನು ಬಿಡುವಳು. ಇಂಥ ಪ್ರಿಯಾರಾಧನೆಯನ್ನು ಒಬ್ಬನೇ ದೈವವಂತನು ಮಾಡತಕ್ಕದ್ದೆಂಬ ಬಗ್ಗೆ ಕಟ್ಟಳೆಯೇನೂ ಇರುವದಿಲ್ಲ. ಬೇಕಾದಷ್ಟು ಯುವಕರು ನಿರ್ಬಾಧವಾಗಿ ಆರಾಧನೆಯನ್ನುಮಾಡಿ ಬೇಕಾದಂಥ ಸ್ವಪ್ನಸಾಮ್ರಾಜ್ಯಗಳನ್ನು ನಿರ್ಮಿಸಿಕೊಂಡು ಹೋಗಬಹುದು. ಇಂಥವರೊಳಗೆಲ್ಲ ಒಬ್ಬ ಅತ್ಯಂತ ರಸಿಕ ಶ್ರೀಮಂತನೊಬ್ಬನು ಗಂಟು ಬಿದ್ದರೆ ತೀರಿತು, ಮೊದಲು ಬಂದು ಸಾಷ್ಟಾಂಗವೆರಗಿ ಹೋದ ತರುಣರೆಲ್ಲರೂ ರಸಾತಲವನ್ನು ಸೇರಿದರೆಂದೇ ತಿಳಿಯತಕ್ಕದ್ದು. ಅವರೆಲ್ಲರನ್ನೂ ಒಂದೇ ಪೆಟ್ಟಿಗೆ ಆ ತರುಣಿಯು ತಿರಸ್ಕಾರದ ಮಡುವಿನಲ್ಲಿ ದೂಡಿ ಬಿಡುವಳು. ಇಂಥ ಒಬ್ಬ ಪತಿತನಾದ ಪ್ರೇಮಿಯ ಮುಖದಿಂದ ಹೊರಟ ಉದ್ಗಾರಗಳು ಈ ಕೆಳಗಿನ ಪದ್ಯದಲ್ಲಿವೆ.

(ಮೂಲ ಕೊಂಕಣೀ ಹಾಡು)

ಸಂಸಾರ ಚಾರೀಚ ಗೋ ದಿಸಾಂಚೋ ! ॥
ಉಗಡಾಸ ಮೊಜನಾ ಮೊತೀಂತಲೋ, ॥
ಕೇಲೇಲ್ಯಾ ಕೋರಣ್ಯಾಂಚೊ, ॥
ಆಣಿ ಭೋಗಲೆಲ್ಯಾ ಸುಖಾಚೋ
ಸೆಗ್ರೆದಾನು ಕೇಲೊ ತ್ರಾತು, ॥
ಮೋದೆ ಪಾವಚ್ಯಾಕ ಕೇಲೊ ತುಂವೆ ಘಾತು ! ॥
ಕಾಳಜಾಕ ಮಾರೊನು ಭಾಲೆ ಸಾತು, ॥
ತುಟ್ಟೆಲೊ ತುಂವೆ ಸಾಂಗಾತು ॥
ಆದೆವ್ರುಶ್! ಆದೆವ್ರುಶ್ ! ಮೋರ್ರ್ಯೊ ಮೋಗಾ ॥
ದೇವ ಬೋರೆ ಕೋರೂ ರೇ ತುಕಾ ॥
ಕೋಷ್ಟ ಭೋಗತೋಡಿ ಮಾಕಾ, ॥
ಸೂಖ ಭೋಗುಗೋ ತುಕಾ ॥

(ಕನ್ನಡ ಅನುವಾದ)

ನಾಲ್ಕು ದಿನದ ಬಾಳು ಈ ಸಂಸಾರದ ಬಾಳು,
ನೆನಪು ಹಾರದು ಎನ್ನ ಮನದೊಳಗಣಿಂದ,
ಏಸು ಆಟಗಳ ಮಾಡಿ,
ಏಸು ಸೊಗಗಳ ನೀಡಿ,
ತುಡುಗಾನಿಂದೇಸು ಸಲ ಕೂಡಿ ಮಾತಾಡಿ,
ಮುಂದೆ ಗಡ ಘಾತ ಮಾಡಿದೆಯೆ !
ಭಾಲೆಗಳನೇಳು ಹೃದಯದಲಿ ಇರಿದು,
ಮಧ್ಯದಲೆ ಸಹವಾಸವನ್ನುಡಿದೆಯೆ !
ಕ್ಷೇಮವುಕ್ಕೆ ಸಖಿ, ನಿನಗೆ ಕ್ಷೇಮವೆಂದಿಗು ಇರಲಿ,
ಒಳ್ಳೆಯದನೆಂದಿಗು ದೇವ ನೀಡಲಿ ನಿನಗೆ
ದುಃಖ ಭೋಗಿಪುದು ಉಂಟೆನಗೆ ಆವಗಂ,
ಸೌಖ್ಯ ಭೋಗವು ನಿನಗೆ ಇರಲೆಂದಿಗು ॥

೩ ಮತ್ತು ೪

ಗೋಮಾಂತಕದೊಳಗಿನ ಖ್ರಿಸ್ತೀ ಸಮಾಜದಲ್ಲಿ ವಧೂವರರು ತಮ್ಮ ಲಗ್ನಸಮಾರಂಭದಲ್ಲಿ ಸಮಯಾನುರೂಪವಾದ ಪದ್ಯಗಳನ್ನು ಒಬ್ಬರನ್ನೊಬ್ಬರುದ್ದೇಶಿಸಿ ಜನಸಮುದಾಯದ ಮುಂದೆ ಅನ್ನುವ ಪದ್ಧತಿಯುಂಟು. ಈ ಪದ್ಯಗಳು ಪರಸ್ಪರರಲ್ಲಿ ದೃಢವಾದ ಪ್ರೇಮ ಮತ್ತು ವಿಶ್ವಾಸಗಳನ್ನು ಸೂಚಿಸುತ್ತವೆ. ಈ ಕೆಳಗಿನ ಎರಡು ಪದ್ಯಗಳು ಇಂಥವೇ ಇರುವವು.

(ಮೂಲ ಕೊಂಕಣೀ ಹಾಡು)

ನೋಕ್ಷೊತ್ರಾಂಚೊ ಪೊರಜೋಳರೆ ಆಜೀ ॥
ಪೇಟೊಲಾ ಯಾ ಕಾಜರಾ ಘಾರಾರೀ ॥
ಏಕವ್ರೋಟ ಜಾಲೊ ಸೊಬೆಮಾಜಾರೀ ॥
ಆಣಿ ದೇವಾಚ್ಯಾ ಮುಖಾರೀ ॥೧॥
ದಿಸೋ ಆಮೀ ಕಾಡಿಯಾ ಮೋಗಾನು ॥
ಸೊದಾಕಾಳ ಸುಖಸಂತೋಷಾನು ॥ಪಲ್ಲ॥
ಸಾಕ್ರಾಮೆಂತೂ ಘೇತಲೊ ಖೊಶೇನು ॥
ಸ್ವೋರ್ಗಿಚ್ಯಾ ಉಜವಾಡಾನು ॥
ಘೋಟಾಯು ದಿಲೀ ಆಗ್ಸಾಬೇಂತಾನು ॥
ಆಣಿ ದೇವಾಲೆ ವಿನಿಶ್ವಾಸು ॥೨॥
ದಿಸೋ ಆಮಿ? ಕಾಡಿಯಾ…ಇತ್ಯಾದಿ.

(ಕನ್ನಡ ಅನುವಾದ)

ತಾರೆಗಳ ಹೊಳಪಿನಲಿ ಇಂದು,
ಹೊಳೆದಿಹುದು ಮದುವೆ ಮನೆ ತಾನು,
ಒಂದಾದೆವಿಂದು ಜನರ ಸಭೆಯೊಳಗೆ
ದೇವನನೆ ಸಾಕ್ಷಿಯಾಗಿಟ್ಟು ॥೧॥

ದಿನಗಳನು ಕಳೆಯುವಾ ಪ್ರೇಮದಲಿ ನಾವಿನ್ನು
ಸರ್ವಕಾಲದಲಿ ಸೌಖ್ಯ ಸಂತೋಷವನು ಪಡೆದು॥ಪಲ್ಲ॥
ತುಷ್ಟನಾಗಿಹನು ಬಿಧಿ ಇಂದು,
ಸಗ್ಗದ ಬೆಳಕು ಮಿನುಗುತಲಿ,
'ಆಗ್ವಾಬ'ದಲಿ ಶಕ್ತಿಯನು ನೀಡಿ,
ಪ್ರಭುವೆ, ಗಡ ! ನಮ್ಮ ಅಯ್ಯನಾಗಿಹನು ॥೨॥
ದಿನಗಳನು ಕಳೆಯುವಾ... ಇತ್ಯಾದಿ.

ಟೀಪು - ಆಗ್ವಾಬ=ರೋಮನ್ ಕ್ಯಾಥೊಲಿಕ್ ಜನರ ವಿವಾಹ ಪದ್ಧತಿಯೊಳಗಿನ ಒಂದು ಮಹತ್ವದ ವಿಧಿಯ ಹೆಸರು

(ಮೂಲ ಕೊಂಕಣೀ ಹಾಡು)

ಚೋಯರೆ ಮೋಗಾ, ಚೋಯರೆ ಮೋಗಾ ॥
ಮೋಗಾಚೆ ದೋಳೇ ಲಾಯರೆ ಮಾಕಾ ॥ಪಲ್ಲ॥
ದೋರ್ಯಾಚೆ ಲ್ಹಾರಾರೀ ।
ಚೋಂದ್ರಿಯಾಚ್ಯಾ ಉಜವಾಡಾರೀ ।
ತ್ಯಾ ತುಝ್ಯಾ ಕೇಂಸಾಂಚ್ಯಾ ಫಾಂತಯೇರೀ ।
ಝುರಾರ ಜಾತಾ ತುಝೋ ಮುಖಾರೀ ೧॥
ಚೋಯರೆ ಮೋಗಾ ॥

(ಕನ್ನಡ ಅನುವಾದ)

ನೋಡು ಪ್ರಿಯೆ, ನೋಡು ನೋಡೆನ್ನ ಕಡೆಗಿಷ್ಟು
ತಿರುಗಿಸೆನ್ನಯ ಕಡೆಗೆ ಪ್ರೇಮದೃಷ್ಟಿಯನಿನಿತು ॥ಪಲ್ಲ॥
ಇದೊ, ಈ ಮುನ್ನೀರ ತೆರೆಗಳನು ।
ಆ ಚಂದ್ರಮನ ಬೆಳಕನ್ನು— ಅದೇಕೆ !
ಈ ನಿನ್ನ ಕೇಶಪಾಶವನೆ,
ಒಡನೆ ಆಣೆಯಾಗಿರಿಸುವೆನು ನಿನ್ನೆದುರಿನೊಳು ॥೧॥

ಪಾಶ್ಚಿಮಾತ್ಯ ಸುಧಾರಣಾಸಹಜವಾದ ಪ್ರೇಮಿಗಳ ಪರಸ್ಪರ ವಿರಹಸಂತಾಪದ ಪ್ರಸಂಗಗಳು ಗೋಮಾಂತಕದಲ್ಲಿ ವಿಶೇಷವಾಗಿರುವವೆಂದು ಮೇಲೆಹೇಳಿದೆಯಷ್ಟೆ ! ಅನೇಕ ಕಾರಣಗಳಿಗಾಗಿ ಪ್ರೇಮೀಯುಗಲವು ಒಬ್ಬರನ್ನೊಬ್ಬರು ಅಗಲಿ ಬಹುಕಾಲದ ವರೆಗೆ ದೂರ ದೂರ ಅಂತರದಲ್ಲಿ ವಾಸಿಸುವದುಂಟು. ಸಂಸ್ಕೃತ ಕವಿಗಳು ಚಂದ್ರಕಾಂತ ಶಿಲೆಯೂ ಹುಣ್ಣಿಮೆಯ ಬೆಳದಿಂಗಳೂ ವಿರಹತಾಪವನ್ನು ಶಾಂತಗೊಳಿಸುವವೆಂದು ಕವಿಸಮಯವನ್ನು ಮಾಡಿಟ್ಟುಕೊಂಡಂತೆ ಗೋಮಾಂತಕದಲ್ಲಿ 'ರುಮಡಿ' ಎಂಬ ಹೆಸರಿನ ಒಂದು ಪ್ರವಾಹದಲ್ಲಿ ಸ್ನಾನ ಮಾಡಿದರೆ ವಿರಹತಾಪವು ಶಾಂತವಾಗುವದೆಂದು ನಂಬುಗೆಯಿದ್ದಂತೆ ತೋರುತ್ತದೆ.

(ಮೂಲ ಕೊಂಕಣೀ ಹಾಡು)

ಅತೊಸ್ಕೋರಣಾಚ್ಯಾ ಮೋರ್ಝ್ಯಾ ಸುಖಾ ।
ಕಾಳಜಾಚ್ಯಾ ಮೋರ್ಝ್ಯಾ ಗೋಂಡ್ಯಾ ।
ಜಾಯತೋ ತೇಂಪ ಮೋಗಾ ಜಾಲೋ ।
ತುಝ್ಯೋ ಮೋಗ ರಿಗಲ್ಯಾರ ಮಾಕಾ ।
ತೋ ಸೋಸೂ ನೋಜೋ ಮಾಣಕಾ ।
ರುಮಡೀ ಝೋರೀಚೋ ಬಾಂಜ ಘೇನದಿಸ್ತಾ ।
ಆಯ ! ಆಯ ! ರಾಬೀ ನೋಜೋ ।
ಫುಲಾ, ಉಗಡಾಸ ಯೇತಾ ತುಜೋ ॥

(ಕನ್ನಡ ಅನುವಾದ)

ಎನ್ನಂತರಂಗದ ನಿಜಸುಖವೆ,
ಎನ್ನೆದೆಯ ಮಧುರಿಮವೆ,
ಎನಿತು ಕಾಲವು ಕಳೆದು ಹೋಯಿತು ರಮಣ,
ಇಂಗಿಹುದು ಮನದಲ್ಲಿ ಪ್ರೇಮದ ರಸವು
ಸಹಿಸಲಾರೆನ್ನ ಮಾಣಿಕವೆ, ಈ ವಿರಹವನು ನಾನು
ಎಳೆಯುವುದು ಮನವು 'ರುಮಡಿ' ನೀರಿನ ಜಳಕಕ್ಕೆ
ಅಕಟಕಟ ! ಜೀವಿಸೆನು ಹಾ ! ನಾನು,
ಓ ಎನ್ನ ಕುಸುಮ, ನಿನ್ನ ಸ್ಮರಣೆಯಾದೊಡನೆ.

೬.

ಈ ಕೆಳಗಿನ ಪದ್ಯದಲ್ಲಿ ಪೋರ್ತುಗಾಲ ದೇಶಕ್ಕೆ ಹೊರಟ ಒಬ್ಬ ತರುಣನು ತನ್ನ ಪ್ರಿಯ ಪತ್ನಿಯ ನಿರೂಪವನ್ನು ತೆಗೆದುಕೊಳ್ಳುತ್ತಿರುವನು.

(ಮೂಲ ಕೊಂಕಣೀ ಹಾಡು)

ಆಮೋರೇಜ್ಯಾ ವೇಳಾರೇ ಮೋಗಾ,
ಮೋಗಳೀಕ ಫುಲತಾರೇ ಕೋಳೇ,
ತೋಸಲೇ ತುಝೋ ದೋಳೇರೀ ಮೋಗಾ,
ಚೋಯತಾತ್ ಮುಝೋ ಕೋಡೇ.
ಪುರ್ತುಗಾಲಾಕ ವೋಯತಾ ರೇ ಮೋಗಾ,
ಏಕತೀ ದೋವರೂನ ತುಕಾ,
ಮೋಯನ್ಯಾನ ಚಿಠೀ ಪಾವಾನಾ ಜಾಲ್ಯಾರ ತುಕಾ,
ಸೇಂತೀರ ಮಾತ ತೂ ಜಾಂಯ ನಾಕಾ ॥

(ಕನ್ನಡ ಅನುವಾದ)

ಮೂರು ಸಂಜೆಯ ಹೊತ್ತಿನಲಿ, ಸುಂದರಿ,
ಮೊಗ್ಗುಗಳು ಅರಳು ವುವು ಮಲ್ಲಿಗೆಯ ಬಳ್ಳಿಯೊಳು,
ಅಂತಹವು ಈ ನಿನ್ನ ಕಣ್ಣುಗಳು,

ಬಿಟ್ಟೆಸಿಂಯೆ ನೋಡಲಿರುವ್ರವೆನ್ನನು ಈಗ.
ಪ್ರೋರ್ತುಗಾಲಕೆ ಸಖಿಯೆ ! ಹೊರಟಿಹೆನು ನಾನೀಗ,
ನಿನ್ನೊಬ್ಬಳನೆ ಬಿಟ್ಟು ಬಿಟ್ಟಲ್ಲಿ.
ತಿಂಗತಿಂಗಳಿಗೊಮ್ಮೆ ಪತ್ರವೆನ್ನದು ಮುಟ್ಟದಿರೆಯು
ಖಿನ್ನಳಾಗಲು ಬೇಡ ನೀನದಕಾಗಿ

೭.

ಹಿಂದುಸ್ತಾನೀ ಭಾಷೆಯಲ್ಲಿ ಠುಮರಿ ಎಂಬ ಹೆಸರಿನ ಎರಡು ಮೂರು ಸಾಲುಗಳ ಚಿಕ್ಕ ಚಿಕ್ಕ ಪದ್ಯಗಳಿರುವವು. ಇವು ಪದ್ಯಕರ್ತರ ಅಂತರಂಗದ ಭಾವನೆಗಳನ್ನು ಸ್ಪುಟವಾಗಿ ಬಿಂಬಿಸಿ ಕೊಡುತ್ತವೆ. ಇಂಥ ಚಿಕ್ಕ ಚಿಕ್ಕ ಪದ್ಯಗಳು ಗೋಮಾಂತಕದಲ್ಲಿ ಕೊಂಕಣೀ ಭಾಷೆಯಲ್ಲಿಯೂ ಕಂಡುಬರುತ್ತವೆ. ಈ ಕೆಳಗಿನ ಚಿಕ್ಕ ಪದ್ಯದಲ್ಲಿ ಒಬ್ಬ ತಾಯಿಯು ತನ್ನ ಪುಟ್ಟ ಮಗುವಿನ ಅಕಾಲಮರಣಕ್ಕಾಗಿ ಶೋಕಗೈಯುತ್ತಿರುವಳು.

(ಮೂಲ ಕೊಂಕಣೀ ಹಾಡು)

ಉಸ್ಕೀತ ಮೋರೂನ ಗೇಲೋ ತೂ ಪೂತಾ !
ಝಾಡಾರ ಸೋವಣೀ ರೋಟ್ಟಾಯ ತುಕಾ,
ಏಕಟ್ಯಾಚ ಮೋರ್ಝ್ಯಾ ಪೂತಾ.

(ಕನ್ನಡ ಅನುವಾದ)

ವ್ಯರ್ಥ ನೀ ಮಡಿದು ಪೋದೆಯೆ ! ಬಾಳಾ ॥
ಗಿಡಗಳೊಳು ಪಕ್ಕಿಗಳು ಅಳುತಿಹವು ನಿನಗಾಗಿ
ನೀನೊಬ್ಬನೆಯೆ ಆಗಿರ್ದೆ ಮಗುವೆನಗೆ ಬಾಳಾ.

೮.

ಗೋಮಾಂತಕೀಯ ರೋಮನ್ ಕೆಥೋಲಿಕ್ ಜನರು ಹಿಂದೂ ಜನರಂತೆಯೇ ಭಾವಿಕರಿರುತ್ತಾರೆ. ನಮ್ಮಲ್ಲಿ ಹಳ್ಳಿಗಳೊಳಗೆ ಜನರು ದೊಡ್ಡಾಟ, ರೂಪಸೇನನ ಆಟ ಮೊದಲಾದ ಬೈಲಾಟಗಳನ್ನಾಡುವಂತೆ ಗೋಮಾಂತಕದಲ್ಲಿಯೂ ಹಳ್ಳಿಗಳೊಳಗೆ ಬೇರೆ ಬೇರೆ ಪ್ರಕಾರದ ಧಾರ್ಮಿಕ ಮತ್ತು ಸಾಮಾಜಿಕ ಉತ್ಸವಗಳನ್ನು ಮಾಡುವದುಂಟು. ಆ ಸಮಯದಲ್ಲಿ ಹಳ್ಳಿಯ ಹುಡುಗರು ಜನರನ್ನು ನಗಿಸುವದಕ್ಕಾಗಿ ಏನೂ ಅರ್ಥವಾಗದ ಚಿಕ್ಕ ಚಿಕ್ಕ ಪದಗಳನ್ನು ಅನ್ನುವದುಂಟು. ಈ ಕೆಳಗಿನ ಪದ್ಯವು ಇಂಥದೊಂದಾಗಿದೆ.

(ಮೂಲ ಕೊಂಕಣೀ ಹಾಡು)

ಸಾಷ್ಟೀ ಬಾರದೇಸಾಕ ದೇಖೂನ ಸೋಗಳ್ಯಾಕ ನಾಂವ
ಫಾಮಾದ ಮಾಜೇ ।
ಮೋನ ಪಾರಖೂಂಕ ಭೋಂವತಾ ಆಂವ ಆಂಕವಾರ
ಚೆಡೊಲಯಾಂಚೇ ॥
ಓಸೋತೀ ಬಾಯೆ ಕಾಮ ಮೋರ್ಝೆ, ಕಾಂಯಚೀ
ಮಾಕಾ ನಾಕಾ ತುಜೇ ।
ಪೋರನೇ ಜುನೇ ದಿಯಾತ ಬಾಯೆ ತುಮಚ್ಯಾ ಆಂಗಾಚೇ ॥

(ಕನ್ನಡ ಅನುವಾದ)

ಸಾಷ್ಟಿ ಬಾರ್ದೇಶದೊಳಗೆಲ್ಲ ತುಂಬಿಹುದೆನ್ನ ಮಂಗಲನಾಮ
ತಿರುಗುತಿಹೆ ನಾನು ಎಲ್ಲೆಲ್ಲಿ, ಹುಡುಗೆಯರ ಮನದ
ಗುಟ್ಟು ಹೇಳುತಲಿ ॥
ಇಂತಹದು ತಾಯೆ ! ಇಹುದೆನ್ನ ಕೆಲಸ ಹೆಚ್ಚಿಗೇನನು ಬೇಡೆ, ।
ಹಳೆಯದೊಂದು ಹರಕು ಬಟ್ಟೆಯನು ಕುಡೆ ಹೊರಟೆನಿದೆಕೊ!॥

ಟೀಪು:—(೧) ಸಾಷ್ಟಿ=ಅರುವತ್ತು ಚಿಕ್ಕ ಚಿಕ್ಕ ಹಳ್ಳಿಗಳು ಕೂಡಿದ ಒಂದು ಗುಂಪಿನ ಹೆಸರು. ಇವುಗಳಲ್ಲೆಲ್ಲ ಮಡಗಾಂವ ಎಂಬುದೇ ಈಗ ದೊಡ್ಡ ಶಹರವಾಗಿದೆ.

(೨) ಬಾರ್ದೇಶ=ಹನ್ನೆರಡು ಹಳ್ಳಿಗಳ ಒಂದು ಗುಂಪಿನ ಹೆಸರು. ಇವುಗಳಲ್ಲೆಲ್ಲ ಮ್ಹಾಪಶೆ ಎಂಬುದೇ ದೊಡ್ಡ ಊರು.

೯.

ಗೋವೆಯೊಳಗಿನ ಕ್ರಿಶ್ಚನ್ ಸಮಾಜದಲ್ಲಿ ಪ್ರೌಢವಿವಾಹ ಮತ್ತು ಪ್ರೇಮ ವಿವಾಹದ ಪದ್ಧತಿಯು ಹೆಚ್ಚಿಗೆ ಪ್ರಚಲಿತವಾಗಿದ್ದರೂ ಕೇವಲ ವರದಕ್ಷಿಣೆಯ ಆಶೆಯಿಂದಲೂ ಇನ್ನೂ ಬೇರೆ ರೀತಿಯಿಂದ ಹೆಂಡತಿಯ ಕಡೆಯಿಂದ ಹಣವು ದೊರೆಯುವದೆಂಬ ಲೋಭದಿಂದಲೂ ಲಗ್ನವಾಗುವ ಪುರುಷರಾದರೂ ಹೆಚ್ಚಾಗಿರುವರು. ಆದುದರಿಂದಲೇ, ಲಗ್ನವಾದ ನಂತರ ಹಣವು ದೊರೆಯದಿದ್ದರೆ ಗಂಡಹೆಂಡಿರಲ್ಲಿ ಜಗಳಾಟವಾದಂಥ ಅನೇಕ ಪ್ರಸಂಗಗಳು ಕಂಡುಬರುವವು. ಈ ಕೆಳಗಿನ ಪದ್ಯವು ಇಂಥದೇ ಒಂದು ಪ್ರಸಂಗವನ್ನನುಸರಿಸಿ ಇರುವದು.

(ಮೂಲ ಕೊಂಕಣೀ ಹಾಡು)

ನವರಾ:—

"ಆಂವ ಮೋಜೇ ಖೋಶೇನ ಜಾಲ್ಲೋ ಇಚೆಕಾಂಡೇ
ಕಾಜಾರ ।
ಮೇವತೋಲೊ ಮೋಣೂನ ತಿಚೋ ಮಾಕಾ ಆಧಾರ ॥
ಕಿತೇ ಸಾಂಗಚೇ ! ಗೇಯನಾ ತೀ ಇಲ್ಲೋಚ ಪುಣೂನ
ಭಾರ ।
ಆಣೀ ಕೋರತಾ ಘೋರ್ದಾರಾಚೋ ಇಬಾಡ "

ಬಾಯುಕೋ:—

"ಮಾಕಾ ಗೊರೋಜ ನಾ ತುಜೀ ಬುದ ಅಂಯಕೂಂಚೀ।
ಫೋರಾ ವ್ರೋಯತಾ ಅಂವ ದೋ:ತ ಪ್ರೋರತೂನ ದೀ
ವೋಜೀ:।
ವೋಜೇ ಕುಸ್ತಾರ ಗಿರೇಸ್ತಕಾಯು ಸೋದಿತಾ ಚೊಡೋ
ವಂಕ ತುಜಿ!।
ಓಸಲೀ ದೇಖ ನೀರೇ ಅನುಚ್ಯಾ ಗಾಂವಾಂಚೀ" ॥

(ಕನ್ನಡ ಅನುವಾದ)

ಗಂಡನು: –

ಮಂದಮತಿ ನಾನು ಇವಳೊಡನೆ ಮದುವೆಯಾದೆನು
ಖುಷಿಯಿಂದ
ಮನಸಿನೊಳು ಮಾಡಿರ್ದೆ ಮಂಡಿಗೆಯ ದೊರೆವು
ದಿಪಳಿಂದ ಧನವೆಂದು,
ಏನು ಹೇಳಲಿ ದೈವ! ಮನೆತನದ ಹೊರೆಯ ಚಿಂತೆಯಲ್ಲಿ
ವಳಿಗೆಳ್ಳನಿತು,
ಮನೆಮಾರು ಮುಗ್ಗಿದವು ಕುಗ್ಗಿದವು ಹಾಯ್!
ಈ ಶಟವಿಯಿಂದ.

ಹೆಂಡತಿ:—

ನಿನ್ನ ಬುದ್ಧಿವಾದವ ಕೇಳಿ ಗರಜಿಲ್ಲವೆನಗೆ
ಕೊಡು ನನ್ನ ದ್ರವ್ಯವನು ಇದೊ ಹೊರಟೆ ತವರೂರ್ಗೆ
ಇದುವೆ,
ಇಹುದು ನಿನ್ನಯ ಪಣವು ನನ್ನಿಂದೆ ಸಿರಿತನವ ಬೆಳೆಯಿಸಲು,
ಇಂಥವನ ನಾನೆಂದು ಕಂಡಿರಲಿಲ್ಲಿ ನಮ್ಮೂರಲ್ಲಿ.

೧೯.

ಸುಧಾರಣಾಯುಗಕ್ಕೆ ಅನುರೂಪವಾಗಿ, ದಿನಾಲು ಪ್ಯಾರಿಸ ಪಟ್ಟಣದಲ್ಲಿ ಹೊಸದಾಗಿ ಹೊರಡುವ 'ಫ್ಯಾಶನ್'ದ ಮಾದರಿಗಳು ಮೊದಲು ಪೋರ್ತುಗಾಲ ದೇಶಕ್ಕೆ ಹೋಗಿ ಅಲ್ಲಿಂದ ಗೋಮಾಂತಕಕ್ಕೆ ಬಂದು ಅಲ್ಲಿ ಹಳ್ಳಿಪಳ್ಳಿಗಳಲ್ಲಿಯೂ ಪಸರಿಸುತ್ತವೆ. ಇಂಥ ಫ್ಯಾಶನ್‌ಗಳಿಗೆ ಅಲ್ಲಿಯ ಸ್ತ್ರೀಯರು ವಿಶೇಷವಾಗಿ ಬಲಿಬಿದ್ದಿರುವದರಿಂದ ಅವರ ಗಂಡಂದಿರು ಹೆಚ್ಚಿನ ವೆಚ್ಚಕ್ಕೆ ಸಿಲುಕಿ ಬಲು ಕಂಗೆಟ್ಟಿದ್ದಾರೆ. ಈ ಕೆಳಗಿನ ಪದ್ಯದಲ್ಲಿ ಒಬ್ಬ ಗಂಡನು ತನ್ನ ಹೆಂಡತಿಗೆ ಹೊಸ ಹೊಸ ಫ್ಯಾಶನ್‌ದ ನಿಲುವಂಗಿಗಳನ್ನು ಕೊಡಿಸಿ ಕೊಡಿಸಿ ದಿವಾಳಿತೆಗೆದು ಬಲು ಕಂಗಾಲಾಗಿದ್ದಾನೆ.

(ಮೂಲ ಕೊಂಕಣೀ ಹಾಡು)

ಬಾಯೆ! ತುಂವೆ ಖೋಂಯು ಗಾಲೆ ತೇ ವೇಶ್ತಿದ ಕಾಜರಾ
ಕೋಡಚೇ?
ವ್ರೋಡ್ಲೆ ವ್ರೋಡ್ಲೆ, ಸೇದ:ಚೆ ಆಡಲೇಲೇ ಪಾರೀಸಾಚೇ ॥
ಮೋದಾ ಯೆ:ತಾಯ ತ್ಯಾ ಪ್ರೋರಮಾಣೇ ವೇಶ್ತಿದ
ಕೋರಚೇ,
ತೋಸಲೇ ಲೂಶ ಆಮಕಾ ದುಬಳ್ಯಾಂಕ ಕೋಂಯುಚ? ॥
ದೀಸ ಆಯಲೇ ಆತಾ ಅಂವೆ ಕಾಷ್ಟೀ ಲಾಂವಚೇ,
ಅಣೇ ತುಕಾ ನೋವೆ ವೇಶ್ತೀದ ಆಡಚೇ ॥

(ಕನ್ನಡ ಅನುವಾದ)

ಎಲ್ಲಿ ಚಲ್ಲಿದೆಯೆ ಮದುವೆಯಲ್ಲಿ ತಂದಿರ್ದ ಆ ಝುಗೆಗಳನು?
ಪಾರಿಸನಗರದಿಂದ ತರಿಸಿರ್ದ ಉಚ್ಚ ರೇಶಿಮೆ ವಸ್ತ್ರಗಳೆಲ್ಲಿ?
ಹೊಸ ತರದ 'ಫ್ಯಾಶನ್'ಗಳಂತೆ ಹೊಸತರದ ಝುಗೆಗಳನು
ಮಾಡಿಸುವ
ಡೌಲು ಥಾಟಿನ ರೀತಿಯಿರಲಿಲ್ಲವೆಂವೆಂದು ನಮ್ಮ ಬಡತನದ
ಮನೆಯಲ್ಲಿ,
ಇಂದು ಬಂದಿಹುದೆನಗೆ ಕೌಪೀನ ಧರಿಸುವ ಸಮಯ,
ನಿನಗೆ ಬಂದಿರೆ ಹೊಸತರದ ಝುಗೆಗಳನು ಧರಿಸುವ ಮೋಹ!

೧೧

ಮೇಲೆ ಹೇಳಿದಂತೆ ಗೋಮಾಂತಕದಲ್ಲಿ ಫ್ಯಾಶನ್‌ವು ಹಳ್ಳಿಹಳ್ಳಿಗಳಲ್ಲಿಯೂ ಪಸರಿಸಿದ್ದರೂ ಇಂಥ ಫ್ಯಾಶನ್‌ವನ್ನು ಕಡೆಗಣಿಸುವ ಒಬ್ಬಿಬ್ಬರು ಹಳೇಪದ್ಧತಿಯ ಪತಿವ್ರತಾ ಗೃಹಿಣಿಯರೂ ಅಲ್ಲಿ ಕಂಡುಬರುವರು. ಇಂಥ ಒಬ್ಬ ಗೃಹಿಣಿಯು ಈ ಕೆಳಗಿನ ಪದ್ಯವನ್ನು ಅನ್ನುವಳು.

(ಮೂಲ ಕೊಂಕಣೀ ಹಾಡು)

ಫೋವಾಕ ದುಬೋಳಕಾಯು ಆಯಲೀ ವೋಣೂನ
ಕೋಸಲೀಚ ಪ್ರೋರವ್ನಾನಾ,
ಆಮೀ ಮಾಣೂಸಕೀ ವ್ರೋಗಡಾಂವಚ್ಯಾಕ ಸೆರ್ವಿರ
ಪ್ರೋಡನಾ ॥
ನೋವ್ಯಾ ವೋದಾ:ಚೋ ಏಕ ಪ್ರೋಣು ಮುಕೋಡೆ
ವೇಶ್ತಿದನಾ।
ದೇಖೂನ ಮಾಯಗೇರ ಲೇಗೂನ ಅಂವ ವ್ರೋಚನಾ ॥

(ಕನ್ನಡ ಅನುವಾದ)

ಗಂಡನಿಗೆ ಬಡತನವು ಬಂದಿರೆಯು ಎಳ್ಳನಿತು ಎರವಿಲ್ಲ,
ಉಚಿತವಲ್ಲೆಮಗೆ ಪೆಣ್ತನವ ಕಡೆಗಣಿಸುವುದು.

ಹೊಸತರದ ಝಗೆಯು ಎನಗೀಗ ಒಂದಿಲ್ಲವಾದರೆಯು,
ತವರೂರ್ಗೆ ಅಕ್ಕ ! ಪೋಗೆನೆಂದಿಗು ನಾನು

೧೨

ಗೋಮಾಂತಕದೊಳಗಿನ ಕ್ರಿಸ್ತೀ ಸಮಾಜದಲ್ಲಿ ಆಜನ್ಮ ಅವಿವಾಹಿತರಾಗಿಯೇ ಉಳಿದಂಥ ಅನೇಕ ವೃದ್ಧ ಕುಮಾರಿಕೆಯರಿರುತ್ತಾರೆ. ಈ ಕೆಳಗಿನ ಪದ್ಯದಲ್ಲಿ ಇಂಥ ಒಬ್ಬ ಕುಮಾರಿಕೆಯು ವಿವಾಹಿತೆಯರ ಪಾರತಂತ್ರ್ಯವನ್ನು ತಿರಸ್ಕರಿಸಿ ಕೌಮಾರ್ಯ ಭಾವವನ್ನೇ ಸ್ತುತಿಸುತ್ತಾಳೆ.

(ಮೂಲ ಕೊಂಕಣೀ ಹಾಡು)

ಸಂತಾಪ ದಿಸ್ತಾರೇ ಕಾಜರ್ಯಾಂಚೋ,
ವಿಡಮಿಡೆ ಭೋಗತಾರೇ ರಾಂಡಾಂಚೇ ॥
ಫೆಲೀಜ ದಿಸು ಆಂಕವಾರಾಂಚೇ,
ಲಿಬೆರ್ದಾದೀನ ಖುಶಾಲ ಭೋಂವಚೇ ॥೧॥
ಕಾಜಾರ ನಾಕಾ, ಸಾಂಗಾತ ನಾಕಾ,
ಆಂಕವಾರಪೋಣ ಬೊರೆ ದಿಸೋತಾ ಮಾಕಾ ॥ಪಲ್ಲ॥
ಆಂಕವಾರ ಪೋಣಾಚ್ಯಾ ಮೋಜಾ ಸುಖಾ,
ಮೋಜ್ಯಾನ ಸೋಡೂ ನೋಜೋ ಸುಕಾ ॥
ಮಾಜೆ ಆಯೀ ಇಂಗ್ರಾತ ತೂ ಜಾಯು ನಾಕಾ,
ತುಜೆವೀಣ ಸಂಸಾರ ನಾಕಾ ಮಾಕಾ ನಾಕಾ...ಇತ್ಯಾದಿ

(ಕನ್ನಡ ಅನುವಾದ)

ಮದುಮೆಯಾದವರ ಕಂಡು ಸಂತಾಪವಾಗುವುದೆನಗೆ,
ಆ ವಿಧವೆಯರ ನೋಡಿ ಕಳವಳಿಪುದೆನ್ನ ಮನ ಹಾಯ್ !
ಕನ್ಯೆಯರೆ ಗಡ ಭಾಗ್ಯವತಿಯರು ಅಹುದು,
ಸ್ವಚ್ಛಂದದಲಿ ವಿಹರಿಸುವರವರು ಮನಬಂದಂತೆ ॥೧॥
ಬೇಡೆನಗೆ ಮದುವೆ, ಜೋಡು ಬೇಡೆನಗೆ,
ಬೇಕು ಬೇಕೆನಗೆ ಕನ್ನಿಕೆಯ ಬಾಳೆ ಎಂದಿಗು ॥ಪಲ್ಲ॥
ಕುಮಾರಿಕೆಯ ನಿಜ ಸೌಖ್ಯವೆ !
ಬಿಡಲಾರೆ ನಿನ್ನಯ ಸಂಗ ನಾನೆಂದಿಗು,
ನಂಬಿಗೆಯನಿಷ್ಟು ಬಿಡಬೇಡ ಎನ್ನಲ್ಲಿ,
ನೀನಿಲ್ಲದೊಡೆ ಬೇಡೆನಗೆ ಜೀವಿತವು ಕೂಡ ॥೨॥
ಬೇಡೆನಗೆ ಮದುವೆ...ಇತ್ಯಾದಿ.

೧೩

ಗೋವೆಯೊಳಗಿನ ಎಷ್ಟೋ ಹಳ್ಳಿಗಳಲ್ಲಿ ಹಿಂದೂ ಜನರ ನೆರೆಯಲ್ಲಿಯೇ ಕ್ರಿಶ್ಚನ್ನರೂ ಇರುತ್ತಿದ್ದರೂ ಕೂಡ ಅವರವರ ಸಾಮಾಜಿಕ ಮತ್ತು ಧಾರ್ಮಿಕ ರೀತಿ ನಡತೆಗಳಲ್ಲಿ ಮಹದಂತರವು ಕಂಡುಬರುವದು. ಹಿಂದೂ ಜನರ ಅನೇಕ ಆಚರಣೆಗಳು ಕ್ರಿಶ್ಚನ್ನರಿಗೆ ಹಾಸ್ಯಾಸ್ಪದವಾಗಿ ತೋರುವವು. ಗೋಮಾಂತಕೀಯ ಹಿಂದೂ ಜನರ ಹಬ್ಬಗಳೊಳಗೆಲ್ಲ ಬಹು ದೊಡ ಹಬ್ಬವೆಂದರೆ ಗಣೇಶ ಚತುರ್ಥಿಯು. ಆ ಸಮಯದಲ್ಲಿ ಗಣಪತಿ ಪೂಜೆಯ ವಿಷಯವಾಗಿ ಸ್ವಲ್ಪ ಹಾಸ್ಯವನ್ನು ತೋರಿಸುವ ಈ ಕೆಳಗಿನ ಪದ್ಯವನ್ನು ಕ್ರಿಶ್ಚನ್ನರು ಅನ್ನುವದುಂಟು.

(ಮೂಲ ಕೊಂಕಣೀ ಹಾಡು)

ಗೊಣೆಸ್ಪೊತಿರಾಯಾ ಆಮೀ ಸಾಲಾಮು ತಾಕಾ ಕೋರಯಾ
ಪೋತ್ರಾವೋಳೀ ಮಾಂಡೂನ ದಾದಾ ಜೇವೋಣ
ತಾಕಾ ದಿವಯಾ ॥
ಆಳವಾಂತಾಲ್ಯಾನ ಗೇಲೋತೆ ಗೋಣೇಸ ! ಖೋಂಯು
ಗೇಲೊ ತೋ ಪೊಳೌಯಾ ।
ಭೆಟಕಲಾಗೂನ ಪೊಳೂನ ಗೇಲೊ, ಹೊರೀಲೆ ಬಾಂಯು
ಸೋದೀಯಾ ॥
ಸೋದೂನ ತಾಕಾ ಆಡೂನ ಯೇಕ ಜೇವೋಣ ನಿಬಾರ
ದಿವಯಾ ।
ಲಕ್ಷ್ಮಣಾಕ ಸಾಂಗೂನ ಸಾಂಜೇ ವಾಜೋಪ ನಿಬೋರ
ಧೋರೂಂಯಾ ॥
ಅಂಗವಣ ಗೋಣೇಸಾಕ ಕೋರೂನ ಏಕ ಆಬಾಕ ಬಾಯಲ
ಮಾಗಯಾ ।
ಆಠ ದಿಸು ಪಾಸೂನ ದಾದಾ ದಿವಟಿಯೊ ತಾಕಾ
ಜೋಳಯಾ ॥

(ಕನ್ನಡ ಅನುವಾದ)

ಗಣಪತಿರಾಯಗೆ ವಂದನೆಗೈಯುವ, ನಡೆಯಿರಿ ಪೋಗುವ
ನಾವೀಗ,
ಎಲೆಯನು ಮಂಡಿಸಿ ಅಣ್ಣಗೆ ಊಟಕೆ ನೀಡುವ ಬಲುಬೇಗ
ಗಣೇಶನಿದೊ! ಪೋಗಿಹನೆಲ್ಲಿಗೊ ! ಎಲ್ಲಿಗೆ ಪೋಗಿಹ
ನೋಡುವ ಬನ್ನಿ,
ಉಂಡೆಗಳಿಲ್ಲೆಂದೋಡಿದನೇನೊ, ಕೃಷ್ಣನ ಭಾವಿಲಿ
ಹುಡುಕಾಡುವ ಬನ್ನಿ
ಕರೆತಂದಾತಗೆ ಕುತ್ತಿಗೆಮಟ ಊಟಕೆ ಹಾಕುವ ಬನ್ನಿ,
ರಾತ್ರಿಲಿ ವಾದ್ಯವ ಬಾರಿಸೆ ಲಕುಮಣನಿಗೆ ಹೇಳುವ ಬನ್ನಿ
ಗಣಪತಿವ್ರತವನು ಮಾಡಿಯೆ ಅಣ್ಣಗೆ ಹೆಂಡತಿ ಬೇಡುವ
ಬನ್ನಿ,
ಎಂಟು ದಿನದವರೆಗೂ ಆತಗೆ ದೀಪವನುರಿಸುವ ಬನ್ನಿ.

—o—

ಕರ್ನಾಟಕ ವಿಶ್ವವಿದ್ಯಾಲಯವು

ಲೇಖಕರು—ಶ್ರೀ. ಕಾಶೀನಾಥ ಗ. ವರ್ಟಿ, ಎ. ಎ., ಬಿ. ಟಿ., ಮುಂಬೈ ವಿಶ್ವವಿದ್ಯಾಲಯದ ಸದಸ್ಯರು, ಪ್ರಿನ್ಸಿಪಾಲ, ಗೋಕಾವಿ ಹಾಯಸ್ಕೂಲ.

ಮುಂಬಯಿ ವಿಶ್ವವಿದ್ಯಾಲಯದ ಕಳೆದ ಪದವೀದಾನ ಸಮಾರಂಭದ ಕಾಲಕ್ಕೆ ವ್ಹಾಯಿಸ ಚಾನ್ಸಲರರಾದ ಶ್ರೀ. ನ್ಯಾಯಮೂರ್ತಿ ಮಿರ್ಝಾ ಅಲ್ಲಿ ಅಕಬರ ಖಾನರವರು ಮಾಡಿದ ಉಪನ್ಯಾಸವು ಒಂದು ದೃಷ್ಟಿಯಿಂದ ವಿಶೇಷ ಮಹತ್ವದ್ದಾಗಿರುತ್ತದೆ. ಏಕೆಂದರೆ ಈ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಅಧಿಕೃತ ಜನರು ಸ್ವಭಾಷೆಯ ಮಹತ್ವವನ್ನು ಪ್ರತಿಪಾದಿಸಿದ್ದು ಇದೇ ಮೊದಲನೇ ಪ್ರಸಂಗವೆಂದೆನ್ನಲು ಅಡ್ಡಿಯಿಲ್ಲ. ರಾಷ್ಟ್ರೀಯ ಶಿಕ್ಷಣಕ್ರಮದಲ್ಲಿ ದೇಶೀಯ ಭಾಷೆಯ ಸ್ಥಾನವು ಉಚ್ಚತರದ್ದಾಗಿರುತ್ತದೆ. ಮತ್ತು ಶಿಕ್ಷಣದ ನಿಜವಾದ ಪ್ರತಿಫಲವನ್ನನುಭವಿಸಬೇಕಾದರೆ ದೇಶೀಯ ಭಾಷೆಯೇ ಶಿಕ್ಷಣದ ಮಾಧ್ಯಮ (Medium) ವಾಗುವುದವಶ್ಯವಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ಮಾಧ್ಯಮವೆಂದು ದೇಶೀಯ ಭಾಷೆಯನ್ನುಪಯೋಗಿಸುವದರಿಂದುಂಟಾದ ಸುಪರಿಣಾಮಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ನಮಗೆ ದೊರೆಯುವ ಶಿಕ್ಷಣದ ಯೋಗ್ಯವಾದ ಉಪಯೋಗವನ್ನು ಸ್ವೋನ್ನತಿಯಲ್ಲಿಯೂ ರಾಷ್ಟ್ರೋನ್ನತಿಯಲ್ಲಿಯೂ ಮಾಡುವದಕ್ಕೋಸ್ಕರ ಉಚ್ಚತರದ ಶಿಕ್ಷಣವನ್ನು ಸಹ ದೇಶೀಯ ಭಾಷೆಯ ಮುಖಾಂತರವಾಗಿಯೇ ಪಡಕೊಳ್ಳುವುದು ಶ್ರೇಯಸ್ಕರವೆಂಬಭಿಪ್ರಾಯವು ಈಗ ನೆಲಗೊಳ್ಳಹತ್ತಿದೆ. ಈ ವಿಷಯದ ಬಗ್ಗೆ ತಮ್ಮ ಉಪನ್ಯಾಸದಲ್ಲಿ ಶ್ರೀ. ಮಿರ್ಝಾರವರು ಚರ್ಚೆಯನ್ನು ಮಾಡಿ ನಮ್ಮ ರಾಷ್ಟ್ರೀಯ ಭಾವನೆಗೆ ಚಾಲನೆಯನ್ನೀಯುವ ಶ್ರೇಯಸ್ಸನ್ನು ಪಡಕೊಂಡಿದ್ದಾರೆ.

ಕಳೆದ ೬೦ ವರುಷಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪಿತವಾದಂದಿನಿಂದ ನಾವು ಸಂಪಾದಿಸಿದ ಶಿಕ್ಷಣವನ್ನು ಪರೀಕ್ಷಿಸಲಾಗಿ ನಮ್ಮ ಶಿಕ್ಷಣ ಪ್ರಗತಿಯು ನಿಜವಾದ ಪ್ರಗತಿಯೆಂದೆನಿಸಿಕೊಳ್ಳಲಿಕ್ಕೆ ತಕ್ಕದ್ದು ಮತ್ತು ಅದು ನಮ್ಮ ರಾಷ್ಟ್ರೀಯತ್ವಕ್ಕೆ ಪೋಷಕವಾಗಿದೆಯೋ ಎಂಬ ಬಗ್ಗೆ ಸಂದೇಹವುಂಟಾಗುವುದು. ಖಾನಸಾಹೇಬರು ಹೇಳಿದ ಪ್ರಕಾರ ನಮ್ಮ ಶಿಕ್ಷಣದ ಪದ್ಧತಿಯು ಮತ್ತು ವಿಶ್ವವಿದ್ಯಾಲಯಗಳು ಆಂಗ್ಲ ದೇಶದೊಳಗಿನ ಪದ್ಧತಿಯ ಮತ್ತು ಸಂಸ್ಥೆಗಳ ಬರೇ ಅನುಕರಣಗಳೇ ಹೊರ್ತಾಗಿ ನಮ್ಮ ದೇಶಕಾಲಗಳಿಗೆ ಅನುಗುಣವಾಗಿ ಮತ್ತು ರಾಷ್ಟ್ರೀಯ ಭಾವನೆಗೆ ಪೋಷಕವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳಿವಲ್ಲ. ಸ್ವಂತ ಮಾತೃಭಾಷೆಯ ಹೊರ್ತಾಗಿ ಪರರ ಭಾಷೆಯಿಂದ ನಮ್ಮ ವಿಚಾರವೃಕ್ಷವು ಸಿಂಚಿತಜಲವಾಗಿ ಪೋಷಿತವಾದರೆ ನಮ್ಮ ವಿಶಿಷ್ಟವಾದ ರಾಷ್ಟ್ರೀಯತ್ವವನ್ನು ಪೂರ್ಣವಾಗಿ ವ್ಯಕ್ತ ಮಾಡುವದಕ್ಕೆ ಸಂಧಿಯೇ ಸಿಕ್ಕುವದಿಲ್ಲ. ಜಗತ್ತಿನಲ್ಲಿರುವ ಅರ್ವಾಚೀನ ರಾಷ್ಟ್ರಗಳ ಪ್ರಗತಿಗೆ ಅವರವರ ಸ್ವಂತ ದೇಶಭಾಷೆಯೇ ಕಾರಣೀಭೂತವಾಗಿದೆಂಬದು ಈಗ ನಮಗೆ ತಿಳಿದುಬರಹತ್ತಿದೆ. ಇದಕ್ಕಾಗಿ ನಮ್ಮ ಭಾಷೆಯ ವೃದ್ಧಿಯನ್ನು ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಭರತಖಂಡದ ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಚಲಿತವಿರುವ ಭಾಷೆಗಳಿಗನುಸಾರವಾಗಿ ಬೇರೆಬೇರೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಅವಶ್ಯಕತೆಯನ್ನು ಶ್ರೀ. ಖಾನಸಾಹೇಬರು ಉತ್ತಮ ರೀತಿಯಿಂದ ಸ್ಪಷ್ಟೀಕರಿಸಿದ್ದಾರೆ. ಮಹಾರಾಷ್ಟ್ರ ಗುಜರಾಥ ಪ್ರಾಂತಗಳಲ್ಲಿ ಮತ್ತು ಸಿಂಧದಲ್ಲಿ ಸಹ ಪ್ರತ್ಯೇಕವಾಗಿ ವಿಶ್ವವಿದ್ಯಾಲಯದ ಸಂಸ್ಥೆಗಳನ್ನು ಸ್ಥಾಪಿಸುವ ಅವಶ್ಯಕತೆಯನ್ನು ತೋರಿಸಿದಾಗ ನಮ್ಮ ಕರ್ನಾಟಕ ನಾಡಿನ ಸ್ಮರಣೆ ಸಹ ಖಾನಮಹಾಶಯರಿಗೆ ಆಗದ್ದಕ್ಕೆ ನಾವು ವಿಷಾದಪಡುತ್ತೇವೆ. ಗುಜರಾಥಿ ಅಥವಾ ಮರಾಠಿ ಭಾಷೆಗಳಿಗಿಂತ ನಮ್ಮ ಭಾಷೆಯು ಪುರಾತನದ್ದಿದ್ದು, ವಾಙ್ಮಯದಲ್ಲಿಯೂ ಭಾಷಾಸೌಷ್ಟವದಲ್ಲಿಯೂ, ಭಾಷಾಮಾಧುರ್ಯ, ಪದಲಾಲಿತ್ಯ ಮುಂತಾದ ಭಾಷಾಲಂಕಾರಗಳಲ್ಲಿಯೂ ಯಾವದೇ ವಿಧದಿಂದ ಆ ಭಾಷೆಗಳಿಗಿಂತ ಕೊರತೆಯುಳ್ಳದ್ದಾಗಿರಲು ಈ ನಮ್ಮ ಭಾಷೆಯ ನಾಮನಿರ್ದೇಶವನ್ನು ಸಹ ತಮ್ಮ ಉಪನ್ಯಾಸದಲ್ಲಿ ಅವರು ಮಾಡದಿರುವ ಕಾರಣವೇನಿದ್ದೀತೆಂಬದನ್ನು ನಿಶ್ಚಿತವಾಗಿ ಹೇಳಲಿಕ್ಕೆ ಬರುವದಿಲ್ಲ. ಇದಕ್ಕೆ ಕೆಲವೊಂದು ರೀತಿಯಿಂದ ನಾವೇ ಕಾರಣರೂ ಆಗಿದ್ದೇವೆ. ಏಕೆಂದರೆ ನಮ್ಮ ನಾಡಿನ ವಿಷಯವಾಗಿ, ನಮ್ಮ ಭಾಷೆಯ ಬಗ್ಗೆ, ಮತ್ತು ನಮ್ಮ ಶಿಕ್ಷಣವನ್ನು ಕುರಿತು ನಮ್ಮಲ್ಲಿರತಕ್ಕ ಅಭಿಮಾನದ ಮತ್ತು ದಕ್ಷತೆಯ ಅಭಾವವೇ ಈ ದುರ್ಲಕ್ಷದ ಮುಖ್ಯ ಕಾರಣವಿರಬಹುದೆಂದು ನಮಗೆ ತೋರುವದು.

ಐದಾರು ವರ್ಷಗಳ ಹಿಂದೆ ನೇಮಿಸಿದ ಯುನಿವ್ಹರ್ಸಿಟಿ ಸುಧಾರಣೆಕಮಿಟಿಯವರು ತಮ್ಮ ರಿಪೋರ್ಟಿನಲ್ಲಿ ಈ ಇಲಾಖೆ ಯೊಳಗೆ ಆಗತಕ್ಕ ತದಿತರ ವಿಶ್ವವಿದ್ಯಾಲಯಗಳ ಬಗ್ಗೆ ವಿಚಾರ ಮಾಡಿದ್ದಾರೆ. ಈ ಇಲಾಖೆಯಲ್ಲಿ ಭಾಷಾನುಗುಣ ವಂತೆ ನಾಲ್ಕು ಯುನಿವ್ಹರ್ಸಿಟಿಗಳು ಸ್ಥಾಪನವಾಗುವ ಸಂಭವ ವನ್ನು ಅವರು ತೋರಿಸಿದ್ದಾರೆ. ಆದರೂ ಮಹಾರಾಷ್ಟ್ರದ ಹೊರ್ತು ಮತ್ತಾವ ಪ್ರಾಂತದಲ್ಲಿ ಸ್ವತಂತ್ರ ವಿಶ್ವವಿದ್ಯಾಲಯ ಕ್ಕನುಕೂಲವಾದ ಪರಿಸ್ಥಿತಿಯು ಇನ್ನೂ ಪ್ರಾಪ್ತವಾಗಿಲ್ಲೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರಷ್ಟೇ. ವಿಶ್ವ ವಿದ್ಯಾಲಯಕ್ಕೆ ಅನುಕೂಲ ಪರಿಸ್ಥಿತಿಯನ್ನುಂಟುಮಾಡಲಿಕ್ಕೆ ಆಯಾಪ್ರಾಂತದಲ್ಲಿ ಹಲವು ಸಂಗತಿಗಳ ಪೂರ್ವಸಿದ್ಧತೆಯಿರುವ ದವಶ್ಯವಾಗಿದೆ. ಇವುಗಳಲ್ಲಿ ಜನರಲ್ಲಿರತಕ್ಕ ಶಿಕ್ಷಣ ಪ್ರಗತಿಯ ಪ್ರೇಮವು ಮೊದಲನೆಯದು. ನಮ್ಮಲ್ಲಿ ಉಚ್ಚ ಶಿಕ್ಷಣ ಹೊಂದಿದ ಜನರು ಬಹಳ ಇದ್ದರೂ ಬೌದ್ಧಿಕ ಚೈತನ್ಯದ (Intellectual activity) ದೃಷ್ಟಿಯಿಂದ ನಾವು ಹಿಂದು ಳಿದಿರುವೆವೆಂದೆನ್ನಬೇಕಾಗುತ್ತದೆ. ಕಾರಣ, ಸ್ವತಂತ್ರ ವಿಶ್ವ ವಿದ್ಯಾಲಯಸ್ಥಾಪನೆಗೆ ಅತ್ಯವಶ್ಯವಾದ ಲೋಕಮತವನ್ನುಂಟು ಮಾಡುವ ಪ್ರಯತ್ನಗಳು ನಮ್ಮಿಂದಾಗಿಲ್ಲೆನ್ನುವದನ್ನು ಒಪ್ಪ ಬೇಕಾಗಿದೆ. ಶಿಕ್ಷಣವಿಷಯದಲ್ಲಿ ಅವಶ್ಯವಿದ್ದಷ್ಟು ಮನಸು ಹಾಕಿ ಅದರ ಆಳವಾದ ಅಭ್ಯಾಸಮಾಡಿದವರು ನಮ್ಮಲ್ಲಿ ತೀರ ಕಡಿಮೆಯಿಲ್ಲದಿದ್ದರೂ, ತಮ್ಮ ಅಸ್ತಿತ್ವವನ್ನು ಲೋಕನಿದರ್ಶ ನಕ್ಕೆ ತರುವ ಪ್ರಯತ್ನಗಳಲ್ಲಿ ಮಾತ್ರ ಅವರ ದಾಕ್ಷಿಣ್ಯವು ಅವರಿಗೆ ಅಡ್ಡ ಬಂದಿದೆಯೆನ್ನಬೇಕಾಗುತ್ತದೆ. ಆದುದರಿಂದ ಕರ್ನಾಟಕದಲ್ಲಿ ಶಿಕ್ಷಣ ವಿಷಯಕ ಆತ್ಯಂತಿಕ ಲೋಕಜಾಗೃತಿ ಯಿದೆಯೋ ಏನೋ ಎಂಬ ಸಂದೇಹವು ಇತರ ಜನರ ಮನ ಸ್ಸಿನಲ್ಲಿ ಹುಟ್ಟುವದು ಸಹಜ.

ವಿಶ್ವವಿದ್ಯಾಲಯದಂಥ ಮಹತ್ವದ ಶಿಕ್ಷಣ ಸಂಸ್ಥೆಯು ದ್ರವ್ಯಸಹಾಯದ ಹೊರತು ಅವ್ಯಾಹತವಾಗಿಯೂ ಸುಲಭ ವಾಗಿಯೂ ನಡೆಯಲಾರದೆಂಬ ಮಾತು ನಿಜವಾದುದಷ್ಟೇ. ಆದರೆ ಈ ಕಾರ್ಯದಲ್ಲಿ ಶ್ರೀಮಂತರಾದ ಕನ್ನಡಿಗರು ಉಳಿದ ಪ್ರಾಂತದವರಿಗಿಂತ ಹಿಂದೆ ಬೀಳುವರೆಂದೆನ್ನುವುದು ಯೋಗ್ಯ ಕಾಣುವುದಿಲ್ಲ. ಏಕಂದರೆ ಧಾರವಾಡದ ಕಾಲೇಜದ ಪ್ರಾರಂಭ ಮಾಡುವಾಗ ಸರಕಾರದವರು ಹಾಕಿದ ದ್ರವ್ಯದ ಶರ್ತುಗಳನ್ನು ಅವರು ಅಲ್ಪ ಕಾಲದಲ್ಲಿಯೇ ಪೂರೈಸಿದರು. ಕರ್ನಾಟಕ ಶಿಕ್ಷಣಸಂಸ್ಥೆ, ಲಿಂಗಾಯತ ಶಿಕ್ಷಣ ಸಂಸ್ಥೆ, ಕಾನಡಾ ಶಿಕ್ಷಣ ಸಂಸ್ಥೆ ಮೊದಲಾದ ಶಿಕ್ಷಣ ಸಂಸ್ಥೆಗಳು ಲೋಕಾಶ್ರಯದಿಂ ದಲೇ ನಡೆದಿರುವವು. ಮೇಹರಬಾನ **ಅತರ್ಖಾಳ ಸಾಹೇಬ, ವಂಟಮೂರಿಯ ಸರದೇಸಾಯಿಯವರು,** ಶಿರ್ಶಿಯ ಪ್ರಸಿದ್ಧ ವಕೀಲರಾದ **ರಾವಸಾಹೇಬ ಪಂಡಿತರಂತಹ** ಶಿಕ್ಷಣಪ್ರೇಮಿಗಳಾದ ಎಷ್ಟೋ ಜನರು ದ್ರವ್ಯಸಹಾಯವನ್ನು ಮಾಡುವ ಸದಿಚ್ಛೆಯುಳ್ಳವರು ನಮ್ಮಲ್ಲಿರುವರು. **ಆದರೆ ನಮ್ಮ ಮುಖ್ಯ ಕೊರತೆಯೆಂದರೆ ನಮ್ಮ ಮುಂದಾಳು ಗಳಲ್ಲಿ ಪ್ರಾಂತದ ಶಿಕ್ಷಣ ಪ್ರಗತಿಯ ಸಲುವಾಗಿ ಒಮ್ಮನಸಿನಿಂದ ಪ್ರಯತ್ನ ನಡಿಸುವ ಮತ್ತು ಶಿಕ್ಷಣ ಶಾಸ್ತ್ರಜ್ಞರ ಅಸ್ತಿತ್ವವನ್ನು ವ್ಯಕ್ತಪಡಿಸುವ ಚಟು ವಟಿಕೆಗಳ ಅಭಾವ.**

ವಿಶ್ವವಿದ್ಯಾಲಯವು ಯಶಸ್ವಿಯಾಗಬೇಕಾದರೆ ಆವಶ್ಯಕ ವಾದ ಸಂಗತಿಗಳಲ್ಲಿ ಪ್ರಾಚೀನ ಸಂಶೋಧನೆಯ ಕಾರ್ಯದ ವ್ಯಾಪಕತೆಯೊಂದಿರುವದು. ಈ ಸಂಶೋಧನ ಕ್ಷೇತ್ರದಲ್ಲಿ ಕಾರ್ಯಮಾಡಲಿಚ್ಛಿಸುವವರಿಗೆ ಕಾರ್ಯಕ್ಷೇತ್ರವು ಬಲು ದೊಡ್ಡದಿರುವದೆಂದು ಕಂಡು ಬರುವದು. ಕರ್ನಾಟಕದ ಪ್ರಾಚೀನೇತಿಹಾಸವನ್ನು ಸಂಶೋಧಿಸುವ ಕಾರ್ಯವನ್ನು ಇನ್ನೂ ಯಾರೂ ಕೈಕೊಂಡಿಲ್ಲೆಂದು ಹೇಳಲು ಪ್ರತ್ಯವಾಯ ವಿಲ್ಲ. ಕರ್ನಾಟಕ ಇತಿಹಾಸಸಂಶೋಧನ ಮಂಡಲವೆಂಬ ಒಂದು ಸಂಸ್ಥೆಯು ಸ್ಥಾಪಿತವಾಗಿದ್ದರೂ ಅದರ ವಾರ್ಷಿಕ ಸಂಗತಿಯು ತಿಳಿಯುವದು ಸಹ ನಮಗೆ ದುಷ್ಕರವಾಗಿದೆ. ನಮ್ಮ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಪರಪ್ರಾಂತಸ್ಥರು ನಮ್ಮ ಕನ್ನಡ ಭಾಷೆಯ ವ್ಯಾಪ್ತಿಯ ಬಗ್ಗೆ ತೋರಿಸುವ ಅಜ್ಞಾನವು ನಿಜವಾಗಿ ಶೋಚನೀಯವಾಗಿದೆ. ಇನ್ನೂ ಕೆಲ ಕಾಲದ ವರೆಗೂ ಕನ್ನಡ ಭಾಷೆಯು ಬೇರೆ ದೇಶೀಯ ಭಾಷೆಗ ಳನ್ನು ಸರಿಗಟ್ಟುವ ಭಾಷೆಯಾದೀತೆಂದೆನ್ನಲು ಸಹ ಅವರ ಸಿದ್ಧತೆ ತೋರುವದಿಲ್ಲ. ನಮ್ಮ ಪೂರ್ವೇತಿಹಾಸ, ವಾಙ್ಮಯ ಮತ್ತು ನಮ್ಮ ಸರ್ವಾಂಗಗಳ ಪ್ರಗತಿಯನ್ನು ಕುರಿತು ನಮ್ಮಲ್ಲಿ ವಾಸಿಸುವ ಅನಾಸ್ಥೆಯೇ ಈ ಸಂಗತಿಯ ಮುಖ್ಯ ಕಾರಣವು.

ವಿಶ್ವವಿದ್ಯಾಲಯವು ಸ್ಥಾಪಿತವಾದ ಪಕ್ಷಕ್ಕೆ ಅದರ ಲಾಭ ವನ್ನು ಪಡಕೊಂಡು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಸಹ ಸಾಕಷ್ಟು ದೊಡ್ಡದಿರಬೇಕಾಗುವದು. ಆದರೆ ವಿದ್ಯಾ

ರ್ಥಿಗಳ ಸಂಖ್ಯೆಯನ್ನು ಈಗಲೇ ಅನುಮಾನಿಸುವದವಶ್ಯಕವಿಲ್ಲ. ಏಕೆಂದರೆ ವಿದ್ಯಾಲಯವು ಸಮೀಪವಿದ್ದಲ್ಲಿ ಕಲಿಯುವ ಹುಡುಗ ಹುಡುಗಿಯರ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತ ಹೋಗುವದೆಂಬದು ಎಲ್ಲರ ಅನುಭವದ ಮಾತು.

ಕರ್ನಾಟಕಸ್ಥರಲ್ಲಿ ಶಿಕ್ಷಣಶಾಸ್ತ್ರಜ್ಞರೂ, ಕಾರ್ಯಕ್ಷಮ ಪುರುಷರೂ ಇರುವರು, ವಿಶ್ವವಿದ್ಯಾಲಯವು ಸ್ಥಾಪಿತವಾದಲ್ಲಿ ಅದು ಉತ್ತಮ ರೀತಿಯಿಂದ ನಡಿಸಲ್ಪಡುವದೆಂಬ ಬಗ್ಗೆ ಸಹ ಸಂದೇಹವಿಲ್ಲ. ಉಳಿದೆಲ್ಲ ಸಂಗತಿಗಳು ಅನುಕೂಲವಿದ್ದು ಒಂದು ಸುಲಭವಾದರೂ ಮಹತ್ವದ ಸಂಗತಿಯ ಅಭಾವವು ನಮ್ಮ ಪ್ರಗತಿಯ ದಾರಿಯಲ್ಲಿ ನಿಲ್ಲುವದು. ಅದಾವುದೆಂದರೆ ನಾವು ತೋರಿಸುವ ಶಿಕ್ಷಣ ವಿಷಯಕ ಅನಾದರವು. ಅಥವಾ ಶಿಕ್ಷಣದ ಬಗ್ಗೆ ನಮ್ಮಲ್ಲಿರುವ ಉತ್ಕಟ ಅಭಿಲಾಷೆಯನ್ನು ವ್ಯಕ್ತಗೊಳಿಸುವ ಸಂಧಿಗಳ ಅನುಪಯೋಗವು. ನಮ್ಮಲ್ಲಿ ಅವಶ್ಯಕವಾದ ಸ್ವಪ್ರತಿಪಾದನೆಯ ಹಂಬಲವು (the urge) ನಮ್ಮಲ್ಲಿ ಅತ್ಯಗತ್ಯವಾಗಿ ಬೇಕಾಗಿದೆ. ಈ ಮಾತನ್ನು ಸದ್ಯಕ್ಕಂತೂ ದೂರೀಕರಿಸುವದು ಶಕ್ಯವಿಲ್ಲ. ನಮ್ಮ ತಾಯ್ನುಡಿಯ ಬಗ್ಗೆ ನಮ್ಮಲ್ಲಿರತಕ್ಕ ಅಭಿಮಾನವು ನಮ್ಮಲ್ಲಿರಬಹುದು. ಆದರೆ ಕನ್ನಡ ಸಾಹಿತ್ಯವನ್ನು ಬೆಳಿಸುವ ಪ್ರಯತ್ನಗಳು ನಮ್ಮಲ್ಲೆನಿತೊಂದಿರುವವೆಂಬ ಬಗ್ಗೆ ನಾವು ಸ್ವಪರೀಕ್ಷೆ ಮಾಡಿ ನೋಡಬೇಕಾಗಿದೆ. ಮುಂಬಯಿ ವಿಶ್ವವಿದ್ಯಾಲಯದವರು ತೋರಿಸಿದ ಸಣ್ಣಪುಟ್ಟ ಅನುಕೂಲತೆಗಳನ್ನವಲಂಬಸಿ ಅವುಗಳಪೂರ್ಣಲಾಭವನ್ನೂ ಕನ್ನಡ ಹುಡುಗರು ತಕ್ಕೊಳ್ಳುವದಿಲ್ಲೆಂಬ ಖೇದಜನಕ ಮಾತನ್ನು, ಪ್ರಸಿದ್ಧವಾದ ಅಂಕೆಗಳು ಸಿದ್ಧಪಡಿಸುತ್ತವೆ. ಉದಾಹರಣೆಗಾಗಿ ಪ್ರವೇಶ ಪರೀಕ್ಷೆಯಲ್ಲಿ ಇತಿಹಾಸ ಮತ್ತು ಸಂಸ್ಕೃತ ಇವೆರಡು ವಿಷಯಗಳನ್ನು ದೇಶೀಯ ಭಾಷೆಯಲ್ಲಿ ಕಲಿಸಲಿಕ್ಕೂ ಪರೀಕ್ಷೆಯ ಪ್ರಶ್ನೆಗಳನ್ನುತ್ತರಿಸಲಿಕ್ಕೂ ಅನುಕೂಲ ಮಾಡಿಕೊಟ್ಟಿರಲು ನಮ್ಮ ವಿದ್ಯಾಲಯಗಳಲ್ಲಿ ಎಷ್ಟು ಶಿಕ್ಷಕರು ಮತ್ತು ಹುಡುಗರು ಕನ್ನಡದ ಉಪಯೋಗವನ್ನು ಮಾಡುತ್ತಿರುವರು ? ಹೋದವರ್ಷ ಇತಿಹಾಸದ ಪ್ರಶ್ನೆಗಳನ್ನುತ್ತರಿಸಿದ ೧೨೫೦೦ ಹುಡುಗರಲ್ಲಿ ೪೧೦೦ ಹುಡುಗರು ಮರಾಠಿಯಲ್ಲಿ, ೨೫೦೦ ಗುಜರಾಥಿಯಲ್ಲಿ ಮತ್ತು ಕೇವಲ ೩೫೦ ಹುಡುಗರು ಕನ್ನಡದಲ್ಲಿ ಬರೆದಿರುವರು. ಕರ್ನಾಟಕದ ಹಾಗೆಯೇ ಹಿಂದಿರುವ ಸಿಂಧಪ್ರಾಂತದಲ್ಲಿ ಸಹ ೧೩೦೦೦ ಹುಡುಗರಲ್ಲಿ ಅರ್ಧಕ್ಕಿಂತ ಹೆಚ್ಚು ಹುಡುಗರು ತಮ್ಮ ಸ್ವಂತ ಭಾಷೆಯ ಮುಖಾಂತರವಾಗಿಯೇ ಉತ್ತರಗಳನ್ನು ಬರೆದಿರುವಲ್ಲಿ ಕನ್ನಡ ಹುಡುಗರ ಪ್ರಮಾಣವು ಮಾತ್ರ ಒಂದು ಮೂರಾಂಶಕ್ಕಿಂತ ಕಡಿಮೆ ಬೀಳುತ್ತದೆ ! ನಮ್ಮ ಸುಶಿಕ್ಷಿತ ಜನರಲ್ಲಿ ಸಹ ಶಿಕ್ಷಣ ವಿಷಯಕ ಎಷ್ಟು ಅನಾಸ್ಥೆಯಿರುವದೆಂಬ ಬಗ್ಗೆ ಮತ್ತೊಂದು ಉದಾಹರಣೆಯನ್ನು ಕೊಡಬಹುದು. ಮುಂಬಯಿ ವಿಶ್ವವಿದ್ಯಾಲ[illegible] ಹೊಸಕಾಯದೆಯ ಪ್ರಕಾರ ಹೋದ ವರ್ಷದ ಸೀನೇಟದ ಹೊಸ ಚುನಾವಣೆಯಲ್ಲಿ ಪರಪ್ರಾಂತಸ್ಥರು ಅದರ ಪೂರ್ಣ ಲಾಭವನ್ನು ಪಡಕೊಂಡಾಗ ಕರ್ನಾಟಕದಲ್ಲಿ ೫೦ಕ್ಕಿಂತ ಹೆಚ್ಚು ಪದವೀಧರ ಮತದಾರರಿದ್ದರೂ, ಕನಿಷ್ಠ ಪಕ್ಷಕ್ಕೆ ೫ದು ಮಂದಿ ಸಭಾಸದರನ್ನಾರಿಸಿ ಕೊಡುವದು ಶಕ್ಯವಿದ್ದಿದ್ದರೂ ಈ ದೃಷ್ಟಿಯಿಂದ ಯಾರೂ ಪ್ರಯತ್ನ ಮಾಡಿಲ್ಲೆಂಬದು ನಿಜವಾಗಿ ಶೋಚನೀಯವು. ಈಗಿನ ೧೪೪ ಸಭಾಸದರ ಸೀನೇಟದಲ್ಲಿ ಬಹುತರ ಸಭಾಸದರು ಮುಂಬಯಿ, ಮಹಾರಾಷ್ಟ್ರ ಮತ್ತು ಗುಜರಾಥ ಪ್ರಾಂತಗಳಿಂದಿದ್ದು ಸಿಂಧ ಪ್ರಾಂತದಿಂದ ೧೩ ಮತ್ತು ಕರ್ನಾಟಕದಿಂದ ಕೇವಲ ಆರು ಸಭಾಸದರಿರುವರು. ಈ ಆರಲ್ಲಿ ಓರ್ವರು ಕರ್ನಾಟಕ ಕಾಲೇಜದ ಮುಖ್ಯಾಧ್ಯಾಪಕರಾದ ಯುರೋಪಿಯನ್ನರು ಮತ್ತೊಬ್ಬರು ಅದೇ ಕಾಲೇಜದಲ್ಲಿ ವಿದ್ಯಾನಿಧಿ (ಪ್ರೊಫೆಸರ) ಗಳಿರುವ ಮಹಾರಾಷ್ಟ್ರೀಯರು. ಈ ಸಂಗತಿಯು ಖೇದಜನಕವಲ್ಲವೇ ?

ಸ್ವತಂತ್ರ ವಿಶ್ವವಿದ್ಯಾಲಯದ ಸ್ಥಾಪನೆಗೆ ಅವಶ್ಯಕವಾದ ಸಂಗತಿಗಳನ್ನೆಲ್ಲ ಪೂರೈಸುವ ಕಾರ್ಯವು ಕರ್ನಾಟಕ–ಪ್ರಾಂತಸ್ಥರಿಗೆ ಸುಲಭ ಮತ್ತು ಶಕ್ಯವಿದ್ದರೂ ನಮ್ಮೀ ನಾಡಿನಗೋಸ್ಕರ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮಾತನ್ನು ಯಾರೂ ಮುಂದರಿಸುವದಿಲ್ಲ. ಧಾರವಾಡದಲ್ಲಿ ಅಥವಾ ಇಡೀ ಕರ್ನಾಟಕದಲ್ಲಿ ಇದರ ಬಗ್ಗೆ ಸಾಕಷ್ಟು ಲೋಕಮತವೂ ಜನರ ಕಡೆಯಿಂದ ಬೇಡಿಕೆಯೂ ಇರುವದಿಲ್ಲೆಂಬದೇ ನಮ್ಮೀ ಸ್ಥಿತಿ[illegible] ಮುಖ್ಯ ಕಾರಣವು. ಈ ಲೋಕಮತಾಭಾವದಿಂದ ನಮ್ಮ ಅಸ್ತಿತ್ವವು ಬೇರೆ ಜನರಿಗೆ ಕಂಡು ಬರುವದಿಲ್ಲಾದ್ದರಿಂದ ಪ್ರತಿಯೊಬ್ಬ ಕನ್ನಡಿಗನು ಪರಿಸ್ಥಿತಿಯನ್ನು ಪರಿಶೀಲಿಸಿ ನಮ್ಮ ಕರ್ನಾಟಕ ನಾಡಿನ ಬಗ್ಗೆ ಮತ್ತು ನಮಗೆ ಅವಶ್ಯವಾದ ವಿಶ್ವವಿದ್ಯಾಲಯದ ಸ್ಥಾಪನೆಯ ಬಗ್ಗೆ ಲೋಕಮತವನ್ನುಂಟು ಮಾಡುವ ಪ್ರಯತ್ನಗಳನ್ನು ನಡಿಸಬೇಕಾಗಿದೆ.

ಹಿಂದೂ ದೇಶದ "ಅಸಂಖ್ಯ ಭಾಷೆಗಳೂ" ಸ್ವರಾಜ್ಯವೂ

ಲೇಖಕ:—ದಿನಕರ ದೇಸಾಯಿ

ಹಿಂದೂ ದೇಶವು ನಾನಾ ಭಾಷೆಗಳ ಪ್ರದರ್ಶನ ಶಾಲೆ ಎಂದೂ, ಆದುದರಿಂದ ಸ್ವರಾಜ್ಯಕ್ಕೆ ಅಯೋಗ್ಯವೆಂದೂ ಆಂಗ್ಲರು ತಿರುತಿರುಗಿ ಹೇಳುವುದುಂಟು. ಅವರು ಹೇಳಿದ ಮಾತನ್ನು ಎಷ್ಟೋ ಮಂದಿ ಭಾರತೀಯರು ನಂಬಿ 'ಹೌದು, ನಾವು ಸ್ವರಾಜ್ಯಕ್ಕೆ ಆಯೋಗ್ಯವೇ ಸರಿ' ಎಂದು ಉದಾಸೀನರಾಗುತ್ತಾರೆ. ಜಗತ್ತಿನ ಮಿಕ್ಕ ದೇಶಗಳಲ್ಲಿ ಭಾಷಾ ಪ್ರಶ್ನೆಯು ಇಲ್ಲವೆಂದೇ ನಮ್ಮ ಭಾವನೆ. ಆದುದರಿಂದ ಈ ವಿಷಯವನು ಇಲ್ಲಿ ಚರ್ಚಿಸಿ, ಹಿಂದೀಯರು ಸ್ವರಾಜ್ಯಕ್ಕೆ ಯೋಗ್ಯರೇ ಹೇಗೆ ಎಂದು ತೋರಿಸುವದೇ ಈ ಲೇಖನದ ಗುರಿ.

ಅಸಂಖ್ಯ ಭಾಷೆಗಳು ಪ್ರಚಾರದಲ್ಲಿದ್ದೂ, ಸ್ವಾತಂತ್ರ್ಯವನ್ನು ಅನುಭವಿಸುವ ರಾಷ್ಟ್ರಗಳು ಈ ಜಗತ್ತಿನಲ್ಲಿ ಉಂಟೇ ಇಲ್ಲವೇ ಎಂಬುದನ್ನು ಮೊದಲು ನೋಡಬೇಕು. ಸಂಯುಕ್ತ ಅಮೇರಿಕಾ (United States of America) ದೇಶವನ್ನು ತೆಗೆದುಕೊಳ್ಳುವಾ. ಈ ರಾಷ್ಟ್ರದ ಭಾಷೆಗಳನ್ನು ಕುರಿತು ರಮಾನಂದ ಚತ್ತರಜಿಯವರು ತಮ್ಮ ಪತ್ರಿಕೆಯಲ್ಲಿ (Modern Review) ಹೀಗೆ ಬರೆಯುತ್ತಾರೆ:—

"It (U. S. A.) has more languages and more notionalities than India… A recent census of New Bedford in Massachusetts shows that in that American town alone 58 languages are spoken"

(ಸಾರಾಂಶ:—ಸಂಯುಕ್ತ ಅಮೇರಿಕೆಯಲ್ಲಿ ಹಿಂದುಸ್ಥಾನದಲಿಯಕಿಂತ ಹೆಚ್ಚು ಭಾಷೆಗಳು ಪ್ರಚಾರದಲ್ಲಿವೆ. ಅಲ್ಲಿಯ ಒಂದು ಪಟ್ಟಣದಲ್ಲಿ ೫೮ ಭಾಷೆಗಳನ್ನಾಡುವ ಜನರು ವಾಸವಾಗಿದ್ದಾರೆ.)

ಆದರೆ ಹಿಂದೂ ದೇಶದ ದೊಡ್ಡ ಪಟ್ಟಣಗಳಾದ ಕಲಕತ್ತೆ, ಮುಂಬಯಿ ಮುಂತಾದ ಸ್ಥಳಗಳಲ್ಲಿ ಕೂಡ ೫೮ ಭಾಷೆಗಳು ಪ್ರಚಾರದಲ್ಲಿ ಇಲ್ಲವೆಂದು ಎಲ್ಲರಿಗೂ ತಿಳಿದ ವಿಷಯ. ಅಮೇರಿಕಾ ದೇಶದಲ್ಲಿ ಎಷ್ಟೋ ವರುಷ ವಾಸವಾಗಿದ್ದು ಅಲ್ಲಿಯ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲ ದಿವಂಗತ ಲಾಲಾ ಲಜಪತರಾಯರು ಅಲ್ಲಿಯ ಭಾಷೆಗಳನ್ನು ಕುರಿತು,

"Look at the number of languages spoken in the United States—in their schools and in their factories." ಎಂದು ಹೇಳುತ್ತಾರೆ.

(ಸಾರಾಂಶ:—ಸಂಯುಕ್ತ ಅಮೇರಿಕೆಯ ಸಾಲೆಗಳಲ್ಲಿ ಕಾರಖಾನೆಗಳಲ್ಲಿ ಜನರು ಮಾತನಾಡುವ ಆ ಭಾಷೆಗಳೆಷ್ಟು!)

ಅಮೇರಿಕಾ ದೇಶದಲ್ಲಿ ಬಹಳ ಭಾಷೆಗಳು ಪ್ರಚಾರದಲ್ಲಿದ್ದುದರಿಂದ ಆ ದೇಶವು ಸ್ವರಾಜ್ಯಕ್ಕೆ ಅಯೋಗ್ಯವೆಂದು ಯಾವ ಆಂಗ್ಲನು ಹೇಳಬಲ್ಲನು!

ರಶಿಯಾ ದೇಶದ ಕಡೆಗೆ ನಮ್ಮ ದೃಷ್ಟಿ ತಿರುಗಿಸಿದರೂ ಇದೇ ಹಾಡು. ಡಾ. ಶೆರ್‌ವುಡ್ ಎಡಿ (Sherwood Eddy) ಯವರು ಹೇಳುವಂತೆ ಆ ರಾಷ್ಟ್ರದಲ್ಲಿ ೧೪೯ ಭಾಷೆಗಳಿವೆ.

"Her population embraces 149 different languages …… Some of thes peoples are more primitive and much less civilized than those of Egypt and Babylon six thousand years ago. Some of their languages are now reduced to writing for the first time."

ಭಾರತೀಯರು ಈ ಜನರಿಗಿಂತ ನಾಗರಿಕತೆಯಲ್ಲಿ ಮುಂದುವರಿದವರೆಂದು ಬೇರೆ ಹೇಳಬೇಕಾಗಿಲ್ಲ. ಅಂದ ಮೇಲೆ ನಾವು ಇವರಿಗಿಂತ ಹೆಚ್ಚು ಚೆನ್ನಾಗಿ ರಾಜ್ಯವಾಳಲಿಕ್ಕೆ ಸಮರ್ಥರಿದ್ದೇವೆಂದು ಸಿದ್ಧವಾಗುತ್ತದೆ. ಬರೇ ೮೦ ಲಕ್ಷ ಜನವಸ್ತಿಯುಳ್ಳ—ಅಂದರೆ ಕರ್ನಾಟಕಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ—ಕೆನಡಾ ದೇಶದಲ್ಲಿ ೧೭೪ ಭಾಷೆಗಳು ಪ್ರಚಾರದಲ್ಲಿವೆ. ಈ ಪ್ರಮಾಣದಿಂದ ನೋಡಿದರೆ ಭರತಖಂಡದಲ್ಲಿದ್ದ ಭಾಷೆಗಳ ಸಂಖ್ಯೆಯು ಕಿರಿದೆಂದೇ ಹೇಳಬೇಕಾಗುತ್ತದೆ. ಕೆನಡಾ ದೇಶವು ಸಾಮಂತ ಸ್ವರಾಜ್ಯವನ್ನು (Dominion Status) ಅನುಭವಿಸುತ್ತಿರುವ ರಾಷ್ಟ್ರವೆಂದು ಎಲ್ಲರಿಗೂ ತಿಳಿದ ಮಾತು. ಹಿಂದುಸ್ಥಾನಕ್ಕಿಂತ ಹೆಚ್ಚಿಗೆ 'ಸ್ವಾತಂತ್ರ್ಯ'ವನ್ನು ಪಡೆದ ಫಿಲಿಪಾಯನ್ಸ ದ್ವೀಪಸಲ್ಲಿ (Phillipines Islands) ೮೭ ಭಾಷೆಗಳು ಪ್ರಚಾರದಲ್ಲಿವೆ. ಈ ದ್ವೀಪದ ಜನಸಂಖ್ಯೆಯಾದರೋ ಬರೇ ೧ ಕೋಟಿ.

ಸ್ವತಂತ್ರ ರಾಷ್ಟ್ರವಾದ ಸ್ವಿಝರ್‌ಲಂಡಿನ ವಿಷಯ ಬರೆಯುವಾಗ ಜೇಮ್ಸ್ ಬ್ರಾಯ್ಸರು (James Bryce) ಅಲ್ಲಿಯ ಭಾಷೆಗಳನ್ನು ಕುರಿತು ಒಂದೆಡೆ ಹೀಗೆ ಬರೆಯುತ್ತಾರೆ:—

"In fifteen cantons (of Switzerland) German is the language almost exclusively spoken, in three (cantons) French, in one (canton) Italian, in two each tongue claims about the half of the inhabitants while in Bern Geaman predominates, as does French in Fribourg."

(ಸಾರಾಂಶ:—ಸ್ವಿಝರ್‌ಲಂಡಿನ ೧೫ ಪ್ರಾಂತಗಳಲ್ಲಿ ಜರ್ಮನ್ ಭಾಷೆಯೂ, ೩ ಪ್ರಾಂತಗಳಲ್ಲಿ ಫ್ರೆಂಚ್ ಭಾಷೆಯೂ, ಒಂದರಲ್ಲಿ ಇಟಾಲಿ ಭಾಷೆಯೂ, ಹೀಗೆ ಪ್ರಚಾರದಲ್ಲಿವೆ.)

ಸ್ವಿಝರ್‌ಲಂಡಿನ ಜನಸಂಖ್ಯೆಯು ಬರೇ ೩೯ ಲಕ್ಷ. ಅಂದರೆ ಒಂದೇ ಭಾಷೆಯಾದ ಕನ್ನಡವನ್ನಾಡುವ ಧಾರವಾಡ, ಬೆಳಗಾಂವಿ, ವಿಜಾಪುರ ಮತ್ತು ಮಂಗಳೂರು ಈ ನಾಲ್ಕು ಜಿಲ್ಹೆಗಳ ಜನವಸ್ತಿಯಷ್ಟು ! ಹೀಗಿದ್ದೂ ಸ್ವಿಝರ್‌ಲಂಡಿನಲ್ಲಿ ಮೂರು ಭಾಷೆಗಳು ! ಅಲ್ಲದೆ, ಸ್ವಿಝರ್‌ಲಂಡ್ ಜನಾಂಗವು ಪ್ರಜಾಪ್ರಭುತ್ವವಿದ್ದ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಹೆಸರಾದದ್ದು. ರಾಜಕಾರಣಶಾಸ್ತ್ರದಲ್ಲಿ ನುರಿತ ಲೇಖಕರಾದ ಜೇಮ್ಸ್ ಬ್ರಾಯ್ಸರು ತಮ್ಮ " Modern Democracies " ಎಂಬ ಪುಸ್ತಕದ ಮೊದಲನೇ ಭಾಗದ ೫೦೫ ನೇ ಪುಟದಲ್ಲಿ, ಸ್ವಿಸ್ ಜನರ ಸ್ವತಂತ್ರ ಸರಕಾರದ ಮೇಲ್ಮೆಯನ್ನು ಹೊಗಳಿ ಹೀಗೆ ಹೇಳುತ್ತಾರೆ:—

" To have established and worked such a Government······is to have rendered a real service to mankind."

(ಸಾರಾಂಶ:— ಇಂಥ ಉತ್ಕೃಷ್ಟವಾದ ಸರಕಾರವನ್ನು ಸ್ಥಾಪಿಸಿ, ಅದನ್ನು ನಡೆಸುವುದೆಂದರೆ, ಇಡೀ ಮಾನವ ಜಾತಿಯ ಸೇವೆ ಮಾಡಿದಂತೆಯೇ ಸರಿ.)

೩೯ ಲಕ್ಷ ಜನ ಸಂಖ್ಯೆಯುಳ್ಳ ಸ್ವಿಝರ್‌ಲಂಡಿನಲ್ಲಿ ಮೇಲೆ ಹೇಳಿದ ೩ ಭಾಷೆಗಳು ಪ್ರಚಾರದಲ್ಲಿದ್ದರೆ, ೩೩ ಕೋಟಿ ಜನ ಸಮುದಾಯವುಳ್ಳ ಹಿಂದುಸ್ಥಾನದಲ್ಲಿ ೨೫೩ ಭಾಷೆಗಳು ಇದ್ದಿರಬೇಕಾಗಿತ್ತು. ಆದರೆ ೧೯೧೧ ನೇ ಇಸವಿಯ ಖಾನೇಸುಮಾರಿಯಂತೆ (census) ಹಿಂದೂ ದೇಶದಲ್ಲಿ ೨೨೦ ಭಾಷೆಗಳಿವೆಯೆಂದು ತಿಳಿದು ಬರುತ್ತದೆ. ನಿಜವಾಗಿ ನೋಡಿದರೆ ನಮ್ಮ ದೇಶದಲ್ಲಿ ಇಷ್ಟು ಭಾಷೆಗಳು ಇಲ್ಲವೇ ಇಲ್ಲವೆಂದು ನಿಃಸಂದೇಹವಾಗಿ ಹೇಳಬಹುದು. ಆಳರಸರು ಇಲ್ಲದ ಸಲ್ಲದ ಒಳನುಡಿಗಳನ್ನೂ (dielects) ಪ್ರತ್ಯೇಕ ಭಾಷೆಗಳೆಂದು ಸಾಧಿಸಿ, ಹಿಂದೂ ದೇಶದ ಭಾಷೆಗಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆಂ[illegible]ದಕ್ಕೆ ಯಾವ ಅಭ್ಯಂತರವೂ ಇಲ್ಲ. ಇದಕ್ಕೆ ೧೯೧೧ ನೇ ಇಸವಿಯ ಖಾನೇಸುಮಾರಿಯೇ ಸಾಕ್ಷಿ. ಈ ಖಾನೇಸುಮಾರಿಯ ಲೆಕ್ಕದಂತೆ ನಮ್ಮ ದೇಶದಲ್ಲಿ ೨೨೦ ಭಾಷೆಗಳಿವೆಯೆಂದು ಮೇಲೆ ಹೇಳಿದೆ. ಅದೇ ೧೯೦೧ ನೇ ಇಸವಿಯ ಖಾನೇಸುಮಾರಿಯ ಪ್ರಕಾರ ೧೪೭ ಭಾಷೆಗಳಿದ್ದವೆಂದು ತಿಳಿದು ಬರುತ್ತದೆ. ಅಂದರೆ ಹತ್ತು ವರುಷಗಳ ಅವಧಿಯಲ್ಲಿ ೭೩ ಹೊಸ ಭಾಷೆಗಳು ಹುಟ್ಟಿದವೆಂದು ಅರ್ಥ ! ಹೀಗೆ ಅನ್ನುವುದು ಶುದ್ಧ ಅವಿವೇಕವನ್ನು ಹೊರಗೆಡವಿದಂತೆಯೇ ಸರಿ. ಇನ್ನು ಕೆಲವು ವರುಷಗಳು ಹೋದರೆ, ಕನ್ನಡದಲ್ಲಿಯ ' ಧಾರವಾಡ ಕನ್ನಡ ' ' ಮೈಸೂರು ಕನ್ನಡ ' ಈ ಭೇದಗಳನ್ನೇ ಮುಂದೆ ಚಾಚಿ " ಧಾರವಾಡೀ ಭಾಷೆ " " ಮೈಸೂರೀ ಭಾಷೆ " ಎಂಬ ಬೇರೆ ಬೇರೆ ಭಾಷೆಗಳಿವೆಯೆಂದು ಹೇಳಲು ಸಹ ಹಿಂಜರಿಯುವ ಹೇಡಿಗಳು ನಮ್ಮ ಆಳರಸರಲ್ಲ ! ಇದೇ ವಿಷಯವನ್ನು ಲಾಲಾ ಲಜಪತರಾಯರು ಬಹು ಸುಂದರವಾಗಿ ತಮ್ಮ ' ಯಂಗ ಇಂಡಿಯಾ ' ಪುಸ್ತಕದಲ್ಲಿ ಹೇಳಿದ್ದಾರೆ: —

" The number of religions, sects and languages in India has been grossly exaggerated. With every census the number goes up by hundreds *though the country and the people are the same.*"

(ಸಾರಾಂಶ:— ಹಿಂದೂ ದೇಶವೂ ಹಿಂದೀಯರೂ ಒಂದೇ ಆಗಿದ್ದರೂ, ಹಿಂದುಸ್ಥಾನದಲ್ಲಿಯ ಧರ್ಮಗಳ ಪಂಥಗಳ ಮತ್ತು ಭಾಷೆಗಳ ಸಂಖ್ಯೆಯು ಮಾತ್ರ ದಿನೇ ದಿನೇ ಸರಕಾರದ ಖಾನೇ ಸುಮಾರಿಯ ಪ್ರಕಾರ ಬೆಳೆಯುತ್ತ ಹೋಗುತ್ತದೆ !) ಈ ೨೨೦ ಭಾಷೆಗಳಾದರೋ ಎಂಥ ಮಾದರಿಯವು ? ಎಂದು ವಿಚಾರಿಸಲಿಕ್ಕೆ ಹೋದರೆ ಅದೊಂದು ವಿನೋದವಾಗಿಯೇ ಪರಿಣಮಿಸುವುದು. ಸ್ವಿಝರ್‌ಲಂಡಿನಲ್ಲಿ ಜರ್ಮನ್, ಫ್ರೆಂಚ ಮತ್ತು ಇಟಲಿಯನ್ ಈ ಮೂರು ಭಾಷೆಗಳು ಪ್ರಚಾರದಲ್ಲಿವೆ ಎಂದು ಮೊದಲೇ ಹೇಳಿದೆ; ಇವು ಪ್ರತ್ಯೇಕವಾದ ಮತ್ತು

ಸ್ವತಂತ್ರವಾದ ಭಾಷೆಗಳು. ನಮ್ಮ ದೇಶದಲ್ಲಿಯಾದರೊ ಇಂಥ ಪ್ರತ್ಯೇಕ ಭಾಷೆಗಳ ಸಂಖ್ಯೆಯು ಹೆಚ್ಚೆಂದರೆ ೨೦ ಇರಬಹುದು. ಹಿಂದಿ, ಬಂಗಾಲಿ, ಬಿಹಾರಿ, ಉರಿಯಾ, ಆಸಾಮಿ, ರಾಜಸ್ಥಾನಿ, ಮರಾಠಿ, ಗುಜರಾಥಿ, ಪಂಜಾಬಿ, ಸಿಂಧಿ, ಪಸ್ತು, ಪಹರಿ, ತಮಿಳು, ತೆಲುಗು, ಕನ್ನಡ, ಮಲೆಯಾಳ ಮತ್ತು ಉರ್ದು ಇವಿಷ್ಟೇ ಹಿಂದುಸ್ಥಾನದ ೧೭ ಪ್ರತ್ಯೇಕ ಭಾಷೆಗಳು. ಜನಗಣನೆಯಂತೆ ವಿಚಾರಿಸಿದಲ್ಲಿ ಸಂಯುಕ್ತ ಅಮೇರಿಕಾ ರಶಿಯಾ, ಕೆನಡಾ, ಮುಂತಾದ ಸ್ವತಂತ್ರರಾಷ್ಟ್ರಗಳಲ್ಲಿಯಕಿಂತ ಹಿಂದುಸ್ಥಾನದಲ್ಲಿ ಭಾಷೆಗಳು ಕಡಿಮೆಯೆಂದು ವ್ಯಕ್ತವಾಗುತ್ತದೆ. ಹೀಗೆಂದ ಮೇಲೆ ಭಾರತೀಯರ ಸ್ವರಾಜ್ಯದ ಹಾದಿಯಲ್ಲಿ ಮಾತೃಭಾಷಾಪ್ರಶ್ನೆಯು ಹೇಗೆ ಅಡ್ಡ ಬರುತ್ತದೆಯೋ ದೇವರೇ ಬಲ್ಲ !

ಹಿಂದೂ ದೇಶದಲ್ಲಿ ಸಾವಿರಾರು ಭಾಷೆಗಳು ಪ್ರಚಾರದಲ್ಲಿವೆಯೆಂದು ಒಂದು ವೇಳೆ ತಿಳಿಯುವಾ. ಬ್ರಿಟಿಶರು ಇಲ್ಲಿದ್ದ ಮಾತ್ರಕ್ಕೆ ಈ ಎಲ್ಲ ಭಾಷೆಗಳು ನಾಶ ಹೊಂದುತ್ತವೆಯೇ ಎಂಬುದೊಂದು ವಿಚಾರ ! ನಮಗೆ ಸ್ವರಾಜ್ಯ ದೊರೆತರೆ ಈ ಭಾಷೆಗಳು ಬಸುರಾಗಿ ಮರಿ ಹಾಕುವವೋ ಹೇಗೆ ಎಂಬುದು ಇನ್ನೊಂದು ವಿಚಾರ ! ಎರಡೂ ವಿಚಾರಗಳು ಮೂರ್ಖತನದ ಪರಮಾವಧಿಗಳೇ ಹೊರತು, ಅವುಗಳಲ್ಲಿ ಹುರುಳಿಲ್ಲ. ಬ್ರಿಟಿಶರು ನಮ್ಮ ದೇಶಕ್ಕೆ ಬರುವ ಮೊದಲು ನಮ್ಮಲ್ಲಿ ಈ ಭಾಷೆಗಳು ಇರಲಿಲ್ಲವೋ ಅಥವಾ ನಮಗೆ ಸ್ವರಾಜ್ಯವು ಇರಲಿಲ್ಲವೋ ! ಎರಡೂ ಇದ್ದುವು. ಅಶೋಕ ಮಹಾರಾಜನ ಕಾಲದಲ್ಲಿ ಅನೇಕ ಪ್ರಾಕೃತ ಭಾಷೆಗಳಿದ್ದುವೆಂದು ಶಿಲಾಶಾಸನಗಳಿಂದ ಗೊತ್ತಾಗುತ್ತದೆ. ಅಕಬರನ ಕಾಲದಲ್ಲಿ ಬಹುಶಃ ಈಗಿನ ಎಲ್ಲ ಭಾಷೆಗಳು ಪ್ರಚಾರದಲ್ಲಿ ಇದ್ದೇ ಇದ್ದುವು. ಸ್ವಾತಂತ್ರ್ಯದ ತವರುಮನೆಯಾದ ವಿಜಯನಗರದ ಸಾಮ್ರಾಜ್ಯದಲ್ಲಿ ದಕ್ಷಿಣ ಹಿಂದುಸ್ಥಾನದ ಈಗಿನ ಕನ್ನಡ, ತೆಲುಗು, ತಮಿಳು, ಮಲೆಯಾಳ ಈ ಪ್ರತ್ಯೇಕ ಭಾಷೆಗಳೂ ಕೊಂಕಣಿ, ತುಳು, ಕೊಡಗಿ, ಬಡಗಿ ಮುಂತಾದ ಒಳನುಡಿಗಳೂ ವಿಜಯನಗರವನ್ನು ಬಿಟ್ಟು ಚೀನಾದೇಶಕ್ಕೆ ಓಡಿ ಹೋಗಿರಲಿಲ್ಲ. ಇದೇ ವಿಷಯವನ್ನು ಕುರಿತು ಘನ ಪಂಡಿತ ಲಾಲಾಜಿಯವರು ಹೀಗೆ ಬರೆಯುತ್ತಾರೆ.

"Those who plead that the Indians are too hopelessly divided by religions communities, sects, castes and *languages* to be able to form a government of their own, forget that the English have been in India only for the last century and a half and that before India governed itself."

(ಸಾರಾಂಶ:— ಹಿಂದೂ ದೇಶದಲ್ಲಿ ಅಸಂಖ್ಯ ಜಾತಿಗಳೂ, ಪಂಗಡಗಳೂ, ಭಾಷೆಗಳೂ ಇರುವುದರಿಂದ, ಭಾರತೀಯರು ಸ್ವರಾಜ್ಯಕ್ಕೆ ಅಯೋಗ್ಯರೆಂದು ಕೆಲವರು ತಿಳಿಯುತ್ತಾರೆ. ಆದರೆ, ಬರೇ ಒಂದೂವರೆ ಶತಮಾನಕ್ಕೆ ಹಿಂದೆ ಅಂದರೆ ಆಂಗ್ಲರು ಇಲ್ಲಿ ಬರುವ ಮೊದಲು, ಹಿಂದುಸ್ಥಾನವು ಸ್ವತಂತ್ರವಾಗಿತ್ತೆಂಬುದನ್ನು ಈ ಮಹಾನುಭಾವರು ಮರೆತಂತೆ ಕಾಣುತ್ತದೆ !)

ಹಿಂದುಸ್ಥಾನದಲ್ಲಿ ಅನೇಕ ಭಾಷೆಗಳಿರುವುದರಿಂದ ಇಲ್ಲಿ ರಾಜ್ಯವಾಳುವುದು ಹಿಂದೀಯರಿಗೆ ಕಷ್ಟಕರವಾದದ್ದೆಂದು ಒಂದು ವೇಳೆ ಒಪ್ಪಿಕೊಳ್ಳೋಣ. ತಮ್ಮ ಭಾಷೆಗಳನ್ನು ಚೆನ್ನಾಗಿ ಅರಿತ ಭಾರತೀಯರಿಗೇ ಹಿಂದೂ ದೇಶವನ್ನು ಆಳುವುದು ಕಷ್ಟಸಾಧ್ಯವಾದ ಕೆಲಸವಾಗಿದ್ದ ಪಕ್ಷದಲ್ಲಿ, ಹಿಂದೂದೇಶದ ಒಂದೂ ಭಾಷೆಯನ್ನು ಎಳ್ಳಷ್ಟಾದರೂ ಬಾರದ ಆಂಗ್ಲರಿಗೆ ಅದು ಹೇಗೆ ಸಾಧ್ಯವೋ ಆ ಪುಣ್ಯಾತ್ಮರಿಗೇ ಗೊತ್ತು !

ಒಟ್ಟಿನಲ್ಲಿ ಹೇಳಬೇಕಾದರೆ, ಸ್ವರಾಜ್ಯಕ್ಕೂ ಭಾಷಾವಿವಿಧತೆಗೂ ಏನೂ ಸಂಬಂಧವಿಲ್ಲ. ದೇಶವು ವಿಸ್ತಾರವಾಗಿದ್ದರೆ, ಹೆಚ್ಚು ಭಾಷೆಗಳು ಪ್ರಚಾರದಲ್ಲಿರುವುದು ಪ್ರಪಂಚದ ಒಂದು ನಿಯಮ. ಜಗತ್ತಿನ ಎಲ್ಲ ಜನಾಂಗಗಳು ಸ್ವತಂತ್ರವಾಗಿರಬೇಕೆಂಬುದು ಮಾನವಜಾತಿಯ ಜನ್ಮಸಿದ್ಧ ಹಕ್ಕು ! ಇಂಗ್ಲಂಡಿನಂಥ ಚಿಕ್ಕದಾದ—ಒಂದು ಭಾಷೆಯಿರುವ—ರಾಷ್ಟ್ರದಲ್ಲಿ 'ಐಕ್ಯ ಸರಕಾರ' ಪದ್ಧತಿ (Unitary government) ಯಿದ್ದರೆ ಸಾಕು. ಸ್ವರಾಜ್ಯವನ್ನು ಸಾಗಿಸಬಹುದು. ಸಂಯುಕ್ತ ಅಮೇರಿಕೆಯಂಥ ದೊಡ್ಡದಾದ—ಅನೇಕ ಭಾಷೆಗಳಿರುವ—ರಾಷ್ಟ್ರದಲ್ಲಿ 'ಸಾಂಘಿಕ ಸರಕಾರ' ಪದ್ಧತಿ (Federal government) ಯಿದ್ದರೆ ಸಾಕು. ಸ್ವರಾಜ್ಯವನ್ನು ನಡೆಸಬಹುದು. ಆಯಾ ದೇಶಗಳ ವಿಸ್ತಾರ, ಭಾಷಾವಿವಿಧತೆಗಳಿಗನುಸರಿಸಿ, ಸರಕಾರ ಪದ್ಧತಿಯು ಬೇರೆಯಾಗಬಹುದೇ ಹೊರತು ಸ್ವರಾಜ್ಯವು (National independence) ಮಾತ್ರ ಎಂದಿಗೂ ಅಸಾಧ್ಯವಾಗಲಾರದು. ಇದು ಖಂಡಿತ.

ನನ್ನ ನಲ್ಲ

(ಗೆಳೆಯರ ಗುಂಪಿನಲ್ಲಿ ಮಧುರಚೆನ್ನನು ಬರೆದುದು)

" ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ ನಮ್ಮ ನಲ್ಲ।
ಸುಳಿಯಲಿಲ್ಲ, ಸುಳಿದು ಶೃಂಗಾರವ ಮಾಡಲಿಲ್ಲ।
ತನ್ನೊಳಗೇ ಎನ್ನ ಬಚ್ಚಿಟ್ಟನಲ್ಲಾ ॥ "

—ಬಸವಣ್ಣ

೧ನೇ ಎಸಳು

॥ ಕುಸುಮ ದ್ವಿಪದಿ ॥

ಏನಮ್ಮ ಪ್ರತಿಭೆ ನೀನೀಸುದಿನವೆಲ್ಲಿದ್ದಿ ?
ಮತ್ತೆ ಹೇಗಿಲ್ಲಿಗೇ ಮರುಳಿ ಬಂದೇ।
ದಾನಮ್ಮ ನೀನೊಲಿಯೆ ಕೊರಡು ಕೊನರುವದೆಂದೆ
ಬರಡು ಹಯನಾಗಲೂ ಬಲ್ಲದೆಂದೆ ॥ ೧ ॥

ಹಾಡಬೇಕೆಂದೆಸೊ ದಿನ ಬಯಸಿ ಬೇಡಿದರೆ
ಒಂದು ನುಡಿಯೂ ಕೂಡ ಮೂಡಲಿಲ್ಲ।
ಹಾಡಿ ಮುಗಿಸೇನೆಂದರಿಂದು ನುಡಿ ನಿಲ್ಲದಿದೆ
ನಿನ್ನೊನಪಿನೊಯ್ಯಾರ ತಿಳಿಯದಲ್ಲಾ ॥ ೨ ॥

ಹಿಂದೆ ಬಹುದಿನ ಹಿಂದೆ ನಾನಾಗಿ ಬಂದಿದ್ದೆ
ನಿನ್ನ ಬಾಗಿಲತನಕ ಹಂಬಲಾಗಿ।
ಅಂದು ನಿನ್ನುಬ್ಬಿನಲಿ ನೀನಿದ್ದಿ ಲೆಕ್ಕಿಸದೆ
ಇಂದು ನೀನೇ ಬಂದಿ ಯಾತಕಾಗಿ ॥ ೩ ॥

ಈಸುದಿನಗಳ ಬೆಂಕಿ ಈಗಾರಿತೆಂದಿಲ್ಲಿ
ಮತ್ತೆ ನೀನಡಿಯಿಟ್ಟೆ ಹೌದೆ ಜಾಣೇ।
ಲೇಸಿನೊಡತಿಯು ನೀನು ಹಿಗ್ಗಿನಾ ಹಾಲುಂಡು
ಹೂವಿನಾ ಹಾಸಿಗೆಯು ತುಳಿವ ರಾಣೀ ॥ ೪ ॥

ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆ ಬರುವದರ ಕಣ್ಣಸನ್ನೆ ಕಾಣೋ।
ಅರಿಯದಾ ಹವಣಿಕೆಯು ಜೀವಜೀವನ ಲೀಲೆ
ದೇವದೇವನ ಗೂಢ ವಿಧಿಯು ಕಾಣೋ ॥ ೫ ॥

ಹನ್ನೆರಡು ತುಂಬಿಲ್ಲ ಕನ್ನೆಕ್ಕಿ ನಾನಂದು
ನನ್ನ ನಲ್ಲನ ಕತೆಗೆ ಮರುಳುಗೊಂಡೆ।
ಇನ್ನೇನು ಹೇಳುವೆನು ಇಂದಿಗಿಪ್ಪತ್ತಾರು
ಈಸೊಂದು ದಿನ ಕೊರಗಿ ಗೊತ್ತುಗಂಡೆ ॥ ೬ ॥

ಹದಿನಾಲ್ಕು ವರುಷದಾ ರಾಮರಾ ವನವಾಸ
ಗರ್ಭಿಣಿಯು ಸವಮಾಸ ಮೃತ್ಯುಹಾಸ।
ಕುದಿಕುದಿದು ಜೀಯುವಾ ಬರಗಾಲದುಪವಾಸ
ಮರುಗುವಾ ವಿರಹಿಣಿಯು ಊರ್ಧ್ವಶ್ವಾಸ ॥ ೭ ॥

ಜೊತೆಯಿಲ್ಲದೇ ಬೆಳೆಯೆ ಜೊತೆಯಿಲ್ಲದೇ ಉಳಿಯೆ
ಜೊತೆಯಿಲ್ಲದಾ ಬಾಳು ಗೋಳುಗೋಳು।
ಜೊತೆಯಿಲ್ಲದಾಹೊತ್ತು ನೀಗಲಾರದ ಕುತ್ತು
ಜೊತೆಯಿಲ್ಲದಿರಲೆಲ್ಲ ಹಾಳುಹಾಳು ॥ ೮ ॥

ಜೊತೆಯಿಂದಲೇ ಜಗದ ಕುಡಿಯು ಕೊನರುತಲಿಹುದು
ಜೊತೆಯಿಂದಲೇ ಮಮತೆ ಮೊಳೆಯುತಿಹುದು।
ಜೊತೆಯಾಶೆ ಜೀವರಿಗೆ ಸೃಷ್ಟಿಸಮ್ಮತ ವಿಧಿಯು
ಜೊತೆಯಿಂದಲೇ ಭಾವ ಬೆಳೆಯುತಿಹುದು ॥ ೯ ॥

ಕನ್ನೆಕ್ಕಿಯಿರುವನಕ ಹೆಸರುಹೇಳುವ ಹಿಗ್ಗು
ಕಂಡು ಕಾಣದ ಕತೆಯ ಕೇಳಿ ಹಿಗ್ಗು।
ಹೊನ್ನಶೂಲದ ಹರೆಯ ಹೊಮ್ಮಿ ಹೊರಚೆಲ್ಲಿದರೆ
ನಲ್ಲನಗಲಿಕೆಯಾಗ ಮನಕೆ ಕುಗ್ಗು ॥ ೧೦ ॥

ಹರೆಯ ಬಾರದ ಮುನ್ನ ಹಾಗು ಹೀಗೂ ಇದ್ದೆ
ಕರುಳು ಹಸಿಯದ ಮುನ್ನ ಕೆರಳದಿದ್ದೆ।
ಕರುಣವಿಲ್ಲದ ಬೆಂಕಿ ಕರುಳು ಕೆದರಿತು ಮುಂದೆ
ಮಂಜುಳಿದು ಮಳೆನೀರಿಗಾಶೆಗೈದೆ ॥ ೧೧ ॥

ಬಣ್ಣದಾ ಹಣ್ಣುಗಳ ತಿಂದು ತೇಗಲುಬಹುದೆ
ಚಿತ್ರದಾಮಲ್ಲಿಗೆಯ ಮೂಸಬಹುದೇ?।
ಮಣ್ಣುಗೊಂಬೆಯ ಮೆಚ್ಚಿ ಮಾತನಾಡಿಸಬಹುದೆ
ಹೊಗೆಯುಹೊಳೆ ಯಾರಾರೆ ಈಸಬಹುದೇ ? ॥ ೧೨ ॥

ದೇವರಾಯನ ಹೆಸರನೇಕೆ ಕೇಳಿದೆನಮ್ಮ
ನಾನೇಕೆ ನಂಜು ನುಂಗಿದೆನೆ ತಾಯಿೂ ।
ಯಾವ ಕಡೆಗೂ ಮಗ್ಗಲೂರಗುಡದಮ್ಮಯ್ಯ
ಈ ನೋವ ನಾ ತಾಳಲೆಂತೆ ತಾಯಿೂ ॥ ೧೩ ॥

ಮನೆಹತ್ತಿ ಉರಿದಲ್ಲಿ ದೂರ ಸರಿಯಲುಬಹುದು
ಮನಹತ್ತಿ ಉರಿದರೆಲ್ಲೋಡಬಹುದೋ ।
ತನುತಾಪವಿದ್ದಲ್ಲಿ ತಂಪು ತೊಡೆಯಲುಬಹುದು
ಮನದ ಕಿಚ್ಚಿನ್ನೆಂತು ನೊಂದಬಹುದೋ ॥ ೧೪ ॥

ನನ್ನ ನಲ್ಲನ ನೆನವು ಮನವ ಮುಚ್ಚಿಕ್ಕಿರಲು
ಹಗಲು ಇರುಳಾಗುವದು ತಾನೆ ಅರಿದೇ ।
ನನ್ನ ರಾಯನ ಚಿಂತೆ ಎವೆಯಿಕ್ಕಗುಡದಿರಲು
ನನಗಾಗ ಇರುಳು ಹಗಲಾಗದಿರದೇ ॥ ೧೫ ॥

ಬೇಯುವೆನು ಬಾರೆಂದೆ ನೋಯುವೆನು ಬಾರೆಂದೆ
ಸಾಯುವೆನು ಸಲುಹಬಾರೆಂದು ಕರೆದೆ ।
ತಾಯಿ ನೀ ಬಾರೆಂದೆ ತಂದೆ ನೀ ಬಾರೆಂದೆ
ಪರದೇಶಿಯನು ಪಾಲಿಸೆಂದು ಮೊರೆದೆ ॥ ೧೬ ॥

ಹಲುಬುವೆನು ಬಾರೆಂದೆ ಹಂಬಲಿಸುತಿಹೆನೆಂದೆ
ಹೊಲಬುಗೆಟ್ಟೆನು ಹೊರಳಿ ದಿಟ್ಟಿಸೆಂದೆ ।
ನೆಲೆಗೆಟ್ಟೆ ಬಾರೆಂದೆ ಬಲಗೆಟ್ಟೆ ಬಾರೆಂದೆ
ಛಲಗೆಟ್ಟೆ ಕುಲಗೆಟ್ಟೆ ರಕ್ಷಿಸೆಂದೆ ॥ ೧೭ ॥

ಮರುಗುವೆನು ಬಾರೆಂದೆ ಸೊರಗುವೆನು ಬಾರೆಂದೆ
ಕೊರಗುವೆನು ಕಾಯಬಾರೆಂದು ಕರೆದೆ ।
ನರಳುವೆನು ಬಾರೆಂದೆ ಹೊರಳುವೆನು ಬಾರೆಂದೆ
ಕೊರಳಾಣೆಯಿಟ್ಟಿಟ್ಟು ಚೆಲ್ಲವರಿದೆ ॥ ೧೮ ॥

ಕಲ್ಲೆದೆಯ ಕಣಿಯೆಂದೆ ಕೊರಳುಕೊಯ್ವವನೆಂದೆ
ಕರುಳು ಕರಗದ ಕುಟಿಲ ಕಟುಕನೆಂದೆ ।
ಸೊಲ್ಲಡಗಿತೇನೆಂದೆ ಛೀ ಸತ್ತೆಯೇನೆಂದೆ
ಬಲ್ಲಂತೆ ಬಾಯ್ಬಿಟ್ಟೆ ಬೈದೆ ಅಂದೆ ॥ ೧೯ ॥

ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆಬರುವದರ ಕಣ್ಣನ್ನೆ ಕಾಣೋ ।
ಅರಿಯದಾ ಹವಣಿಕೆಯು ಜೀವಜೀವನಲೀಲೆ
ದೇವದೇವನ ಗೂಢವಿಧಿಯು ಕಾಣೋ ॥ ೨೦ ॥

೨ನೇ ಎಸಳು

ನೆಲಬಗಿದು ಹುಡುಕುವೆನೆ ಮುಗಿಲೇರಿ ನೋಡುವೆನೆ
ನನ್ನ ಕರುಳಿನ ಕಿಚ್ಚು ಹೇಳಲಾರೆ ।
ಚೆಲುವ ಚೆನ್ನಿಗರಾಯನೆಲ್ಲಿ ಸಿಗಬಹುದಮ್ಮ
ಅವನ ಕಾಣದೆ ಇನ್ನು ತಾಳಲಾರೆ ॥ ೧ ॥

ಯಾವ ದೇಶಾಂತರದೊಳೆಲ್ಲಿ ನಲ್ಲನ ವಾಸ
ಕಂಡವರನೆಲ್ಲಾರ್ಯಾರೆ ಕಾಣಬಹುದೇ ।
ಯಾವ ಪುಣ್ಯಾತ್ಮರಾ ಕಾಲು ಹಿಡಿಯಲೆ ತಾಯಿ
ಹೇಗಾರೆ ದೊರೆಯೆನಗೆ ದೊರೆಯಬಹುದೇ ॥ ೨ ॥

ಯಕ್ಷ ರಾಕ್ಷಸರಿರಲಿ ಭೂತಬೆಂತರವಿರಲಿ
ದೇವಗಂಧರ್ವರ್ಯಾರಾರೆ ಇರಲಿ ।
ಲಕ್ಷಿಸಲಿ ಲಕ್ಷಿಸಲಿ ನನ್ನಮೊರೆ ಲಕ್ಷಿಸಲಿ
ರಕ್ಷಕನ ಸುದ್ದಿ ಯಾರಾರೆ ತರಲಿ ॥ ೩ ॥

ಕಣಿಯ ಕೇಳಲೆ ಮತ್ತೆ ಹೊತ್ತಿಗೆಯ ಕೇಳಲೇ
ದಿಗ್ದೇಶ ದೇಶಿಕರ ಕೇಳಲೇನೇ ? ।
ಗಣಿತಿಗಳ ಕೇಳಿದರೆ ಗುಣಿಸಿ ಹೇಳ್ಯಾರೇನೆ
ಯಾರ ಮೊರೆಹೊಗಲಿನ್ನು ಮಾಡಲೇನೇ ? ॥ ೪ ॥

ಬರುವನೆಂಬರು ಕೆಲರು ಬಾರನೆಂಬರು ಕೆಲರು
ಅಹುದು ಬಹುದೆಂದು ನೆರಳುವರು ಕೆಲರು ।
ಅರಿಯೆವೆಂಬರು ಕೆಲರು ಅರಿತೆವೆಂಬರು ಕೆಲರು
ತುಟಿಮುಚ್ಚಿ ತಲೆತೂಗುವವರು ಕೆಲರು ॥ ೫ ॥

ಇರುವನೆಂಬರು ಕೆಲವರು ಇಲ್ಲವೆಂಬರು ಕೆಲರು
ಸತ್ತು ಬಹುದಿನವಾಯಿತೆಂಬ ಕೆಲರು ।
ಬೆರಗುಬಡುವರು ಕೆಲರು ಬೆರಳುಮುರಿವರು ಕೆಲರು
ಬಲ್ಲಂತೆ ಬಾಯಿಬಡಿವವರು ಕೆಲರು ॥ ೬ ॥

ಮೇಲೆ ಕೈನೂಡುವರು ಒಳಗೆ ಕೈತೋರುವರು
ಒಳಹೊರಗು ಬೆರಳುಸುತ್ತುವರು ಕೆಲರು ।
ಕಾಲುತುರಿಸುವ ಕೆಲರು ನೆಲವ ಬರೆಯುವ ಕೆಲರು
ಎದೆಗೆ ಕೈಯಿಟ್ಟಿಟ್ಟು ಕುಣಿವ ಕೆಲರು ॥ ೭ ॥

ಗಲ್ಲಹಿಡಿಯುವ ಕೆಲರು ಗಲ್ಲಹಿಂಡುವ ಕೆಲರು
ಬೆಸನಿಸುವ ಕೆಲರು ಬೆದರಿಸುವ ಕೆಲರು ।
ಕಲ್ಲುಗೊಳ್ಳುವ ಕೆಲರು ಹಲ್ಲುಕಿಸಿಯುವ ಕೆಲರು
ಬಲ್ಲವರು ಬಲ್ಲಂತೆ ಬಣಗುತಿಹರು ॥ ೮ ॥

ತಾಳ್ಮೆಕಲಿಸುವ ಕೆಲರು ತಪ್ಪುಹೊರಿಸುವ ಕೆಲರು
ತಿರುತಿರುಗಿ ತಿವಿತಿವಿದು ಬಯ್ವ ಕೆಲರು ।
ತಾಳುತಪ್ಪೀರೀತಿ ಬೇತಾಳದಂತೆನ್ನ
ಗಾಳಿಸುವ ಗೋಳಿಸುವ ಖಲರು ಕೆಲರು ॥ ೯ ॥

ಆಶೆಹಚ್ಚುವ ಕೆಲರು ಆಶೆಹರಿಯುವ ಕೆಲರು
ಆಶೆತೋರಿಸಿ ಅಡ್ಡ ಎಳೆವ ಕೆಲರು ।
ಆಸರಾಗುವ ಕೆಲರು ಆಶೆಬುರುಕರು ಕೆಲರು
ಮುಖ ತಿರುವಿ ಮೂಗುಮುರಿಯುವವರು ಕೆಲರು ॥೧೦॥

ಅಣಕವಾಡುವ ಕೆಲರು ಅಣಗಿಸ್ಯಾಡುವ ಕೆಲರು
ಅನುವುಹೇಳುವ ಕೆಲರು ಅಳುವ ಕೆಲರು ।
ಕೆಣಕಿ ಕೇಳುವ ಕೆಲರು ಗುಣಿಸಿ ಗುಣುಗುವ ಕೆಲರು
ಹಣಿಕೆ ಹಾಕದೆ ಹಾದುಹೋಹ ಕೆಲರು ॥ ೧೧ ॥

ಧೈರ್ಯಹೇಳುವ ಕೆಲರು ದಿಕ್ಕುಗೆಡಿಸುವ ಕೆಲರು
ದಂಗುಬಡಿಸುವ ದಂಭದವರು ಕೆಲರು ।
ಶೌರ್ಯಕಲಿಸುವ ಕೆಲರು ಶಾಂತ್ತಗೊಳಿಸುವ ಕೆಲರು
ಸಾಕುಬಿಡು ಸುಮ್ಮನಿರುವೆಂಬ ಕೆಲರು । ೧೨ ॥

ಸತ್ತವರ ಮನೆಯಲ್ಲಿ ಸಂತೆ ನೆರೆಯುವ ತೆರದೆ
ಬಲ್ಲವರು ಬಲ್ಲಂತೆ ರಂಬಿಸಿದರು ।
ಸತ್ತವನ ಬದುಕಿಸುವ ಸಾಮರ್ಥ್ಯದವರಾರು
ಮಾತುಕತೆಹೇಳಿ ಮನೆಗೇಳುವವರು ॥ ೧೩ ॥

ಯಾರ ಕೇಳಿದರಿಲ್ಲ ಯಾರು ಹೇಳಿದರಿಲ್ಲ
ಯಾರ ಬಳಿಯಲಿ ಅತ್ತುಕರೆದರಿಲ್ಲ ।
ಯಾರ ಕಡೆಗೇನುಂಟು ಮೀರಿಮಿಕ್ಕಿದ ಮಾತು
ಯಾರ‍್ಯಾರ ಬಳಿಗು ನೆಲೆಕಾಣಲಿಲ್ಲ ॥ ೧೪ ॥

ಶಕುನಕ್ಕೆ ಸಿಕ್ಕಿಲ್ಲ ಹೊತ್ತಿಗೆಗೆ ಹೊಳೆದಿಲ್ಲ
ದಿಗ್ದೇಶಯಾತ್ರೆಗಳು ಕಾಣಲಿಲ್ಲ ।
ಅಕಟಕಟ ಗತಿಯೇನು ಮುಂದಿನ್ನು ದಿಕ್ಕೇನು
ಎಲ್ಲಿ ಮೊರೆಯಿಡಲಿನ್ನು ತಿಳಿಯದಲ್ಲಾ ॥ ೧೫ ॥

ಹರಣ ಹಾರುವ ರೋಗಿ ಕಂಡಕಸ ತಿನುವಂತೆ
ಕಂಡಕಂಡವರ ಕಾಲ್ಗೆರಗುವಂತೆ ।
ಮರಣಸಂಕಟಬಟ್ಟು ತಿರುತಿರುಗಿ ಬೇಸತ್ತೆ
ಸಿಕ್ಕವರು ಸಿಕ್ಕದ್ದು ಹೇಳಿದಂತೆ ॥ ೧೬ ॥

ತಿರುಗಿ ಸೊರಗಿದರಿಲ್ಲ ಮರುಗಿ ಮಿಡುಕಿದರಿಲ್ಲ
ಹುಡುಹುಡುಕಿ ಹೈರಣಿಸಿ ದಣಿದರಿಲ್ಲ ।
ಬೆರಗಾದೆ ಬೆಪ್ಪಾದೆ ಹೊಲ್ಲಾದೆ ಹುಚ್ಚಾದೆ
ನಲ್ಲನಿಲ್ಲದೆ ಜೀವ ನಿಲ್ಲದಲ್ಲಾ ॥೧೭॥

ಮಾವು ಬೇವಾಯ್ತೆನಗೆ ಸವಿಯು ಕಹಿಯಾಯ್ತೆನಗೆ
ಕೂಳು ನೀರೆನಗೆ ನಂಜಾಯ್ತು ತಾಯಿ ।
ಜೀವ ಸಾಕಾಯ್ತೆನಗೆ ಸಾವು ಬೇಕಾಯ್ತೆನಗೆ
ಜಗವು ಕಿಚ್ಚಿನ ಕೊಂಡವಾಯ್ತು ತಾಯಿ ॥೧೮॥

ನನ್ನರಸ ನನ್ನೊಡೆಯ ನನ್ನ ಜೀವದ ಜೀವ
ನನ್ನ ಮೊರೆಯಿನ್ನಾರು ಕೇಳಬಹುದೋ ।
ನಿನ್ನ ನಂಬಿದ ಬಳಿ ನಿನ್ನಾಸರಿಲ್ಲದಿರೆ
ಭವದಲ್ಲಿ ನಾನೆಂತು ಬಾಳಬಹುದೋ ॥೧೯॥

ಯಾವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆ ಬರುವದರ ಕಣ್ಣನ್ನೆ ಕಾಣೋ ।
ಅರಿಯದಾ ಹವಣಿಕೆಯು ಜೀವಜೀವನಲೀಲೆ
ದೇವದೇವನ ಗೂಢ ವಿಧಿಯು ಕಾಣೋ ॥೨೦॥

೩ನೇ ಎಸಳು

ನಿಲ್ಲು ನಿಲ್ಲೆಲೆ ನವಿಲೆ ನಿನ್ನ ಕಣ್ಣುಗಳೇಸು
ಕಣ್ಣ ಬಣ್ಣಗಳೇಸು ಎಣಿಸಲಾರೆ ।
ಎಲ್ಲ ರೂಪಿಸಿದವನು ಎಲ್ಲಿ ತಾನಡಗಿದನೆ
ತಾಳಲಾರದು ಜೀವ ಹೇಳಬಾರೇ ॥೧॥

ಪಿಳುಕಿಸದ ಸಿರಿಗಣ್ಣು ಸುತ್ತು ಚಿನ್ನದ ರೇಖೆ
ಬೆಳ್ಳಿಮಿರುಗಿನ ಮೈಯ ಕಾಂತಿ ನಿನಗೆ ।
ತಿಳಿಗಂಗೆ ನಿಮ್ಮವ್ವ ಮೀನಮೂರುತಿ ಹೇಳೊ
ನನ್ನೊಡೆಯನಡಗಿರುವನಾವ ಕಡೆಗೆ ॥೨॥

ಆರದಾರತಿ ಹಿಡಿದು ಹಾರುತಿರುವವಳಾರೆ
ಹೊನ್ನಿ ಏ ಹೊನ್ನಿ ನೀನಾರೆ ಬಾರೇ ।
ಯಾರಿಗಾರತಿ ಒಯ್ವಿ ಹೇಳೆ ನಾನೂ ಬರುವೆ
ನನ್ನರಸನಿದ್ದಾನು ಅಲ್ಲಿಯಾರೇ ॥೩॥

ಸಣ್ಣದನಿಯುವಳಾರೆ ನುಣ್ಣುದನಿಯುವಳಾರೆ
ಹೆಣ್ಣುದನಿಗೈವ ಕೋಗಿಲೆಯೆ ಬಾರೇ ।
ಕಣ್ಣು ತಪ್ಪಿಸಿದವನ ಕುರುಹು ಹೇಳೇ ತಾಯಿ
ಬನದಮ್ಮ ನೀನಾರೆ ಕರುಣ ತೋರೇ ॥೪॥

ಮಾಣಿಕದ ಮೂಗಿನವ ಮೈ ಪಚ್ಚರತ್ನದವ
ಹಂಣು ಶುಕ್ಕುತ ಹಾರುವಂಣ ಬಾರೋ ।
ಜಾಣ ರಂಗಯ್ಯ ತಾ ಕಾಣದಡಗಿವನೆಲ್ಲಿ
ಗಿಣಿರಾಮ ನೀನಾರೆ ಸುದ್ದಿ ಬೀರೋ ||೫||

ಬೆಳದಿಂಗಳಿರುಳಲ್ಲಿ ನಟ್ಟನಡುರಾತ್ರಿಯಲಿ
ಸಪ್ಪಳಿಲ್ಲದ ಗವ್ವುಗಾರಿನಲ್ಲಿ ।
ಕೊಳದ ಬಾಂದಳದಲ್ಲಿ ಟುವ್‌ಗುಡುವ ಟೀಂವಕ್ಕಿ
ನೀನಾರೆ ಬಲ್ಲೆಯಾ ನಲ್ಲನೆಲ್ಲಿ ||೬||

ಬಿರುಗಂಣ ಮಲ್ಲಿಗೆಯೆ ಸರಿಯೆ ನಿನಗೀ ಮೌನ
ಕಂಣಿಲ್ಲದವರು ಕಂಡಿಲ್ಲದಿರಲಿ ।
ಸಿರಿವಂತರಾಮುಗಳು ಸೊರಗಿ ಸಾಯುತಲಿರುವೆ
ಪುರುಷನೆಡೆ ಹೇಳಮ್ಮ ಪುಣ್ಯಬರಲಿ ||೭||

ಬಹುರಸದ ಮೊಲೆಯುಣಿಸಿ ಜೀವ ತಣಿಸುವ ತಾಯಿ
ಸರ್ವರಾಧಾರ ಭೂದೇವಿ ತಾಯೊ ।
ಬಹಳ ಬೇಡುವಳಲ್ಲ ನನ್ನ ರಾಯನ ಸೊಲ್ಲ
ನೀನಾರೆ ಹೇಳಿಕೊಡಬಾರೆ ತಾಯೊ ||೮||

ಇಲ್ಲಿಯೂ ಮುಗಿಯದವ ಅಲ್ಲಿಯೂ ಮುಗಿಯದವ
ಎಲ್ಲಿಯೂ ಮುಗಿಯದಾಕಾಶ ತಂದೇ ।
ಎಲ್ಲಿ ನನ್ನರಸನಿಹನೆಲ್ಲಿ ನನ್ನಾಶ್ರಯವು
ಕೈವಗಿವೆ ಹೇಳೆನ್ನನಂತ ತಂದೇ ||೯||

ಎಂದಿಗೂ ಇದ್ದವನು ಎಂದಿಗೂ ಇರುವವನು
ಜ್ಯೇಷ್ಠನೇ ಶಾಶ್ವತನೆ ಕಾಲನಟನೇ ।
ಹಿಂದು ಮುಂದರಿಯದಲೆ ಕುಣಿಯುವೆನು ನಿನ್ನೊಡನೆ
ನನ್ನ ರಾಯನ ನೆಲೆಯ ತೋರು ಗಡನೇ ||೧೦||

ಹರಳು ಮುತ್ತಿನ ರಾಶಿ ಸೆರೆಸೂರೆ ಮುಗಿಲಲ್ಲಿ
ಅಂತರದೊಳೆತ್ತಿ ತೇಲಿಸುವ ಶಕ್ತೀ ।
ಹೊರಳಿ ನೋಡೆನ್ನ ಸ್ಥಿತಿ ಸೂರ್ಯಚಂದ್ರರ ಕಂಣು
ತೆರೆದು ನೋಡೆನ್ನ ಗತಿ ಹೇಳೆ ಯುಕ್ತಿ ||೧೧||

ತೀರ ಸನಿಯೆಂದರೂ ತೀರ ದೂರದೊಳಿರುವಿ
ಸಾವಿರಬ್ಜದ ಗಾವುದಂಗಳಾಚೆ ।
ತೋರಿ ನಗೆಬೀರಿ ನೀನೇನು ಹೇಳುವಿ ಚಿಕ್ಕೆ
ಏನೆಂದು ಭಾವಿಸಲಿದೇನು ಸೂಚೇ? ||೧೨||

ತೋರಲಾರದ ಗಾಳಿ ತಟ್ಟಿ ತಿಳಿಸುವಿಯೇನು
ಯಾವ ನಾಡಿನ ಸೀಮೆ ತುಳಿದು ಬಂದೆ ? ।
ಮೀರಿತೆನ್ನಯ ತಾಪ ಆರಿಸೆನ್ನಯ ತಂದೆ
ನನ್ನ ರಾಯನ ಸುದ್ದಿ ಸಾರು ಇಂದೇ ||೧೩||

ಹಗಲು ನೆರಳಿನ ನಾರಿ ಮುಗಿಲು ಮುಚ್ಚಿದ ನಾರಿ
ಇರುಳಲ್ಲಿ ಕಗ್ಗ ಕತ್ತಲೆಯ ನಾರಿ ।
ಮಿಗಿಲು ಮಾಟದ ನಾರಿ ತೋರಿ ನಲ್ಲನ ದಾರಿ
ಕಾಳಿ ಕಿಂಕಾಳಿ ನೀ ಮರುಕುದೋರಿ ||೧೪||

ನಿದ್ರಿಸುವ ಕತ್ತಲೆಯೆ ಕನಸಿಡುವ ತಿಳಿಬೆಳಕೆ
ಜಾಗೃತದ ಕಿಚ್ಚೆ ನೀನಾರೆ ಹೇಳು ।
ನಿದ್ರೆಬಾರದೆ ನಿಂತು ಸೋತು ಸಂಣಾಗಿಹೆನು
ರಾಜರಾಜನ ಠಾವ ತೋರಿಸೇಳು ||೧೫||

ಕಂಣು ಮುಚ್ಚಲು ಮುಂಣು ಕಂಣು ತೆರೆಯಲು ಬಂಣ
ಕಂಣಿನಾಚೆಯು ನಿನ್ನ ರೂಪವರಿಯೆ ।
ಹಂಣಾದೆ ಸುಣ್ಣಾದೆ ಸಂಣಾದೆ ಕಳವಳಿಸಿ
ಮರೆತು ಮಲಗಿದ ದೊರೆಯ ತೋರೆ ಸಿರಿಯೇ ||೧೬||

ಕಂಣ ಕಿಂಡಿಯ ಒಳಗೆ ಹಣಿಕೆ ಹಾಕುವ ಜಾಣೆ
ಒಳಗೆ ಜೀವದ ಬೆನ್ನುಬಡಿವ ಜಾಣೇ ।
ಕಣ್ಣುಗಾಣದೆ ನಾನು ಕೊರಗಿ ಸಂಕಟಬಡುವೆ
ಚೆಲುವ ಚೆನ್ನಿಗನೆಡೆಯ ತೋರೆ ರಾಣೀ ||೧೭||

ತರುವೆ ನೀ ಹೇಳೆನಗೆ ಮರವೆ ನೀ ಹೇಳೆನಗೆ
ಕಲ್ಲೆ ಕೊರಡೇ ನೆಲೆಯ ಹೇಳಿರೆನಗೆ ।
ಮೊರೆವೆ "ಕಾಮಾರ್ತಾ ಹಿ ಪ್ರಕೃತಿ ಕೃಪಣಾಶ್ಚೇತ.
ನಾಚೇತನೇಷು"ವೆಂಬಂತೆ ನಿಮಗೆ ||೧೮||

ನನ್ನ ಕಂಣೀರಿನಲಿ ಕಲ್ಲು ಕರಗುತಲಿಹುದು
ನನ್ನೊಡನೆ ದಿಕ್ಕು ದನಿಗುಡುತಲಿಹುದು ।
ನನ್ನ ನಿಟ್ಟುಸುರಿನಲಿ ಬನವು ಬಾಡುತಲಿಹುದು
ಕರುಳೆಂಬ ಕರುಳೇಕೆ ಕರಗದಿಹುದು ||೧೯||

ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆ ಬರುವದರ ಕನ್ನಸನ್ನೆ ಕಾಣೋ ।
ಅರಿಯದಾ ಹವಣಿಕೆಯು ಜೀವಜೀವನ ಲೀಲೆ
ದೇವದೇವನ ಗೂಢ ವಿಧಿಯು ಕಾಣೋ ||೨೦||

೪ನೇ ಎಸಳು

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯು ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ ।
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ ॥೧॥

ಬಂತು ಬಂತೆಲೆ ಬಂತು ಬಂತು ಘನಸಿರಿ ಬಂತು
ಬಂತೆಂದರೂ ಇದ್ದುದಿದ್ದೆಯಿತ್ತು ।
ಬಂತು ಬೆಳಗೆಂಬಂತೆ ಬಂತು ಹೊಳೆ ಬಂದಂತೆ
ಇದ್ದದ್ದು ತುಂಬಿ ತುಳುತುಳುಕುತಿತ್ತು ॥೨॥

ತುಂಬಿ ಬಂದಿತು ಕಾಂತಿ ತುಂಬಿ ಬಂದಿತು ಶಾಂತಿ
ತುಂಬಿ ದ್ಯಾವಾ ಪೃಥಿವಿ ಜೀವ ತುಂಬಿ ।
ತುಂಬಿ ತುಳುಕಿತು ಪೊಳ್ಳು ತುಂಬಿ ತುಳುಕಿತು ಜೊಳ್ಳು
ಜಡದೊಡಲ ಜಗ ಜೀವ ಜ್ಯೋತಿ ತುಂಬಿ ॥೩॥

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯ ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ !
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ ॥೪॥

ದಣಿದು ಮಲಗಿದ ಗಾಳಿ ಮಿಸುಕಲಾರದ ನಸುಕು
ದಣಿವಾರಿ ಜೀವ ತಣಿದೇಳ್ವ ನಸುಕು ।
ಕುಣಿದಪ್ಪಿ ಮರಬಳ್ಳಿ ಬಿಂಕು ಬೀರುವ ನಸುಕು
ಒಳಹೊರಗೆ ಶಾಂತಿ ಸುರಿಸುರಿವ ನಸುಕು ॥೫॥

ನಿದ್ದೆ ಹರಿಯುವ ಹೊತ್ತು ನಸುಕು ಹರಿಯುವ ಹೊತ್ತು
ರಸವಂತಿ ಹೊಳೆಯಾಗಿ ಹರಿವ ಹೊತ್ತು ।
ಮುದ್ದು ಬೀರುವ ಹೊತ್ತು ಬೇಸರಾರುವ ಹೊತ್ತು
ಬಾಸಿಗದ ಸಿಂಗಾರಿ ಬರುವ ಹೊತ್ತು ॥೬॥

ನಸುಬಣ್ಣದಾ ನೆಲವು ಕಿಸುಬಣ್ಣದಾ ದಿಕ್ಕು
ನೊರೆಬಣ್ಣ ಮುಗಿಲಸಿರಿಗೇನು ಅಲ್ಲಿ ! ।
ಹಸುಕು ಕಸುಕಿನ ಹಸುರು ಹಣ್ಣಿನಾ ಹೊಸಹಳದಿ
ನಸುಕಿನಾ ನೀಲಿ ಮುಂಜಾವಿನಲ್ಲಿ ॥೭॥

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯ ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ ।
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ ॥೮॥

ಬಣ್ಣದಾ ಹಣ್ಣುಗಳ ತಿಂದು ತೇಗಲುಬಹುದು
ಚಿತ್ರದಾ ಮಲ್ಲಿಗೆಯ ಮೂಸಬಹುದು ।
ಮುಣ್ಣುಗೊಂಬೆಯ ಮೆಚ್ಚಿ ಮಾತನಾಡಿಸಬಹುದು
ಹೊಗೆಯ ಹೊಳೆ ಈವಾಗ ಈಸಬಹುದು ॥೯॥

ಮನದ ಮಂದಾರವನು ಮೂಸಲಾರೆವು ನಾವು
ಕನಸಿನಾ ಕಲ್ಹಾರ ಮೂಸದಿಹೆವೇ ।
ಮನದ ಮಂಜಿನ ಮಡುವ ಕನಸು ಕಲ್ಲಾಗಿಸದೆ
ಮನಸು ಕನಸಾದಲ್ಲಿ ಮುಸುಕಿನಿರವೇ ? ॥೧೦॥

ಹಗಲುಗನಸಿನ ಸವಿಯು ಇರುಳುಗನಸಿಗೆ ಬಹುದೆ
ಇಸುಳಿನದು ಇಲ್ಲದಾ ಸಂತೆ ಕಾಣೋ ।
ನಗುನಗುತಲೂ ಕನಸು ನೋಡನೋಡುತೆ ಕನಸು
ಬಿಸಿಲಲ್ಲೆ ಬೆಳತಿಗೆಯ ಗುಂತಿ ಕಾಣೋ ॥೧೧॥

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯು ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ ।
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ ॥೧೨॥

ಸುತ್ತು ಮುತ್ತೂ ಸ್ಪರ್ಶ ಒಳಗು ಹೊರಗೂ ಸ್ಪರ್ಶ
ಕೆಳಗು ಮೇಲೂ ಸ್ಪರ್ಶ ಮಧುರಸ್ಪರ್ಶ ।
ಅತ್ತ ಹೊರಳಲು ಸ್ಪರ್ಶ ಇತ್ತ ಹೊರಳಲು ಸ್ಪರ್ಶ
ಎತ್ತೆತ್ತಲೂ ಸ್ಪರ್ಶ ದಿವ್ಯಸ್ಪರ್ಶ ॥೧೩॥

ಹೇಳಿ ತಿಳಿಯದ ಸ್ಪರ್ಶ ಕೇಳಿ ತಿಳಿಯದ ಸ್ಪರ್ಶ
ಉಂಡು ಉಸುರುವ ಸ್ಪರ್ಶ ಕಂಡ ಸ್ಪರ್ಶ ।
ಗೋಳಿಡುವ ಜೀವಕ್ಕೆ ಸಂಜೀವನದ ಸ್ಪರ್ಶ
ರಂಜನೆಯು ಕತೆಯಲ್ಲ ರೋಮಹರ್ಷ ॥೧೪॥

ಸಾಲದಾಯಿತು ಚಿತ್ತ ತುಂಬಿ ರಸ ತುಳುಕಿತ್ತು
ಸಾಕು ಸಾಕಾಯಿತ್ತು ಸ್ಪರ್ಶಪಾನ ।
ತೇಲಿ ನಡೆಯಿತು ಜೀವ ಮೇಲ ಮೇಲಕೆ ಮತ್ತೆ
ಕೇಳಕೇಳುತೆ ದಿವ್ಯಸ್ಪರ್ಶತಾನ ॥೧೫॥

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯ ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ ।
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ ॥೧೬॥

ಜೀವ ದೇಹದೊಳೆಲ್ಲಿ ಮೈಬಗಿದು ನೋಡಿದರೆ ?
ಅಲ್ಲೇನು ಅಸ್ಥಿಮಾಂಸಗಳ ಗೂಡು ।
ದೇವ ಜಗದೊಳಗೆಲ್ಲಿ ಮುಗಿಲೇರಿ ನೋಡಿದರೆ ?
ಅಲ್ಲೇನು ಗ್ರಹತಾರಕೆಗಳ ಬೀಡು ॥ ೧೭ ॥

ಜಗದ ಜೀವವೆ ದೇವ ಜಗವೆ ದೇವನ ದೇಹ
ಜೀವವಿರದಲ್ಲಿ ಜೀವನದ ಸೆಲೆಯೇ ? ।
ಜಗದಾತ್ಮ ಜಗದೀಶ ಆತ್ಮಗಳ ಮೂಲಾತ್ಮ
ಪರಮಾತ್ಮ ನಿನಗೊಂದು ಬೇರೆ ನೆಲೆಯೇ ? ॥ ೧೮ ॥

ನಿಶ್ಶಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ
ನಿಶ್ಶಬ್ದವಿದ್ದರೂ ಮೌನವಲ್ಲ ।
ನಿಸ್ಸೀಮ ನಿಸ್ಸೀಮ ಸೀಮುದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ ॥ ೧೯ ॥

ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆ ಬರುವದರ ಕಣ್ಣಸನ್ನೆ ಕಾಣೋ ।
ಅರಿಯದಾ ಹವಣಿಕೆಯು ಜೀವಜೀವನ ಲೀಲೆ
ದೇವದೇವನ ಗೂಢ ವಿಧಿಯು ಕಾಣೋ ॥ ೨೦ ॥

೫ ನೇ ಎಸಳು

ತಂದೆ ನೀ ಕಣ್ತೆರೆದರಂದಿಗರುಣೋದಯವು
ಮುಂದೆ ಸೂರ್ಯೋದಯದ ಚಿಂತೆಯಿಲ್ಲ ।
ಹಿಂದೆ ಕತ್ತಲೆಯಲ್ಲಿ ಕಂಗೆಟ್ಟು ಕೊರಗಿದೆನು
ಇಂದೊಳಗು ಹೊರಗು ಬೆಳಗಾಯಿತಲ್ಲ ॥ ೧ ॥

ಈಸುದಿನ ಕಂಡಿದ್ದೆ ಬಾಗಿಲಿಲ್ಲದ ಕೋಟೆ
ಇಂದು ಬಾಗಿಲುಕೋಟೆಯಾಯಿತಲ್ಲ ।
ಈಸೀಸಿ ದಣಿದಣಿದು ಕೊನೆಗೆ ದಂಡೆಯ ಕಂಡೆ
ಇಂತು ದೇವನ ರಾಜ್ಯ ಲಭಿಸಿತಲ್ಲ ॥ ೨ ॥

ತಲೆಯ ಮೇಲಿನ ಗುಡ್ಡ ತೆಳಗೆ ತಾನಿಳಿಯಿತ್ತು
ಕಂಗೆಡಿಸುವಾ ಕಾಡು ಕಿತ್ತಿತಯ್ಯಾ ।
ಬಲು ದಿನದ ಕಾಲ್ತೊಡಕು ಕಳಚಿ ಹೋಯಿತ್ತಯ್ಯ
ಹರಸಿದಾ ಹರಕೆ ಕೈಗೂಡಿತಯ್ಯಾ ॥ ೩ ॥

ಉರಿವ ಕಿಚ್ಚಿನ ಕೊಂಡ ಹರಿವ ಹೊಳೆಯಾಯಿತ್ತು
ಕೊರೆವ ಕರಗಸ ಕೊರಳಸರವಾಯಿತು ।
ಪರಿಪರಿಯ ಬಸುರ ಬೇನೆಯು ತಾಪತಡಿಯೆಲ್ಲ
ಹಡೆವ ಹಿರಿಹಿಗ್ಗಿನಲ್ಲಿ ಮರವಾಯಿತು ॥ ೪ ॥

ನಟ್ಟ ಮುಳ್ಳಿಂತೊಮ್ಮೆ ಕಿತ್ತಿ ಹೋಯಿತ್ತಯ್ಯ
ಪಟ್ಟ ಪರಿಪರಿ ಕಷ್ಟ ಫಲಿಸಿತಯ್ಯಾ ।
ಬೆಟ್ಟಕ್ಕೆ ಕಲ್ಲು ಹೊತ್ತಂತಿತ್ತು ಬಾಳುವೆಯು
ಕೊರಡಿನೊಳೆ ಕೊನರು ಫಲಫಲಿಸಿತಯ್ಯಾ ॥ ೫ ॥

ಜೀವದಲ್ಲೆನಿಸಿದ್ದು ಬುದ್ಧಿಗೊಡಮೂಡಿದ್ದೆ
ಭಾವಯೋಗದ ಸಿದ್ಧಿ ಬೇರೆಯಿಹುದೇ ।
ಮಾವುತನ ಗೋಚರಣೆ ಮದಗಜನ ಆಚರಣೆ
ಮೇಳವಿಸದಿರೆ ಗೊತ್ತುಗಾಣಬಹುದೇ ? ॥ ೬ ॥

ಮನವು ಕುಣಿದೇನು ಫಲ ತನುವು ನೆಲ ಹಿಡಿದಿರಲು
ಹೋಗಬೇಕೆಂದಲ್ಲಿ ಹೋಗಬಹುದೇ ? ।
ಅನಿಸಿಕೆಗೆ ಫಲವುಂಟೆ ಎಣಿಕೆಗೊಪ್ಪುವ ತನಕ
ಸಾಗಬೇಕೆಂದಂತೆ ಸಾಗಬಹುದೇ ? ॥ ೭ ॥

ಒಲವು ತಾನೊಂದು ಕಡೆ ಓಟವಿನ್ನೊಂದು ಕಡೆ
ನೋಟವೆಲ್ಲಾ ಬಿಟ್ಟು ಬೇರೆ ಕಡೆಗೇ ।
ಗೆಲವು ತಾನೆಲ್ಲಿಯದೊ ನೆಲೆಯೆ ಹತ್ತದ ಬಳಿಕ
ಪ್ರಾಣಸಂಕಟವೊಂದೆ ಕಟ್ಟಕಡೆಗೆ ॥ ೮ ॥

ಒಂದು ಕಾಲೊಂದು ಕಡೆಗಿನ್ನೊಂದು ಬೇರೆ ಕಡೆ-
ಗಿಂಥ ಪರಿಯಲಿ ಹೆಜ್ಜೆ ಹಾಕಬಹುದೇ ? ।
ಒಂದಾಗಿ ಭಾವಬುದ್ಧಿಗಳು ಮುಂದರಿವನಕ
ಜೀವನಕೆ ಜೀವ ಜೀವಾಳವಿಹುದೇ ॥ ೯ ॥

ಅನಿಸಿದನಿಸಿಕೆಯನ್ನೆ ದಿಟವೆಂದು ನಂಬುವರೆ
ಅನಿಸಿಕೆಯ ತಳಹದಿಯೆ ಗಟ್ಟಿಯಲ್ಲ ।
ಮನದ ಮನನದ ಸೂಕ್ಷ್ಮ ಸಂಸ್ಕಾರವನಿಸಿಕೆಯು
ಮನನಕ್ಕೆ ಸತ್ಯದಾ ಭೆಟ್ಟಿಯಿಲ್ಲ ॥ ೧೦ ॥

ಸತ್ಯವೋ ಮಿಥ್ಯವೋ ಯಾವದೂ ಅರಿಯದಲೆ
ಕೇಳಿಕೆಯ ನೆರೆನಂಬಿ ನೆನೆಯುತಿರಲು ।
ಸತ್ಯವೆಂದನಿಸುವದು ಸತ್ಯವಲ್ಲದ ಮಾತು
ಶ್ರದ್ಧೆಯಾ ಸತ್ಯಕ್ಕೆ ಇಷ್ಟೆ ಹುರುಳು ॥ ೧೧ ॥

ತರ್ಕಿಸಿದ ಕಲ್ಪನೆಯು ದಿಟವೆಂದು ನಂಬುವರೆ
ತರ್ಕಕ್ಕೆ ನಿಷ್ಠೆಯಾ ನೆಲೆಯೆ ಇಲ್ಲ ।
ತರ್ಕಕ್ಕೆ ಹೊಸ ತರ್ಕ ಹೊಡೆದೋಡಿಸುವದಯ್ಯ
ತರ್ಕದಾ ಸತ್ಯಕ್ಕೆ ಮೋರೆಯಿಲ್ಲ ॥ ೧೨ ॥

ಭಾವಬುದ್ಧಿಗಳೆರಡೆ ತಿಳುವಳಿಕಾಧಾರ
ಭಾವಕ್ಕೆ ಬುದ್ಧಿಯೇ ಬಾಹ್ಯನೇತ್ರ ।
ಭಾವಕೊಲಿಯದ ಬುದ್ಧಿ ಬುದ್ಧಿಗೊಲಿಯದ ಭಾವ
ಇಲ್ಲೆ ಕಾಣಯ್ಯ ಸಂದೇಹಸೂತ್ರ ॥ ೯೩ ॥

ಯುಕ್ತಿಗದು ಯುಕ್ತವೆಂದೆನಿಸಿದ್ದೆ ಅನಿಸಿಕೆಯು
ಅನಿಸಿಕೆಗೆ ಯುಕ್ತವಾದದ್ದೆ ಯುಕ್ತಿ ।
ಶಕ್ತಿಯಿಲ್ಲೆರಡರೊಳಗೊಂದು ಬಿಟ್ಟೊಂದಕ್ಕೆ
ನೆರೆತು ಬೆರೆತಲ್ಲೆ ಜೀವನದ ಶಕ್ತಿ ॥ ೯೪ ॥

ಬೀಜದಿಂದಲೆ ಬಳ್ಳಿ ಬಳ್ಳಿಯಿಂದಲೆ ಬೀಜ
ಭಾವಬುದ್ಧಿಗಳ ಪರಿಯಿಂಥದಯ್ಯಾ ।
ಸೋಜಿಗದ ಮಾತೇನು ? " ತಿಳಿಯುವುದು ತೀರುತಲೆ
ತಿಳಿವು ನೈದಾಳುವದು " ಸತ್ಯವಯ್ಯಾ ॥ ೯೫ ॥

ಬಗೆಬಗೆಯ ಘಟನೆಗಳನೊಂದೊಂದೆ ನಿಶ್ಚಯಿಸಿ
ಒಂದೊಂದಕೊಂದೊಂದು ಅರ್ಥಯಿಸುತಾ ।
ಜಗದ ನಿಚ್ಚಣಿಕೆಯನು ತತ್ತರಿಸುತೇರುವೆವು
ಒಂದರಿಂದೆತ್ತಿಯಡಿಯೊಂದಕಿಡುತಾ ॥ ೯೬ ॥

ಅನಿಸಿಕೆಯ ಮರ್ಯಾದೆ ಗುಣಿಸುತ್ತ ಸಾಗುವುದೆ
ಅನುಭವದ ಅಧ್ಯಾತ್ಮಯೋಗವಯ್ಯಾ ।
ಎಣಿಸಿಕೆಯ ಹರಿಗಡಿದು ಅನಿಸಿಕೆಯ ಝುರಿಯೊಡೆದು
ಶಾಂತಿಯೊಡಮೂಡಿದ್ದೆ ಸಿದ್ಧಿಯಯ್ಯಾ ॥ ೯೭ ॥

ಬುದ್ಧಿ ಭಾವದ ಸೀಮೆ ಇಲ್ಲಿಗಾಯಿತ್ತಯ್ಯ
ಮುಂದೆ ದೇವನ ದಿವ್ಯ ರಾಜ್ಯವಯ್ಯಾ ।
ಇದ್ದಷ್ಟು ಹಮ್ಮೆಲ್ಲ ಹಂಣು ಹಂಣಾಗುತಲೆ
ಕೈಮುಗಿದು ಶರಣು ಶರಣೆಂಬುದಯ್ಯಾ ॥ ೯೮ ॥

" ಬುದ್ಧಿಯೇ ಬಾಧಕವು ಬುದ್ಧಿಯೇ ಸಾಧಕವು "
ಬುದ್ಧಿಯೇ ಮಾನವನ ಭಿತ್ತಿಯಯ್ಯಾ ।
ಬುದ್ಧಿಯಿಂದಲೆ ಭಾವ ಬೀಳುತೇಳುತೆ ಸಾಗಿ
ನಿಷ್ಠೆ ನಿಬ್ಬೆರಗಾಗಿ ನಿಲುವದಯ್ಯಾ ॥ ೯೯ ॥

" ಆದಿಯಾಧಾರ ಘನ ಘನ ವೇಧಿಸುವುದೆ ಮನ
ಮನವು ಮಹದಲ್ಲಿ ನಿಂತದ್ದೆ ಭಕ್ತಿ । "
ಓದುವಾದಗಳೆಲ್ಲ ಶಕ್ತಿಯುಕ್ತಿಗಳೆಲ್ಲ
ಮುಗಿದು ನಿಜ ನಿಂತದ್ದೆ ಭಾವಮುಕ್ತಿ ॥ ೧೦೦ ॥

ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆ ಬರುವದರ ಕಣ್ಸನ್ನೆ ಕಾಣೋ ।
ಅರಿಯದಾ ಹವಣಿಕೆಯು ಜೀವಜೀವನ ಲೀಲೆ
ದೇವದೇವನ ಗೂಢ ವಿಧಿಯು ಕಾಣೋ ॥ ೧೦೧ ॥

ಕೊನೆಯ ನುಡಿ

" ಮೊಲೆಯ ಮೇಲಿರ್ದ ಯೋಗಿಗಳುಂಟು ಲೋಕದಲಿ
ಶಿಲೆಯ ಮೇಲಿರುತಿರುವ ಮೋಹಿಯುಂಟು । "
" ಬಳಸಿದಾ ಬ್ರಹ್ಮಚಾರಿತ್ವ ಉಂಡುಪವಾಸ "
ನಮಗಿದೇ ಇಂದು ಬೇಕಾದ ಗಂಟು ॥

ಓಂ

ಶಾನ್ತಿಃ ಶಾನ್ತಿಃ ಶಾನ್ತಿಃ

ಮಿಲನ

ನೀನೆನ್ನ ಕರೆದ ನುಡಿ
ಬಾನುದ್ದ ನೆಗೆದೋಡಿ
ಗಾನಪೂರದಿ ಸಿಡಿದು ಹೋಯ್ತು

ವೇದಾಂತ ಗುಳುಗುಳಿಸಿ
ವಾದಾಂತ ಬೊಬ್ಬುಳಿಸಿ
ಬೋಧವದೊ ಎದೆಗೊಳ್ಳದಿಹುದು

ಓರೆ ನೋಟದಿ ನೀನು
ಬಾರೆಂಬ ಸನ್ನೆಯನು
ತೋರುತಿರೆ ಹೊಸಚಿಗುರ ಸುಗ್ಗಿ

ಗವಸಣಿಸಿ ಮರೆಮಾಡಿ
ಕವಿದು ಹುಸಿಯನು ಕೂಡಿ
ಜವಗೆಡಿಪುದೆನ್ನೆದೆಯ ಮುಸುಕಿ

ಚುಂಬನಕೆ ನೀ ಮೊಗವ
ಮುಂಬರಿಸಿ ರಸದೊಸರ
ಕೊಂಬೆಯೆಂಬಾಸೆ ಯರಳಿದರೆ

ಮೂಡಣಾಗಸದತ್ತ
ಓಡಿಕೊಂಬುದು ಮುತ್ತ
ಬೀಡುಂಟೆ ನಮ್ಮ ಮೇಳನಕೆ ?

ನೀನು ದೂರದೆ ನಿಂತು
ಮೌನದೊಳೆ ಮುನಿಸಾಂತು
ತೋರಿಸುವೆ ಸಂಜೆಗೆಂಪುಗಳ

ಬಳಕು ತಳುಕುತೆ ಬಂದು
ಇಳೆಯ ನೆಳಲಲಿ ನಿಂದು
ಕಳುಹಿಸಿಹೆ ನಿನ್ನಪಡಿ ನೆಳಲ

— ಕಡೆಂಗೋಡ್ಲು ಶಂಕರಭಟ್ಟ

ತರುಣ ಕರ್ನಾಟಕ



ಪ್ರೊ. ನಂದೀಮಠ,
M. A., P. H. D., ಅವರು

ಶ್ರೀ ನಂದೀಮಠರವರು ಇದೇ ತಿಂಗಳ ಇಂಗ್ಲಂಡಿನಲ್ಲಿ ಭಾಷೆಗಳಲ್ಲಿ P. H. D. (London) ಪದವಿಯನ್ನು ದೊರಕಿಸಿಕೊಂಡು ಮಾತೃಭೂಮಿಗೆ ಬಂದಿದ್ದಾರೆ. ಇವರು ಧಾರವಾಡದ ಕರ್ನಾಟಕಕಾಲೇಜಿನಿಂದ M.A. ಆಗಿ ಕೆಲ ದಿವಸ ಕೊಲ್ಹಾಪುರದ ರಾಜಾರಾಮ ಕಾಲೇಜದಲ್ಲಿ ಪ್ರೊಫೆಸರರಿದ್ದರು. ಮುಂದೆ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲಂಡಕ್ಕೆ ಹೋಗಿ ಇದೇ ಮರಳಿದ್ದಾರೆ. ಇವರು ವೀರಶೈವ ತತ್ತ್ವಜ್ಞಾನದ ಅಭ್ಯಾಸವನ್ನು ಚೆನ್ನಾಗಿ ಮಾಡಿದವರಿದ್ದಾರೆ. ಕರ್ನಾಟಕ ಮಾತೆಯು ಈ ಸುಪುತ್ರರಿಗೆ ಸುಸ್ವಾಗತವು.

ಈ ವಿದ್ಯಾರ್ಥಿಗಳು ನೈಜಾಂ ಕರ್ನಾಟಕದ ಯಾದಗಿರಿಯಲ್ಲಿನ ಸಂಸ್ಕೃತದ ಕಾಲೇಜಿನ ವತಿಯಿಂದ ಈ ವರ್ಷ ಕಲಕತ್ತಾ ವಿಶ್ವವಿದ್ಯಾಲಯದ ಸಂಸ್ಕೃತ ಪಂಡಿತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ. ನಡುವೆ ಕುಳಿತವರು ಅವರ ಗುರುಗಳಾದ ಹಾಗೂ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಚಂದ್ರಶೇಖರ ಶಾಸ್ತ್ರಿಗಳವರು.



ಯಾದಗಿರಿಯ ಸಂಸ್ಕೃತ ಕಾಲೇಜದ ಗುರುಸಹಿತ ವಿದ್ಯಾರ್ಥಿವೃಂದವು

‘ಆಕಾಶವಾಣಿ’

(Wireless Telephony)

ಲೇಖಕರು— ಶ್ರೀ. ಎಚ್. ಸಂಜೀವರಾಯರು, ಮಂಗಳೂರು

ಕಳೆದ ೫೦ ವರ್ಷಗಳಲ್ಲಿಯ ದೈನಿಕ ಜೀವನಕ್ರಮದಲ್ಲಿ ಪ್ರಚಾರಕ್ಕೆ ಬಂದಿರುವ ವಿಜ್ಞಾನವೈಚಿತ್ರ್ಯಗಳು ಜನರ ಸೌಕರ್ಯಗಳನ್ನು ಎಷ್ಟರವುಟ್ಟಿಗೆ ಹೆಚ್ಚಿಸಿವೆಯೆಂದರೆ ಹಿಂದಿನ ಕಾಲದ ಸಾರ್ವಭೌಮರೂ ಕೂಡ ಪಡೆದ ದೈನಿಕ ಸುಖಗಳಿಗಿಂತ ಈಗಿನ ಓರ್ವ ಸಾಮಾನ್ಯ ವ್ಯಕ್ತಿಯ ಸುಖಜೀವನವೇ ಮಿಗಿಲು. ಈ ನವಶೋಧನಗಳಲ್ಲಿ ಆಕಾಶವಾಣಿಯೂ ಒಂದು. ಅಮೇರಿಕಾ, ಅಂಗ್ಲಾಳ, (ಇಂಗ್ಲಂಡ) ಮತ್ತಿನ್ನಿತರ ನಾಗರೀಕ ದೇಶಗಳಲ್ಲಿ ಕೋಟಿಗಟ್ಲೆ ಜನರು ತಮ್ಮ ಗೃಹಗಳಲ್ಲೇ ಕುಳಿತು ಆಕಾಶವಾಣಿಯನ್ನು ಕೇಳಿಸುವ ಯಂತ್ರಗಳ (Wireless Receiving set) ಸಹಾಯದಿಂದ ದಿಗ್ದೇಶಗಳ ಉತ್ಕೃಷ್ಟ ಗಾಯಕರ ಇಂಪಾದ ಹಾಡುಗಳನ್ನೂ ವಿಶ್ವವಿದ್ಯಾಲಯ ಪಂಡಿತರ ಅರ್ಥಗರ್ಭಿತ ಭಾಷಣಗಳನ್ನೂ ನಿತ್ಯ ಕೇಳುತ್ತಿರುವರು. ಹಗಲೆಲ್ಲಾ ಬಳಲಿ ಬಂದವರ ದಣುವನ್ನಾರಿಸಲಿಕ್ಕೂ ಅವರ ಮಾನಸಿಕ ವಿಕಾಸವನ್ನಭಿವೃದ್ಧಿಸಲಿಕ್ಕೂ ಈ ಗಾಯನಗಳು ಎಷ್ಟೊಂದು ಸಹಕರಿಸುತ್ತಲಿವೆಯೆಂದು ನಾವೇ ಊಹಿಸಬಹುದು. ಸದ್ಯದಲ್ಲಿಯೇ ಹೀಗೆ ಬರೇ ಕಿವಿಗೊಡುವದಲ್ಲದೇ ಅಲ್ಲಲ್ಲಿ ಜರಗುವ ದೃಶ್ಯಗಳೂ ಕೂಡಾ ಕಣ್ಣಿಗೆ ಗೋಚರವಾಗುವ ದಿನಗಳೂ ಬರಲಿವೆ.

ನಮ್ಮ ದೇಶದ ವಿಚಾರ:—ನಮ್ಮ ಹಿಂದೂ ದೇಶದಲ್ಲಿ ಮಾತ್ರ ನಾವು ಈ ವಿಷಯದಲ್ಲಿ ಹಿಂದುಳಿದಿಪ್ಪೇವೆ. ಬೊಂಬಾಯಿ, ಕರಾಚಿ, ಕಲಕತ್ತಾ, ಮದರಾಸು ಮೊದಲಾದ ದೊಡ್ಡ ನಗರಗಳಲ್ಲಿ ಪರದೇಶಗಳೊಡನೆಯೂ ಸಮುದ್ರದಲ್ಲಿ ಚಲಿಸುತ್ತಿರುವ ಹಡಗಗಳೊಡನೆಯೂ ಸಮಾಚಾರ ವ್ಯವಹಾರವನ್ನು ಬೆಳೆಸುವರೇ ಅಲೆಯಂಚೆಯ ಕಾರ್ಯಾಲಯಗಳನ್ನು (Wireless Telegraph Stations) ಸರಕಾರದವರು ಸ್ಥಾಪಿಸಿರುವರು. ಇವಲ್ಲದೇ ದಿನಂಪ್ರತಿ ಮಧುರವಾದ ದೇಶೀಯ ಮತ್ತು ಇಂಗ್ಲಿಷ ಹಾಡುಗಳನ್ನು ವಾತಾವರಣದಲ್ಲಿ ಪ್ರಸರಿಸಲಿಕ್ಕೆ ಕಲ್ಕತ್ತೆ ಮತ್ತು ಬೊಂಬಾಯಿಯಲ್ಲಿ “ Indian Broadcasting Company ” ಎಂಬ ಸಂಘದವರು ತಮ್ಮ ಕಾರ್ಯಾಲಯಗಳನ್ನು ಕೆಲವು ವರ್ಷಗಳ ಹಿಂದೆ ಸ್ಥಾಪಿಸಿದರು. ಆದರೆ ದೇಶದಲ್ಲಿ ಬರೇ ೮೦೦೦ ಮಂದಿ ಈ ಕೇಳಿಸುವ ಯಂತ್ರಗಳನ್ನು ಪಡೆದುದರಿಂದ ಜನತೆಯ ಸಹಾನುಭೂತಿಯ ಕೊರತೆಯಿಂದ ಸಂಘದವರಿಗೆ ಬಹಳ ನಷ್ಟವಾದುದರಿಂದ ಕಳೆದವರ್ಷದಿಂದ ಸರಕಾರದವರೇ ಈ ಎರಡೂ ಕಾರ್ಯಾಲಯಗಳನ್ನು ನಡೆಸಿಕೊಂಡು ಬಂದಿರುವರು. ಇನ್ನೂ ಆಕಾಶವಾಣಿಯು ನಮ್ಮಲ್ಲಿ ಪೂರ್ಣ ಪ್ರಚಾರದಲ್ಲಿ ಬರಲಿಲ್ಲ. ಅದರ ತತ್ವವನ್ನು ಅರಿತವರೂ ವಿರಳ.

ಅಲೆಗಳು:—ಶಬ್ದವು ಒಂದೆಡೆಯಿಂದ ಇನ್ನೊಂದೆಡೆಗೆ ಅಲೆಗಳ ರೂಪದಲ್ಲಿ ಹೇಗೆ ಚಲಿಸುತ್ತದೊ ಅದೇ ತರದಲ್ಲಿ ಆಕಾಶವಾಣಿಯೂ ತರಂಗಗಳಲ್ಲಿ ಚಲಿಸಿ ಸರಿಗೆ (Wire ತಂತಿ)ಯ ಸಂಬಂಧವಿಲ್ಲದೆ ಬೇಕಾದಕಡೆ ಚಲಿಸಬಲ್ಲದು. ಪ್ರಶಾಂತವಾದ ಸರೋವರದ ನಡುವೆ ಕಲ್ಲುಗಳನ್ನು ಒಂದರಮೇಲೊಂದೆಸೆದರೆ ನೀರಿನಲ್ಲಿ ತೆರೆಗಳು ಹುಟ್ಟಿ ದಡದ ಕಡೆಗೆ ವರ್ತುಲಾಕಾರದಲ್ಲಿ ಹಬ್ಬಿ ಚಲಿಸುತ್ತವೆ. ಇದೇ ತರದಲ್ಲಿ ಒಂದು ಗಂಟೆಯನ್ನು ಬಾರಿಸಿದಾಗ ಅದರ ಕಂಚಿನ ಬದಿಗಳು ಹೊಡೆತದಿಂದ ಕಂಪಿಸಿ, ಗಾಳಿಯಲ್ಲೂ ಇದೇ ತರದ ತರಂಗಗಳನ್ನು ಹುಟ್ಟಿಸುತ್ತವೆ. ಗಾಳಿಯು ಅಗೋಚರವಾದುದರಿಂದ ಈ ಅಲೆಗಳು ನಮಗೆ ಕಾಣಿಸುವುದಿಲ್ಲ. ಅಲೆಗಳು ನಿಮಿಷಕ್ಕೆ ೧೧೨೦ ಗಜಗಳ ವೇಗದಿಂದ ಎಲ್ಲಾ ದಿಕ್ಕುಗಳಿಗೂ ಗೋಲಾಕೃತಿಯಲ್ಲಿ ಹಬ್ಬುತ್ತವೆ. ಗಂಟೆಯ ಬದಿಗಳು ನಿಮಿಷಕ್ಕೆ ೪೦೦ ಬಾರಿ ಕಂಪಿಸಿ ೪೦೦ ಅಲೆಗಳನ್ನು ಹುಟ್ಟಿಸುವುದಾದರೆ ಎರಡೆರಡು ಅಲೆಗಳ ನಡುವೆ $\frac{೧೧೨೦}{೪೦೦}$ ಗಜಗಳ ಉದ್ದವಿರಬೇಕು. ಈ ಉದ್ದವನ್ನು ತರಂಗಾಂತರವೆಂದು (Wave length) ಕರೆಯುವರು. ಗಂಟೆಯು ಹೆಚ್ಚು ಬಾರಿ ಕಂಪಿಸಿದರೆ ಅಲೆಗಳ ತರಂಗಾಂತರವೂ ಕಡಿಮೆಯಾಗಿ ಸ್ವರದ ತಾಳವು (Pitch) ಏರುತ್ತದೆ. ಆದುದರಿಂದ ಒಂದೊಂದು ತರಂಗಾಂತರದ ಅಲೆಗಳ ಶಬ್ದಕ್ಕೆ ಒಂದೊಂದು ತಾಳವಿರುವುದರಿಂದ ಬೇರೆ ಬೇರೆ ತರಂಗಾಂತರಗಳ ಧ್ವನಿಗಳ ಗುರುತನ್ನು ಮಾಡಿಕೊಳ್ಳಬಹುದು.

ಕೇಂದ್ರೋದ್ಭವ ತರಂಗ:— Radio Waves. ಈ ಭೂಗೋಳದ ಸುತ್ತಲಿರುವ ಅನಂತವಾದ ಆಕಾಶದಲ್ಲಿ ಪದಾರ್ಥಶೂನ್ಯ (Ether) ವೆಂಬುದೊಂದು ವ್ಯಾಪಿಸಿಕೊಂಡಿದೆ. ವಿದ್ಯುಚ್ಛಕ್ತಿಯಿಂದ ಪದಾರ್ಥಶೂನ್ಯದಲ್ಲಿ ಒಂದು ಬಗೆಯ ಕೇಂದ್ರೋದ್ಭವ ತರಂಗಗಳನ್ನು ಹುಟ್ಟಿಸಿ ಇವುಗಳ ಮೂಲಕ ಧ್ವನಿಯನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಸಾಗಿಸಲಿಕ್ಕೆ ಸಾಧ್ಯವಿದೆ. ಒಂದು ವಿದ್ಯುದ್ಘಟಮಾಲೆಯ ವರ್ತುಲದಲ್ಲಿ (In the circuit of an electric battery) ನಡುವೆ ಒಂದು ಎಡೆಯಿದ್ದರೆ (gap) ವಿದ್ಯುಚ್ಛಕ್ತಿಯು ಪ್ರವಹಿಸುತ್ತಿರುವಾಗ ಎಡೆಯ ಮೇಲಿಂದ ವಿದ್ಯುತ್ಕಣಗಳು (Electric spark) ಹಾರುತ್ತವೆ. ಪ್ರವಾಹದ ದಿಕ್ಕನ್ನು ಪ್ರತಿಕ್ಷಣ ಬದಲಾಯಿಸಿದರೆ ಕಣಗಳು ಸರ್ತಿಯ ಮೇಲೆ ಮುಂದೊಮ್ಮೆ ಹಿಂದೊಮ್ಮೆಯಾಗಿ ಹಾರುತ್ತವೆ. ಕಣಗಳ ಈ ಕಂಪನದಿಂದ ಪದಾರ್ಥಶೂನ್ಯದಲ್ಲಿ ಕೇಂದ್ರೋದ್ಭವ ತರಂಗಗಳುಂಟಾಗಿ ಎಲ್ಲಾ ದಿಕ್ಕುಗಳಿಗೂ ಹಬ್ಬುತ್ತವೆ. ಹಬ್ಬುವ ವೇಗವು ಸೆಕುಂಡಿಗೆ ೧೮೬೦೦೦ ಮೈಲಿಗಳು ಅಂದರೆ ಭೂಸುತ್ತಳತೆಯ ಏಳರಷ್ಟು. ಕಣಗಳು ಸೆಕುಂಡಿಗೆ ೩೭೨೦೦೦ ಬಾರಿ ಕಂಪಿಸಿದರೆ ಅಲೆಗಳ ತರಂಗಾಂತರವು $\frac{372000}{186000} = \frac{1}{2}$ ಮೈಲು ಯಾ ಮೆಟ್ರಿಕ್ ಕ್ರಮದಲ್ಲಿ 800 ಮೀಟರುಗಳಾಗುತ್ತವೆ. ಹೀಗೆ ಕಣಗಳ ಕಂಪನವೇಗದಿಂದ ಅಲೆಗಳ ತರಂಗಾಂತರವನ್ನು ಇಷ್ಟವಿದ್ದಂತೆ ಬದಲಾಯಿಸಬಹುದು. ಒಂದೊಂದು ಅಲೆಯಂಚೆ ಅಥವಾ ಆಕಾಶವಾಣಿ ಇವುಗಳ ಕಾರ್ಯಾಲಯಗಳು ಒಂದೊಂದು ತರಂಗಾಂತರವನ್ನಿಟ್ಟುಕೊಂಡಿರುವದರಿಂದ ಕೇಳಿಸುವ ಅಲೆಗಳು ಯಾವ ಕಾರ್ಯಾಲಯದವುಗಳೆಂದು ತಿಳಕೊಳ್ಳಬಹುದು. ಆಯಾ ತರಂಗಾಂತರಗಳ ಅಲೆಗಳನ್ನೇ ಆಕರ್ಷಿಸಿ ಬೇಕಾದ ಕಾರ್ಯಾಲಯದ ಕಾರ್ಯಕ್ರಮಕ್ಕೆ ಕಿವಿಗೊಡಬಹುದು.

ಸೂತ್ರ— ಈ ಚಿಕ್ಕ ಲೇಖದಲ್ಲಿ ಆಕಾಶವಾಣಿಯಂತ್ರದಲ್ಲಿ ಅಡಗಿರುವ ಸಂಪೂರ್ಣ ಸೂತ್ರಗಳನ್ನು ವಿವರಿಸಲಿಕ್ಕೆ ಸಾಧ್ಯವಿಲ್ಲ. ಆದರೂ ಸ್ವಲ್ಪಮಟ್ಟಿಗೆ ಅವುಗಳನ್ನು ತಿಳಕೊಳ್ಳುವುದು ಅಗತ್ಯವಿದೆ. ಬೊಂಬಾಯಿಯಲ್ಲಿ ಹಾಡಿದ ಸಂಗೀತವನ್ನು ಧಾರವಾಡದಲ್ಲಿ ಕೇಳಿಸಬೇಕೆಂದಿದ್ದರೆ ಆ ಸ್ವರದಿಂದ ಹುಟ್ಟುವ ಶಬ್ದತೆರೆಗಳಿಂದ ಕೇಂದ್ರೋದ್ಭವತರಂಗಗಳನ್ನುಂಟುಮಾಡಲಿಕ್ಕೆ ಮಾಯ್‌ಕ್ರೊಫೋನ್ (Microphone) ಯಂತ್ರ ಮತ್ತು ಅದಕ್ಕೆ ಸಂಬಂಧಪಟ್ಟ ವಿದ್ಯುದ್ಘಟಮಾಲೆ ಇತ್ಯಾದಿಗಳೂ, ಈ ತರಂಗಗಳನ್ನು ಪದಾರ್ಥಶೂನ್ಯದಲ್ಲಿ ಬೀರಲಿಕ್ಕೆ ಎತ್ತರವಾದ ಎರಡು ಖಂಬಗಳ ನಡುವೆ ಸಾಧಾರಣ ೧೦೦ ಗಜಗಳ ಉದ್ದಕ್ಕೆ ಚಾಚಿಕೊಂಡಿರುವ ಏರಿಯಲ್ (Aerial) ಸರಿಗೆಯೂ ಬೇಕಾಗುತ್ತವೆ. ಈ ಎಲ್ಲ ಉಪಕರಣಗಳನ್ನು ಕೂಡಿಸಿಟ್ಟ ಪ್ರಸರಣಾ ಕಾರ್ಯಾಲಯಗಳಲ್ಲೇ (Broadcasting stations) ಗಾಯನವು ನಡೆಯಬೇಕು. ಹಾಡಿದುದನ್ನು ಕೇಳಿಸಬೇಕಾದುದಲ್ಲಿ ಇಡೀ ವಾತಾವರಣದಲ್ಲಿ ಹಬ್ಬಿದ ಕೇಂದ್ರೋದ್ಭವ ತರಂಗಗಳಲ್ಲಿ ಕೆಲವನ್ನು ಆಕರ್ಷಿಸಲಿಕ್ಕೆ ಚಿಕ್ಕದೊಂದು ಏರಿಯಲ್ ಸರಿಗೆ, ಈ ತರಂಗಗಳಿಂದ ಸರಿಗೆಯಲ್ಲಿ ಹುಟ್ಟುವ ವಿದ್ಯುತ್ಪ್ರವಾಹವು ಕಂಪಿಸದೆ ಒಂದೇ ದಿಕ್ಕಿನಲ್ಲಿ ಪ್ರವಹಿಸಲಿಕ್ಕೆ ಎಡೆಗೊಡುವ ಒಂದು ಬಗೆಯ ಸ್ಫಟಿಕ ಯಾ ನಿರ್ವಾತ ನಳಿ (Thermionic valve or Vaccumi tubes) ಮತ್ತು ಈ ವಿದ್ಯುತ್ಪ್ರವಾಹದಿಂದ ಪುನಃ ಶಬ್ದ ತೆರೆಗಳನ್ನು ಹುಟ್ಟಿಸಲಿಕ್ಕೆ Phones ಇವುಗಳ ಅಗತ್ಯವಿರುತ್ತದೆ. ಏರಿಯಲ್ ಸರಿಗೆಯನ್ನು ಬಿಟ್ಟು ಉಳಿದುವನ್ನು ಸೇರಿಸಿ ನಿರ್ಮಿಸಿದ ಚಿಕ್ಕ ಪೆಟ್ಟಿಗೆಗಳಿಗೆ ಕೇಳಿಸುವ ಯಂತ್ರ (Receiving set) ವೆನ್ನುವರು. ಇವು ನಮ್ಮ ದೇಶದಲ್ಲೂ ಬೆಲೆಗೆ ಸಿಗುತ್ತವೆ. ಸರಕಾರಕ್ಕೆ ರೂ. ೧೦ ವರ್ಷಾವಧಿ ತೆರಿಗೆಯಾಗಿ ತೆತ್ತು ಇಂಥದೊಂದು ಕೇಳಿಸುವ ಯಂತ್ರವನ್ನು ನಮ್ಮಲ್ಲಿರಿಸಿಕೊಂಡರೆ ವಾತಾವರಣದಲ್ಲಿ ಅನೇಕ ಕಾರ್ಯಾಲಯಗಳಿಂದ ದಿನಂಪ್ರತಿ ಕಳುಹಿಸಲ್ಪಡುವ ಧ್ವನಿಗಳನ್ನಾಲಿಸಬಹುದು. ಯೋಗ್ಯಸಾಧನಗಳಿಂದ ನಮಗೆ ಇಷ್ಟವಿರುವ ತರಂಗಾಂತರಗಳ ಅಲೆಗಳಿಗೇನೇ ನಮ್ಮ ಕೇಳಿಸುವ ಯಂತ್ರಗಳಲ್ಲಿ ಪ್ರವೇಶಿಸಬಿಟ್ಟು ಬೇಕಾದ ಕಾರ್ಯಾಲಯಗಳಿಗೇನೇ ಕಿವಿಗೊಡಬಹುದು.

ಎಲ್ಲಾ ನೌಕಾಕಾರ್ಯಾಲಯಗಳ ತರಂಗಾತರವು ೬೦೦ ಮೀಟರ್. ಕಳುಹಿಸುವ ಕಾರ್ಯಾಲಯದಲ್ಲಿ ಮೊತ್ತಕ್ಕೆ ಅತಿ ಕಂಪನದ (High frequency alternating current) ವಿದ್ಯುತ್ಪ್ರವಾಹವನ್ನು ದೊರಕಿಸಿಕೊಳ್ಳಲಿಕ್ಕೆ ಬಲವಾದುದೊಂದು ವಿದ್ಯುದ್ಘಟಮಾಲೆಯು ಬೇಕಾಗುತ್ತದೆ. ಈ ಮಾಲೆಯ ಪ್ರವಾಹವು ಒಂದೇ ದಿಕ್ಕಿನದ್ದಾದುದರಿಂದ ಅದನ್ನು ಕಂಪನಪ್ರವಾಹವನ್ನಾಗಿ (Alternating current) ಮಾಡಲು Thermionic valve ಎಂಬ ನಿರ್ವಾತ ನಳಿಗೆಯನ್ನು ಉಪಯೋಗಿಸುತ್ತಾರೆ. ಈ ನಳಿಗೆಯು ಸಾಮಾ

ನ್ಯ ವಿದ್ಯುದ್ದೀಪಗಳಂತೆ ತೋರುತ್ತದೆ. ಅದರೊಳಗೆ ಟಂಗಸ್ಟನ್ (Tungstan) ಲೋಹದೊಂದು ಸರಿಗೆಯೂ ಅದರ ಸುತ್ತಲೂ ಸುರುಳಿಯಾಗಿ ಸುತ್ತಿದ ಗ್ರಿಡ್ (Grid) ಎಂಬ ಸರಿಗೆಯೂ ಮತ್ತು ಇವೆರಡರ ಸುತ್ತಲು ನಿಕ್ಕಲ್ ಲೋಹದ ತಗಡಿನದೊಂದು ಸಿಲಿಂಡರೂ ಇವೆ. ಈ ನಳಿಗೆಗೆ ವಿದ್ಯುತ್ಪ್ರವಾಹವನ್ನು ಕಂಪಿಸುವ ಗುಣವಿದೆ. ಆದುದರಿಂದ ವಿದ್ಯುದ್ಘಟದ ವರ್ತುಲದಲ್ಲಿ ಈ ತರದ ನಳಿಗೆಯನ್ನೂ ಒಂದು ಸೂಕ್ಷ್ಮ ವಾಣೀಯಂತ್ರವನ್ನೂ ಸೇರಿಸತಕ್ಕದ್ದು. (Microphone) ಸೂಕ್ಷ್ಮವಾಣೀ ಯಂತ್ರದಲ್ಲಿ ಕೊಂಬಿನಾಕೃತಿಯ ನಳಿಗೆಯ ಬುಡದಲ್ಲಿ ಒಂದು ತೆಳುವಾದ ಉಕ್ಕಿನ ತಗಡು ಜೋಡಿಸಿದೆ. ಕೊಂಬಿನಲ್ಲಿ ಮಾತನಾಡಿದರೆ ಶಬ್ದ ತೆರೆಗಳು ತಗಡಿನ ಮೇಲೆ ಬಡಿದು ತಗಡಿನಲ್ಲಿ ಅದೇ ಬಗೆಯ ಕಂಪನವಾಗುವದು. ಈ ತಗಡಿಗೆ ಅದರ ಹಿಂಬದಿಯಲ್ಲಿ ಮೆಲ್ಲನೆ ಒತ್ತುವ ಒಂದು ತಟ್ಟೆಯಿದೆ. ತಟ್ಟೆಯಲ್ಲಿ ತುಂಬಾ ಅಂಗಾರದ ಹುಡಿಯು ಇರುತ್ತದೆ. ತಟ್ಟೆಯ ಬುಡವನ್ನೂ ಉಕ್ಕಿನ ತಗಡನ್ನೂ ವಿದ್ಯುತ್ ವರ್ತುಲದಲ್ಲಿ ಸೇರಿಸಿರುವುದರಿಂದ ತಗಡು ಅಲುಗಾಡಿ ಒಮ್ಮೆ ಬಲವಾಗಿ ಮತ್ತೊಮ್ಮೆ ಮೆಲ್ಲನೆ ತಟ್ಟೆಯನ್ನು ಒತ್ತುವುದರಿಂದ ವಿದ್ಯುತ್ಶಕ್ತಿಯೂ ಅದೇ ಪ್ರಕಾರವಾಗಿ ಬಲವಾಗಿಯೂ ಮೆಲ್ಲನೆಯೂ ಪ್ರವಹಿಸುತ್ತದೆ. ಈ ಪ್ರವಾಹವು ನಿರ್ವಾತ ನಳಿಗೆಯೊಳಗಿಂದ ಹಾದು ಹೋಗುವಾಗ ಅದರಿಂದ ಕೇಂದ್ರೋದ್ಭವ ತರಂಗಗಳಾಗುತ್ತವೆ. ಕೂಡಲೇ ಈ ತರಂಗಗಳನ್ನು ಎತ್ತರದಲ್ಲಿರುವ ಏರಿಯಲ್ (Aerial) ಸರಿಗೆಯಲ್ಲಿ ಹರಿಯಬಿಟ್ಟರೆ ಅಲ್ಲಿಂದ ಅವು ಪದಾರ್ಥಶೂನ್ಯದಲ್ಲಿ ಹಬ್ಬುತ್ತವೆ.

ಏರಿಯಲ್ ಸರಿಗೆ— ಏರಿಯಲ್ ಸರಿಗೆಯೆಂದರೆ ಬಹಳ ಎತ್ತರವಾದ ಎರಡು ಕಂಬಗಳ ನಡುವೆ ಚಾಚಿಕೊಂಡಿರುವ ಸರಿಗೆ. ಕೇಂದ್ರೋದ್ಭವ ತರಂಗಗಳು ತಮ್ಮ ಪಥದಲ್ಲಿರುವ ಗುಡ್ಡ ಕಟ್ಟಡ ಮೊದಲಾದವುಗಳನ್ನು, ಪ್ರಕಾಶವು ಗಾಜನ್ನು ದಾಟಿಹೋಗುವ ರೀತಿಯಲ್ಲಿ, ಹಾದು ಹೋಗಬಲ್ಲುದಾದರೂ ಹೋಗುವಾಗ ಅವುಗಳ ಬಲವು ಕಳೆಗುಂದುತ್ತದೆ. ಆದುದರಿಂದ ಏರಿಯಲ್ ಸರಿಗೆಯನ್ನು ಎತ್ತರಿಸಿದಷ್ಟಕ್ಕೆ ಉತ್ತಮ. ಬಹಳ ದೂರದಲ್ಲಿ ಕೇಳಿಸಬೇಕಾದರೆ ವಿದ್ಯುತ್ಪ್ರವಾಹವು ಬಹಳ ಬಲವಾಗಿರಬೇಕು. ಏರಿಯಲ್ ಸರಿಗೆಯೂ ಉನ್ನತವಾಗಿರಬೇಕು. ಇದಲ್ಲದೆ ಕಳುಹಿಸುವ ಯಂತ್ರಗಳಲ್ಲಿ ಅಲೆಗಳ ತರಂಗಾಂತರವನ್ನು ಬದಲಾಯಿಸುವ ಉಪಕರಣಗಳು ಇರುತ್ತವೆ.

ಕೇಳಿಸುವ ಯಂತ್ರ— ವಾತಾವರಣದಲ್ಲಿ ಚಲಿಸುವ ತರಂಗಗಳಲ್ಲಿ ಕೆಲವನ್ನು ಆಕರ್ಷಿಸಿ ಕೇಳಿಸಲಿಕ್ಕೆ ಬೇಕಾದ ಏರಿಯಲ್ ಸರಿಗೆಯು ಬಹಳ ಉನ್ನತವಿರಬೇಕೆಂತಿಲ್ಲ. ಮನೆಯ ಮಾಡಿನ ಮೇಲೆ ಎರಡು ಚಿಕ್ಕ ಕೋಲುಗಳನ್ನು ಕಟ್ಟಿ, ಅವುಗಳ ನಡುವೆ ಉದ್ದವಾದೊಂದು ಸರಿಗೆಯನ್ನು ಚಾಚಿ, ಆಕರ್ಷಿಸಲ್ಪಟ್ಟ ತರಂಗಶಕ್ತಿಯನ್ನು ಒಳಗಿರುವ ಯಂತ್ರಕ್ಕೆ ಕಳುಹಿಸಲಿಕ್ಕೆ ಸರಿಗೆಯಿಂದ ಕೇಳಿಸುವ ಯಂತ್ರವನ್ನೂ ಏರಿಯಲ್ ಸರಿಗೆಯನ್ನೂ ಜೋಡಿಸಬೇಕು. ಈ ಯಂತ್ರದಲ್ಲಿ ಶಕ್ತಿಯನ್ನು ಒಂದೇ ದಿಕ್ಕಿನಲ್ಲಿ ಪ್ರವಹಿಸಬಿಡುವ ನಿರ್ವಾತ ನಳಿಗೆಗಳೂ, ಶಕ್ತಿಯಿಂದ ಶಬ್ದ ತೆರೆಗಳನ್ನು ಹುಟ್ಟಿಸುವ ಸೂಕ್ಷ್ಮವಾಣೀ ಯಂತ್ರವೂ ಇರುತ್ತವೆ. ಒಂದು ವೆರಿಯೋ ಮೀಟರ ಎಂಬ (Variometer) ಉಪಕರಣವು ಬೇಕಾದ ತರಂಗಗಳ ಅಲೆಗಳನ್ನೇ ಒಳಗೆ ಬಿಡುತ್ತದೆ. ಸಾಧಾರಣವಾಗಿ ಸೂಕ್ಷ್ಮವಾಣೀ ಯಂತ್ರಗಳು ಎರಡಿರುತ್ತವೆ. ಇವುಗಳನ್ನು ಜೋಡಿಸಿ ಹಿಡಿಯಲಿಕ್ಕೆ ಅರ್ಧ ವರ್ತುಲಾಕಾರದ್ದೊಂದು ತಗಡಿನ ಪಟ್ಟಿಯಿರುವುದರಿಂದ ಅದನ್ನು ತಲೆಯಮೇಲೆ ಸಿಕ್ಕಿಸುವಾಗ ಯಂತ್ರಗಳು ಕಿವಿಗಳ ಮೇಲೆ ಹಿಡಿಯುವುದರಿಂದ ಅವುಗಳಲ್ಲುಂಟಾಗುವ ಧ್ವನಿಯು ಸ್ಪಷ್ಟವಾಗಿ ಕೇಳಿಸುತ್ತದೆ.

ಕೆಲವರು ಧ್ವನಿಯನ್ನು ಗಟ್ಟಿಯಾಗಿ ಕೇಳಲಿಚ್ಛಿಸುವದರಿಂದ ಈ ಯಂತ್ರಗಳ ಬದಲಾಗಿ ಕೇಂದ್ರೋದ್ಭವ ತರಂಗಗಳನ್ನು ಗಟ್ಟಿಮಾತನಾಡುವ ಯಂತ್ರಕ್ಕೆ (Loud speaker) ಕಳುಹಿಸುವರು. ಈ ಯಂತ್ರದಲ್ಲಿ ನಿರ್ವಾತ ನಳಿಗೆಗಳ ಸಹಾಯದಿಂದ ಶಕ್ತಿಯನ್ನು ಪುಷ್ಟೀಕರಿಸಿ ಧ್ವನಿಯನ್ನು ಬಲಗೊಳಿಸುವ ಏರ್ಪಾಡಿರುತ್ತದೆ. ಧ್ವನಿ ಪೆಟ್ಟಿಗೆಗೆ (Gramaphone) ಇರುವಂತೆ ಇದಕ್ಕೂ ಒಂದು ಕೊಂಬು ಇರುತ್ತದೆ. ಈಚೆಗೆ ಕೊಂಬಿಲ್ಲದ ಯಂತ್ರಗಳೂ ತಯಾರಾಗುತ್ತವೆ.

ಚರಿತ್ರೆ: - ಆಕಾಶವಾಣಿಯ ಪರಿಚಯವು ಲೋಕಕ್ಕೆ ಆದದ್ದು ೧೮೮೭ರಲ್ಲಿ ಹರ್ಟ್ಸ (Hertz) ಎಂಬ ಜರ್ಮನ ಶಾಸ್ತ್ರಜ್ಞನೊಬ್ಬನು ಮೇಲೆ ವಿವರಿಸಿದ ರೀತಿಯಲ್ಲಿ ವಿದ್ಯುತ್ ಘಟದಿಂದ ವಿದ್ಯುತ್ ಕಣಗಳನ್ನು (electric sparks) ಹಾರಿಸುತ್ತಿರುವಾಗ ಪಕ್ಕದಲ್ಲಿದ್ದ ಒಂದು ಸಂದು ಬಿಟ್ಟ ಉಂಗುರಾಕೃತಿಯ ಸರಿಗೆಯ ಸಂದಿನ ಮೇಲೂ ಈ ಕಣಗಳು ಕಾಣಿಸಿಕೊಂಡುದನ್ನು ನೋಡಿ ಅವನಿಗೆ ಆಶ್ಚರ್ಯವೆನಿಸಿತು. ಆದರೆ ಹತ್ತು ವರ್ಷಗಳ ಹಿಂದೆಯೇ ಕ್ಲಾರ್ಕ ಮೆಕ್ಸ್ವೆಲ (Clarke Maxwell) ಎಂಬಾತನು ಕೇಂದ್ರೋದ್ಭವ ತರಂಗಗಳ ವಿಷಯ

ಮಾಡಿದ ಕೆಲವು ಊಹನೆಗಳನ್ನು ನೆನಪಿಗೆ ತಂದು ಈ ಘಟನೆಯು ಆ ತರಂಗಗಳಿಂದಲೇ ಉಂಟಾಗಿರಬೇಕೆಂಬುದಾಗಿ ಅವನು ತಿಳಿದುಕೊಂಡನು. ವಿಷಯವನ್ನು ಮುಂದರಿಸುವದರೊಳಗಾಗಿ ಅವನು ದಿವಂಗತನಾದನು. ಆದುದರಿಂದ ಕೆಲಕಾಲ ವಿದ್ವಾಂಸರು ಇದೊಂದು ವಿಜ್ಞಾನದ ಆಟದ ವೈಚಿತ್ರ್ಯವೇ ಹೊರತು ಇದರಿಂದ ಯಾವ ಉಪಯೋಗವೂ ಆಗಲಾರದೆಂಬದಾಗಿ ಭಾವಿಸಿದರು. ಆದರೂ ಇಂಗ್ಲಾಂಡದಲ್ಲಿ ವಿಲಿಯಮ ಪಿಯರ್ಸ್, ಒಲಿವರ ಲೊಡ್ಜ ಮೊದಲಾದ ಪಂಡಿತರು ಇದರ ವಿಮರ್ಶೆಯಲ್ಲಿಯೇ ಇದ್ದರು.

ಈ ಶೋಧನೆಗಳಾಗುವಾಗ ಇಟಲಿ ದೇಶದಲ್ಲಿ ಗಗ್ಲಿ ಎಲ್ಮೊ ಮಾರ್ಕೊನಿ ಎಂಬಾತನು ಬರೆಯ ೧೨ ವರ್ಷದ ಹುಡುಗನು. ಅವನಿಗೂ ಅವನ ಗುರುವಾದ ಪ್ರೊಫೆಸರ ರಿಗ್ಗಿ ಎಂಬಾತನಿಗೂ ವಿದ್ಯುತ್ ವಿಚಾರಗಳಲ್ಲಿ ತುಂಬಾ ಆಸಕ್ತಿ. ಗುರುವು ತನ್ನ ಶಿಷ್ಯನಿಗೆ ಹರ್ಟ್ಸನು ಮಾಡಿದ ಶೋಧನೆಗಳನ್ನು ಸವಿಸ್ತಾರವಾಗಿ ಹೇಳಿ ಕೊಟ್ಟಿದರಿಂದ ಮಾರ್ಕೊನಿಯು ತನ್ನ ತಂದೆಯ ತೋಟದಲ್ಲಿ ಅಲೆಯಂಚೆಯ ಚಿಕ್ಕದೊಂದು ಕಳುಹಿಸುವ ಮತ್ತು ಕೇಳುವ (Transmitting and receiving) ಯಂತ್ರಗಳನ್ನು ನಿರ್ಮಿಸಿ ಇಟ್ಟನು. ಇವನ ಯಂತ್ರದಲ್ಲಿ ಮೋರ್ಸ ಸಂಜ್ಞೆ (Mars Code) ಗಳನ್ನು ೧೦೦ ಗಜ ಉದ್ದಕ್ಕೆ ಸರಿಗೆಗಳ ಸಹಾಯವಿಲ್ಲದೆ ಕಳುಹಿಸುವರೆ ಸಾಧ್ಯವಾಯಿತು. ಇದನ್ನು ನೋಡಿ ಹುಡುಗನಲ್ಲಿ ಉತ್ಸಾಹವೂ ನವಶೋಧನೆ ಮಾಡುವ ಆತುರವೂ ಬೆಳೆಯಿತು. ಆ ಸಮಯದಲ್ಲಿ ವಿಜ್ಞಾನಶಾಸ್ತ್ರಕ್ಕೆ ಇಂಗ್ಲಾಂಡವೇ ಕೇಂದ್ರವಾದುದರಿಂದ ಮಾರ್ಕೊನಿಗೆ ೨೧ ವರ್ಷ ಪ್ರಾಯವಾದಾಗ ಅವನು ಲಂಡನಿಗೆ ಹೋಗಿ ಇದೇ ವಿಚಾರದಲ್ಲಿದ್ದ ವಿಲಿಯಮ ಪಿಯರ್ಸನಿಗೆ ಭೆಟ್ಟಿಯಾದನು. ಅವನ ಸಹಾಯದಿಂದ ಮಾರ್ಕೊನಿಗೆ ಲಂಡನ ನಗರದ ಮುಖ್ಯ ಅಂಚೆಯ ಕಟ್ಟೆಯಲ್ಲಿ (Post office) ತನ್ನ ಯಂತ್ರವನ್ನು ನಡಿಸಲಿಕ್ಕೆ ಪರವಾನಿಗೆ ದೊರೆಯಿತು. ಸರಿಗೆಗಳ ಸಹಾಯವಿಲ್ಲದೆ ಆ ಕಟ್ಟೋಣದ ಅಖಂಡವಾದ ಗೋಡೆಯ ಯೊಳಗಿಂದ ಇವನ ಯಂತ್ರದ ಕೇಂದ್ರೋದ್ಭವ ತರಂಗಗಳು ಹೊರ ಹೊರಡ ಬಲ್ಲುವೆಂದು ಅವನು ವಿದ್ವಾಂಸರಿಗೆ ವಿದಿತ ಮಾಡಿದನು.

ಇದಾದ ಕೆಲ ಸಮಯದಲ್ಲಿ (೧೮೯೯) ಉತ್ತರ ಸಮುದ್ರದಲ್ಲಿ ಗಂಡಾಂತರಕ್ಕೀಡಾದ ಒಂದು ಹಡಗವನ್ನು ರಕ್ಷಿಸಲಿಕ್ಕೆ ಇವನ ಯಂತ್ರವು ಸಮಾಚಾರವನ್ನು ದೇಶಕ್ಕೆ ತಿಳಿಸಿ ಬಹಳ ಸಹಾಯಮಾಡಿತು. ಆಗ ಈ ಶೋಧನೆಯ ನಿಜವಾದ ಬೆಲೆಯು ಲೋಕಕ್ಕೆ ತಿಳಿಯಿತು. ಇಂಗ್ಲೀಷ ಸರಕಾರದವರು ಕೂಡಲೆ ಅವನ ಯಂತ್ರಗಳನ್ನು ತಮ್ಮ ನೌಕಾಪಡೆಗಳಲ್ಲಿ ಇರಿಸುವ ಹಕ್ಕನ್ನು ೩ ಲಕ್ಷ ರೂಪಾಯಿಗಳಿಗೆ ಪಡಕೊಂಡುದರಿಂದ ಮಾರ್ಕೊನಿಯ ಹೆಸರು ಜಗತ್ಪ್ರಸಿದ್ಧವಾಯಿತು. ಹೇರಳ ಹಣವೂ ಅವನ ಕೈಸೇರಿತು.

ಆದರೂ ಮಾರ್ಕೊನಿಯು ತನ್ನ ಯಂತ್ರವನ್ನು ಇನ್ನೂ ಹೆಚ್ಚು ಸುಧಾರಿಸುವ ಪ್ರಯತ್ನದಲ್ಲಿಯೇ ಇದ್ದನು. ತರಂಗಗಳನ್ನು ಪ್ರಸರಿಸುವ ಏರಿಯಲ್ ಸರಿಗೆ (Ariel) ಯನ್ನು ಎತ್ತರಕ್ಕೆ ಏರಿಸಿದಷ್ಟಕ್ಕೆ ತರಂಗಗಳು ದೂರಕ್ಕೆ ಹೋಗುವವೆಂಬ ಶೋಧನೆಯನ್ನು ಮಾಡಿ ೧೯೦೦ರಲ್ಲಿ ಇಂಗ್ಲಾಂಡದಲ್ಲಿ ಪೊಲ್ಡು (Poldu) ಎಂಬಲ್ಲಿಂದ ಎಟ್ಲಾಂಟಿಕ ಸಾಗರದಾಚೆ ನ್ಯೂಫೌಂಡಲೆಂಡಿನಲ್ಲಿ ಸೈಂಟಜೊನ ಎಂಬಲ್ಲಿಗೆ ತನ್ನ ಯಂತ್ರಗಳಿಂದ ಸಂಜ್ಞೆಗಳನ್ನು ಕಳುಹಿಸಿದುದರಿಂದ ಸಮುದ್ರಗಾಮಿ ತಂತಿ ವಾರ್ತೆ (submarine cables) ಯವರಿಗೆ ದಿಗಿಲು ಬಡೆಯಿತು. ತಮ್ಮ ವ್ಯಾಪಾರಕ್ಕೆ ಕುಂದು ಬರುವುದೆಂದು ಅವರು ಮಾರ್ಕೊನಿಯ ಸಹಾಯಕರನ್ನು ನ್ಯೂಫೌಂಡಲೆಂಡಿನಿಂದ ಓಡಿಸಿದರು. ಅದೇವರ್ಷ ದಶಂಬರ ೧೯ ರಲ್ಲಿ ನ್ಯೂಯೋರ್ಕದಲ್ಲಿ ದೊಡ್ಡದೊಂದು ಅಲೆಯಂಚೆಯ ಕಾರ್ಯಾಲಯವನ್ನು ಕಟ್ಟಿ ಅಲ್ಲಿಂದ ಇಂಗ್ಲಾಂಡಿನಲ್ಲಿ ಎಡ್ವರ್ಡ ಚಕ್ರವರ್ತಿಗಳವರಿಗೆ message (ಸಂದೇಶ) ನ್ನು ಕಳುಹಿಸಿದನು. ಅಂದಿನಿಂದ ಎಲ್ಲಾ ದೇಶಗಳಿಗೆ ಸಮಾಚಾರವ್ಯವಹಾರಗಳು ಆಕಾಶವಾಣಿ ಯಂತ್ರದ ಸಹಾಯದಿಂದಲೇ ಹೆಚ್ಚಾಗಿ ನಡೆಯಲಿಕ್ಕೆ ಆರಂಭವಾದವು. ಅದಕ್ಕಾಗಿ ೧೯೨೪ರಲ್ಲಿ ರಗ್ಬಿ ಎಂಬಲ್ಲಿ ೮೨೦ ಅಡಿ ಎತ್ತರದ ಗೋಪುರಗಳ ಮೇಲೆ ಏರಿಯಲ ಸರಿಗೆಯನ್ನಿರಿಸಿ ಲೋಕದ ಅತಿ ದೊಡ್ಡದಾದ ಅಲೆಯಂಚೆಯ ಕಾರ್ಯಾಲಯವನ್ನು ಇಂಗ್ಲಿಷರು ನಿರ್ಮಿಸಿದರು.

ಆದರೂ ಆಕಾಶವಾಣಿಯು ಜನರ ದಿನವಹಿ ಜೀವನವಲ್ಲಿ ಹೆಚ್ಚಿನ ಮಟ್ಟಿಗೆ ಪ್ರವೇಶಿಸಲಿಲ್ಲ. ಅಷ್ಟರಲ್ಲಿ ಸೂಕ್ಷ್ಮವಾಣಿ ಯಂತ್ರ (microphone) ಮತ್ತು ದೂರವಾಣಿ ಯಂತ್ರ (telephone) ಇವುಗಳ ಶೋಧನೆಗಳೂ ಆದುದರಿಂದ ಜನರು ತಮ್ಮ ಮಾತಿನ ಸ್ವರವನ್ನೇ ಆಕಾಶವಾಣಿಯಿಂದಲೂ ಕೇಳಲಿಚ್ಛಿಸಿದರು. ಮಾರ್ಕೊನಿಯೂ ಈ ವಿಚಾರಕ್ಕೂ ಕೈ ಹಚ್ಚಿದನು. ಅವನು ೧೯೨೩ರಲ್ಲಿ ಈ ಸ್ವರದ ಯಂತ್ರವನ್ನು

ನಿರ್ಮಿಸಿ ಲೆಬ್ರೆಡೊರ (Labrador, Canada) ದಲ್ಲಿ ಇರಿಸಿ ಒಬ್ಬ ಅಂಬಿಗನಿಗೆ ಅಂಗ್ಲಾಳದಿಂದ ಕೇಳಿಸುವ ಇಂಪಾದ ಗಾನಕ್ಕೆ ಕಿವಿಗೊಡಲು ಹೇಳಿದನು. ವೃದ್ಧ ಅಂಬಿಗನು ಕೆಲ ಸಮಯ ಕೇಳಿ ತಲೆದೂಗಿ ಇದೊಂದು ಮಾಟಗಾರಿಕೆಯೆಂದು ತನ್ನ ನಿಶ್ಚಿತ ಅಭಿಪ್ರಾಯವನ್ನು ಕೊಟ್ಟನು. ಅಂಬಿಗನು ಒಂದು ಪಿಯಾನೊವನ್ನು ಕೂಡ ಎಂದೂ ನೋಡಿದವನಲ್ಲ ಅಂದಮೇಲೆ ಆ ಧ್ವನಿಯನ್ನು ಅಮಾನುಷವೆಂದು ತಿಳಿದುದರಲ್ಲಿ ಅವನ ತಪ್ಪೇನು ?

ಮರುವರುಷ ಡಾಕ್ಟರ ಫ್ಲೆಂಮಿಂಗ ಎಂಬಾತನು ನಿರ್ವಾತ ನಳಿಗೆಗಳನ್ನು (Thermionic Valves or Vaccume tubes) ನಿರ್ಮಿಸಿ ಮಾರ್ಕೋನಿಯ ಯಂತ್ರದಲ್ಲಿ ಸ್ಫಟಿಕದ ಬದಲು ಇದನ್ನು ಉಪಯೋಗಿಸಿದುದರಿಂದ ಸ್ವರವು ಚೆನ್ನಾಗಿ ಕೇಳಿಸಹತ್ತಿತ್ತು. ಕೂಡಲೆ ಅಂಗ್ಲಾಳದಲ್ಲಿ ಒಂದು ಪ್ರಸರಣಾ ಕಂಪೆನಿಯವರು (Broadcasting Company) ಅಲ್ಲಲ್ಲಿ ತಮ್ಮ ಕಾರ್ಯಾಲಯಗಳನ್ನು ಏರ್ಪಡಿಸಿ ದೇಶದಲ್ಲಿ ಕೋಟಿಗಟ್ಲೆ ಜನರು ತಮ್ಮಲ್ಲಿ ಕೇಳಿಸುವ ಯಂತ್ರಗಳನ್ನು ಇಟ್ಟು ಗಾಯನ ಭಾಷಣ ಮೊದಲಾದವುಗಳಿಂದ ಸಂತೋಷಗೊಳ್ಳುವ ಅನುಕೂಲತೆಗಳನ್ನು ಮಾಡಿಕೊಟ್ಟರು. ಈಗ ನಾಗರೀಕ ದೇಶಗಳಲ್ಲಿ ಇಂತಹ ಯಂತ್ರಗಳಿಲ್ಲದ ಮನೆಗಳೇ ಇಲ್ಲವೆನ್ನಬಹುದು.

ಇತ್ತಲಾಗಿ ಅಮೇರಿಕಾ ದೇಶದಲ್ಲಿ ಶೋಧನೆಗಳು ಮುಂದುವರಿದು ಮಂಗಳ ಗ್ರಹಕ್ಕೂ ಸಂಜ್ಞೆಗಳನ್ನು ಕಳುಹಿಸುವ ಯತ್ನಗಳು ನಡಿಯುತ್ತಲಿವೆ. ಏನೊ ಕೆಲವು ಸಂಜ್ಞೆಗಳು ಆಗಾಗ ಕೇಳಿಸುತ್ತವೆ. ನಮ್ಮಂತೆ ನಾಗರೀಕ ವಸತಿಯು ಆ ಗ್ರಹದಲ್ಲಿ ಇರುವುದು ಒಂದು ವೇಳೆ ನಿಜವಾಗಿದ್ದರೆ ಅವರು ನಮ್ಮೊಡನೆ ಮಾತನಾಡಲು ಪ್ರಯತ್ನಿಸುತ್ತಿರುವರೊ ಎಂಬುದನ್ನು ಈಗ ಊಹಿಸಲಿಕ್ಕೂ ಅಸಾಧ್ಯ. ಆದರೂ ಈಗಿನ ಪರಿಸ್ಥಿತಿಯನ್ನು ನೋಡಿದರೆ ಅದು ಸಾಧ್ಯವಾಗುವುದು ಬರೇ ಸಮಯದ ಮಾತಾಗಿ ತೋರುತ್ತದೆ.

ಎರಡು ಕವಿತೆಗಳು

ಕವಿಗಳು:—ಶ್ರೀ ಗೋವಿಂದ ಪೈ, ಮಂಜೇಶ್ವರ

೧

' ಜೀವನದೀ ಮಧುಮಾಸಂ '

ಜೀವನದೀ ಮಧುಮಾಸಂ
  ಬತ್ತುತ ಬಂತು,
ಮನಸಿನ ಮಧುರ ವಿಕಾಸಂ
  ನನೆಯೊಳೆ ಸಂತು;
ಮುಸುರಿದ ಮಕರಂದ ಪಾನ
ಮೊದವದೆದೆಯ ಭ್ರಮರಗಾನ
  ಮೆಚ್ಚರಲೆಂತು ?
ಮನೆಗೆಯ್ದುಕ್ಕರೆಯ ಪಿಕಂ
  ಪಾರಿದುದೆಲ್ಲಿ ?
ಗೂಡುಗೊಂಡ ಹಿಂಡು ಶುಕಂ
  ಕಾಣಿಸವಿಲ್ಲಿ !
ಅಳಲ ಕಣಜವಿನ್ನು ಸಾಗೆ,
ಹಗಲುದ್ದಕೆ ಮರುಗೆ ಗೂಗೆ,
  ಚೀರ್ವುದು ಹಲ್ಲಿ.

ನಡುಚೈತ್ರದಿ ಮುಸಗೆ ಗ್ರೀಷ್ಮ,
  ಬೇಯುದೆ ಮನಸು ?
ಮುಗಚದೆ ಮೃಗಜಲದೊಳೂಷ್ಮ
  ಕಡಸಿದ ಕನಸು ?
[1]ಪಾತೆಯೆಲರ [2]ಪಾತಿಯಿಲ್ಲ,
ತರಗೆಲೆಗಳ [3]ಬಟ್ಟೆಯೊಲ್ಲ
ದೇವುದೊ ನೆನಸು ?

ಕೆರೆಯಿಲ್ಲದ ಕಡಲೊಳಿಲ್ಲಿ
  ದಾವ ದಾವರಂ ?
ಮರಳಿಲ್ಲದ ಮರುವೊಳಲ್ಲಿ
  ಕಾವ ಕಾವರಂ !
ಮುಗಿಲಲಿ ರವಿಶಶಿಯ ಕೀಸೆ
ಸಿಡಿವ ಕಿಡಿಯೊ [4]ಕೆಲವೆ ಸೂಸೆ
  ಸೀವ ಸೀವರಂ ?

೧ ಪಾತೆ=ಚಿಟ್ಟೆ. ೨ ಪಾತಿ=ದೋಣಿ. ೩ ಬಟ್ಟೆ=ದಾರಿ. ೪ ಕೆಲವೆ=ಕೆಲವು ಸಾರಿ.

ಬೇಗೆ ಮುಸುಕಲಿಂತು ತಾನೆ
ದೂರವೆ ವೃಷ್ಟಿ ?
ತಂಬನಿಗಿಂ ಬಾಗೆ ಶಾನೆ
ಮೊಳೆಯದೆ ಸೃಷ್ಟಿ ?
ಹಸುರು ಹಗಲು ಹೊರಳೆ, ಹೊಂಚು
ಹಾಕದೆ ನೂರಾರು ಮಿಂಚು
ಹುಳಗಳ ದೃಷ್ಟಿ ?
ಒಮ್ಮೆ ಮುಗಿಯಲದೆ ವಸಂತ
ವಿನ್ನಹುದಳವೆ ?
ಒಮ್ಮೆ ಮುಗಿದ ತನುವನಂತ
ರಂ ನವುಗೊಳವೆ ?
ಸುಗ್ಗಿ ಮುಗಿದೆ ಮಳೆಯಲ್ಲವೆ ?—
ತನು ಮುಗಿದಡೆ ಕೆಳೆಯಿಲ್ಲವೆ ?
ಕೆಳೆಗೇನಳಿವೆ ?

೨

‘ಬಲ್ಲುದೆ ಲತೆ ಫಲಂ ತನ್ನ’

ಬಲ್ಲುದೆ ಲತೆ ಫಲಂ ತನ್ನ
ಸಿಹಿಯೊ ಕಹಿಯೊ ಎಂಬುದನ್ನ ?
ಒಗೆದಂತೊದಗಿಸಲು ಬನ್ನ
ಮೇನೊ ? ಬಳ್ಳಿಯಾ
ಹಲವೊ ಕೆಲವೊ ಸವಿದು ಹಣ್ಣ,
ಸಿಹಿಯಾದೊಡೆ ಕೊಳುವುದುಣ್ಣ
ಕಹಿಯಾದೊಡೆ ಕಳೆವುದಣ್ಣ
ಲತೆಯು ತಳ್ಳಿಯಾ.
ಪ್ರಕೃತಿವಶಮೆ ಫಲಿಸ ಬಲ್ಲ
ಲತೆಗೆ ರುಚಿಯ ಗೊಡವೆ ಸಲ್ಲ—
ರುಚಿಯರಿಯದೆ ಸಸ್ಯಮೆಲ್ಲ
ಫಲಿಸಲಾರವೆ ?
ರುಚಿಯೊ ? ರಸಿಕರೊಡವೆ ! ಮುನ್ನ
ಸವಿದೆ ಪೊಗಳಿ ತೆಗಳಿದನ್ನ—
ಸವಿದೊಲ್ಲಡೆ, ಲತೆಗೆ ತನ್ನ
ಫಲಂ ಭಾರವೆ ?
ತಾನೆ ತನ್ನ ಫಲಮನುಂಬ
ಬಳ್ಳಿ ಫಲಿಸಲುಂಟೆ ? ಕೊಂಬ
ರಿಲ್ಲದಂತೆನಿತೊ ಫಲಂ ಬ
ಳ್ಳುಂಕಲಡಿಯಲಿ,

ಬಗೆಯು ಬಳ್ಳಿಗದುವೆ ಗೊಬ್ಬ
ರಾಗದೆ ? ಮರುವೆಳಸಲಿ ಕೊಬ್ಬ
ದಿಹವೆ ? ಹೊಸತೆ ಬಳ್ಳಿ ಹಬ್ಬ
ವೆನಿತೊ ಮಡಿಯಲಿ ?
ಇಂದಿಗರಿದನೊಲ್ಲಡೆಂದೊ
ಬರುವರಾರೊ ಸವಿವರೆಂದೊ
ಕಾವ ಲತೆಯೊಳಾವ ಕುಂದೊ ?
ನಾಳೆಯು ನಂಬೆ,
ಇಂದಿನೇಕೆ ವೃಥಾ ತಂಟೆ ?—
ನಂಬಿಕೆ ಬರಡಾಗಲುಂಟೆ ?
ಬರಿಯ ನಿರಾಶೆಗೆ ಮುರುಂಟೆ,
ಫಲಿಸುವ ಹಂಬೆ ?
ಮುಂಬಿಗರಿದನಂತೆ ನೂಕೆ,
ಬಳ್ಳಿ ಬರಿದೆ ಕೊರಗಲೇಕೆ ?—
ಹೆತ್ತುಳ್ಳಿಸೆ ಫಲಮನಾಕೆ
ಕಡು ಸಾಜತೆಗೆ ?
ಯಾರೊಲ್ಲಡೆ, ಗಾಳಿ ಬೀಸೆ
ತನ್ನುದುರಿಚ ಫಲದ ಸೇಸೆ
ಭೂಮಾತೆಯು ಮುಡಿಗೆ ಸೂಸೆ
ಸಾಲದೆ ಲತೆಗೆ ?
ಅಥವಾ ಪೊಗಳಿಕೆಗೆ ಹಿಗ್ಗ
ಲೊಲ್ಲಡೆ, ತೆಗಳಿಕೆಗೆ ಕುಗ್ಗ
ಲಾರಡೆ, ಲತೆ ಫಲಕೆ ಸಿಗ್ಗ
ಲೇಕೆ ? ಕಾಲದೆ
ಫಲಿಸುವಂತೆ ಫಲಿಸಿ ಹೆಚ್ಚೆ—
ಕೊಳುವುದುಳಿವುದನ್ಯರಿಚ್ಚೆ—
ತನ್ನ ಗೆಯ್ಮೆಗೆಯ್ದ ನಚ್ಚೆ
ಲತೆಗೆ ಸಾಲದೆ ?
ಮೆಚ್ಚಿಸದೊಡಿದಾರನೆಂದಿ
ಗೀ ಲತೆಗೀ ಫಲಮನೊಂದಿ
ಸಿದ ಸೃಷ್ಟಿಯ ಕರ್ಮಬಂದಿ
ಗಿದೇನೊಪ್ಪದೆ ?
ಲತೆಯಿದನನ್ಯಥಾ ಫಲಿಸೆ,
ಫಲಮಿದನನ್ಯಥಾ ಮಲಿಸೆ—
ಪ್ರಕೃತಿಯನನ್ಯಥಾ ಸಲಿಸೆ
ಅವನಿಗಪ್ಪುದೆ ?

ಭೂಲೋಕದ ಪರ್ವಕಾಲಗಳು

ಲೇಖಕರು:— ಶ್ರೀ. ಕೆ. ಎಲ್. ಕುಡ್ವ

ಇಂಗ್ಲಾಂಡ (England)ದ ಮಂತ್ರಿ ಲೊಯ್ಡ್ ಜೊರ್ಜರು (Lloyd George) ತಮ್ಮ ಒಂದು ಭಾಷಣದಲ್ಲಿ ಭೂಲೋಕವು ೧೯೧೪–೧೯೧೮ನೇ ಯುದ್ಧದ ಸಂಬಂಧವಾಗಿ ಬೇಗನೆ ಮುನ್ನಡೆಯಲ್ಲಿ ಹೆಜ್ಜೆಯಿಟ್ಟಿತೆಂತಲೂ ಶತಮಾನಗಳಲ್ಲಿ ಆಗುವ ಅಭಿವೃದ್ಧಿಯೂ ಬದಲಾವಣೆಗಳೂ ಈ ೪ ವರುಷಗಳಲ್ಲಿ (Treaty of Versailles June ೨೮–೧೯೧೯) ಆದವೆಂತಲೂ ಹೇಳಿರುವರು. ಈ ರೀತಿಯಲ್ಲಿಯೇ ಹಿಂದಿನ ಶತಮಾನಗಳಲ್ಲಿಯೂ ಕೆಲವು ಸಮಯದಲ್ಲಿಯೇ ಶತಮಾನಗಳ ಅಭಿವೃದ್ಧಿಯನ್ನು ಹೊಂದಿ ಹಿಂದಿನ ಮಾರ್ಗಗಳನ್ನು ಬಿಟ್ಟು ಭೂಲೋಕವು ಹೊಸ ಮಾರ್ಗಗಳಲ್ಲಿ ತನ್ನ ಹೆಜ್ಜೆಯನ್ನಿಟ್ಟು ಚೇತನಗೊಂಡಿದೆ.

ಈ ರೀತಿಯ ಪರ್ವಕಾಲಗಳಲ್ಲಿ ೧೮ನೇ ಶತಮಾನದ ಕಡೆಯ ೧೦ ವರುಷಗಳೂ ೧೯ನೇ ಶತಮಾನದ ಪ್ರಥಮ ೧೦ ವರುಷಗಳೂ ಮುಖ್ಯವೆನ್ನಬಹುದು. ಫ್ರೆಂಚರ ಅರಸು ೧೬ನೇ ಲುಇಸ್ ಎಂಬವನು ಮೃತಪಟ್ಟನು. ಈ ಅರಸನು ೧೭೭೪ರಲ್ಲಿ ಫ್ರೆಂಚ ಸಿಂಹಾಸನವನ್ನು ಏರುವಾಗ್ಯೆ ಫ್ರೆಂಚ ರಾಜ್ಯದ ಖಜಾನೆಯು ಬಂದಾಗಿತ್ತು. ಅಮೇರಿಕದ ಸ್ವಾತಂತ್ರ್ಯಯುದ್ಧಕ್ಕೆ ಫ್ರೆಂಚರು ಕೊಟ್ಟ ಸಹಾಯದಿಂದ ಫ್ರೆಂಚರು ಇನ್ನಿಷ್ಟು ಹಣವನ್ನು ಕಳಕೊಂಡರು. ಫ್ರೆಂಚ ರಾಜ್ಯವು ಐಶ್ವರ್ಯವಂತವಾಗಿತ್ತು; ಆದರೆ ಆರ್ಥಿಕತ್ರಾಣವಿದ್ದ ದರಿಂದ ಸರ್ಕಾರದವರು ತಮ್ಮ ತೆರಿಗೆಗಳನ್ನು ವಸೂಲಮಾಡುತ್ತಿದ್ದಿಲ್ಲ. ಹಳ್ಳಿಗಳಲ್ಲಿರುವ ಬಡಬಗ್ಗರಿಂದಲೂ ಒಕ್ಕಲಿಗರಿಂದಲೂ ಸರ್ಕಾರಿ ತೀರ್ವೆಯು ವಸೂಲು ಆಗುತ್ತಿತ್ತು. ಶ್ರೀಮಂತರ ಗೌರವವು ಹೆಚ್ಚಿತ್ತು. ಬಡವರೂ ಒಕ್ಕಲಿಗರೂ ಈ ಐಶ್ವರ್ಯವಂತರ ಗುಲಾಮರು. ಈ ಹಣದ ಪೇಚಾಟದ ಸಂಬಂಧವಾಗಿ, ೧೬೧೪ರಿಂದ ಕರೆಯಲ್ಪಡದ ಫ್ರೆಂಚರ ಪಾರ್ಲಿಮೆಂಟಾದ "Estates Genrral ಎಂಬ ಸಭೆಯನ್ನು ಹೊಸ ತೀರ್ವೆಯನ್ನು ಹೊರಿಸುವ ಬಗ್ಗೆ ೧೬ನೇ ಲುಯಿಸ್ ಅರಸನು ಕರೆದನು. ಹೊಸ ಕಾನೂನನ್ನು ಜಾಗೆ ತರುವೆನೆಂತ ಅರಸನು ಜನರಿಗೆ ಅಭಯ ಕೊಡಬೇಕಾಯಿತು. ಈ ಸಂಸ್ಥೆಯ ಪ್ರಭುತ್ವವು ಅರಸನಲ್ಲಿರಲಿಲ್ಲ. ಇಂಗ್ಲಿಷರ ರಾಜಶಾಸನದ ಸೂತ್ರದ ಮೇರಿಗೆ ಪ್ರಾತಿನಿಧ್ಯ ಸಂಸ್ಥೆಗಳಲ್ಲಿ ಸರ್ಕಾರಿ ತೀರ್ವೆಯ ವಸೂಲುಮಾಡುವ ಹಕ್ಕು ಉಂಟೆಂದು ಕಾದಾಡಿದರು. ಈ ಸಂಬಂಧವಾಗಿ ಆದ ಹೋರಾಟದಲ್ಲಿ ಪಾರಿಸಿನಲ್ಲಿ ಜನರು ದಂಗೆ ಎದ್ದರು. ಅರಸನು ಜನರ ಪ್ರತಿನಿಧಿಗಳನ್ನು ಸೆರೆಯಿಟ್ಟ ಬೆಸ್ಟಿಲ್ ಎಂಬ ಜೈಲನ್ನು ೧೭೮೯ ಜುಲೈ ೧೪ರಲ್ಲಿ ನಾಶಮಾಡಿ ಅರಸನನ್ನು ವಾರ್ಸೆಲಿಸಿನಿಂದ ತಂದು ೧೭೯೩ರಲ್ಲಿ ಅವನನ್ನು ಗಲ್ಲಿಗೆ ಹಾಕಿದರು. ಪಾರ್ಲಿಮೆಂಟಿನವರು ಇಷ್ಟರ ಒಳಗೆ ಮನುಷ್ಯರ ಪ್ರಾಮುಖ್ಯ ಹಕ್ಕಿನ ಶಾಸನವನ್ನು (Reghts of Man) ಪ್ರಕಟಗೊಳಿಸಿದರು. ಐಶ್ವರ್ಯವಂತರಿಗೆ ಹೆಚ್ಚಿನ ಹಕ್ಕಿಲ್ಲ. ಕಾನೂನುಮಟ್ಟಿಗೆ ಎಲ್ಲರು ಸರಿಸಮಾನರು. ಯೋಗ್ಯ ಬುದ್ಧಿವಂತರಿಗೆ ಪ್ರತಿ ಒಂದು ಸರ್ಕಾರಿ ಹುದ್ದೆಯನ್ನು ಪಡೆಯಲು ಅಧಿಕಾರವಿರಬೇಕು. ನಿರಂಕುಶ ಪ್ರಭುತ್ವವನ್ನು ನಾಶಪಡಿಸಿ ಪ್ರತಿ ಒಬ್ಬ ವ್ಯಕ್ತಿಗೆ ತಮ್ಮ ಸೇರಿಕೆಯಿದ್ದಂತೆ ಸುರಕ್ಷಿತವಾಗಿ ಜೀವನವನ್ನು ನಡೆಯಿಸಲಿಕ್ಕೂ ತಮ್ಮ ನ್ಯಾಯವಾದ ಸಂಪಾದನೆಯನ್ನೂ ಸೊತ್ತುಗಳನ್ನೂ ಅನುಭವಿಸಲಿಕ್ಕೂ ಹಕ್ಕು ಉಂಟೆಂದು ಸ್ಥಾಪಿತವಾಯಿತು. ಈ ರೀತಿ ಫ್ರೆಂಚರು ಸ್ಥಾಪಿಸಿದ Equality (ಸರಿಸಮಾನತ್ವ), Fraternity (ಸಹೋದರತ್ವ) Liberty (ಸ್ವಾತಂತ್ರ್ಯ) ಎಂಬ ಸೂತ್ರಗಳು ಯುರೋಪದಲ್ಲಿ ಪ್ರಸರಿಸಿದವು. ಈ ಫ್ರೆಂಚ ಉತ್ಕ್ರಾಂತಿಯ ಸಮಯದಲ್ಲಿ ಇಂಗ್ಲಾಂಡದ ಶ್ರೀಮಂತರೂ ಅರಸರೂ ತಮ್ಮ ಪ್ರಭುತ್ವಕ್ಕೆ ಲೋಪ ಬರಬಹುದೆಂಬದಾಗಿ ಸಂಶಯಪಟ್ಟು ಈ ಉತ್ಕ್ರಾಂತಿಯನ್ನು ದ್ವೇಷಿಸಿದರೂ ಅದು ಎಲ್ಲೆಲ್ಲಿಯೂ ರಾಷ್ಟ್ರೀಯತೆಯನ್ನು ಜನರಲ್ಲಿ ಹುಟ್ಟಿಸಿ ಸಾಧಾರಣ ವ್ಯಕ್ತಿಗಳನ್ನು ಚೇತನಗೊಳಿಸಿತು.

೧೯೧೪ನೇ ಇಸವಿ ಅಗೋಸ್ತು ತಾ. ೧ರಲ್ಲಿ ಜರ್ಮನಿಯವರು ರುಷ್ಯ (Russia)ಕ್ಕೆ ಕೊಟ್ಟ (Ultimatum) ಜಾಹಿರಾತಿನಿಂದ ಉದ್ಭವಿಸಿದ ಯುದ್ಧವು ನಮ್ಮ ಏಶ್ಯಾಖಂಡದಲ್ಲಿರುವ ಜನರನ್ನು ಜಾಗರೂಕಗೊಳಿಸಿ ಇಲ್ಲಿಯ ರಾಷ್ಟ್ರೀಯತೆಯನ್ನು ಹುಟ್ಟಿಸಿದೆ. ಫ್ರೆಂಚ ಉತ್ಕ್ರಾಂತಿಯು ಯುರೋಪವನ್ನು ಚೇತನಗೊಳಿಸಿತು. ಈ ಯುದ್ಧವು ರುಷ್ಯದ

ನಿರಂಕುಶಪ್ರಭುತ್ವವನ್ನು ನಾಶಪಡಿಸಿ ಐಗುಪ್ತ, ಇರಾಕು, ಪರ್ಸಿಯಾ, ಟರ್ಕಿ ಮೊದಲಾದ ದೇಶಗಳಲ್ಲಿ ರಾಷ್ಟ್ರೀಯತೆ ಯನ್ನು ಉಂಟುಮಾಡಿದೆ. ರೋಮಿನ ಸಾಮ್ರಾಜ್ಯವು ನಾಶ ವಾದ ನಂತರ ಇತ್ತೀಚಿಗೆ ಈ ಯುದ್ಧದಷ್ಟು ಕಠಿಣ ವೇದ ನೆಯು ನಮ್ಮ ಭೂಲೋಕಕ್ಕೆ ಆಗಲಿಲ್ಲ. ಈ ಯುದ್ಧದ ಕಾಲಕ್ಕೆ (Western Front) ಫ್ರಾನ್ಸಿನಲ್ಲಿ ನಡೆದ ಯುದ್ಧದೊಳಗೆ ಜನರು ಸಹಿಸಲಾರದಷ್ಟು ಕಷ್ಟವನ್ನು ಅನು ಭವಿಸಿದರು. ಇತ್ತಲಾಗಿ ಯುದ್ಧಸಾಹಿತ್ಯವೇ ಪ್ರತ್ಯೇಕವಾಗಿ ಆಗುವಂತಿದೆ. ಗೆಲ್ಲಿಪೊಲ್ಲಿ, ಗೆಲಿಸಿಯಾ, ಸಿರೆತ್, ಕುಟ್ ಮೊದ ಲಾದ ಸ್ಥಳಗಳಲ್ಲಿ ೧೦ ಲಕ್ಷ ಜನರು ಕೊಲ್ಲಲ್ಪಟ್ಟರು. ಸಮುದ್ರಕ್ಕೆ ಇನ್ನಷ್ಟು ಜನರು ತುತ್ತಾದರು. ಗ್ರೀಕ, ರೋಮ ನಾಗರೀಕತನದಿಂದ ಉದ್ಭವಿಸಿದ ವಿಲಾಯತಿಯವರ ನಾಗರೀಕ ತನವು ಭೂಲೋಕದ ಧುರೀಣತನವನ್ನು ಕಳೆಕೊಂಡು ನಾಶ ವಾಗುವ ಸಂದರ್ಭ ಒದಗಿತು.

ಈ ಯುದ್ಧದ ಸಂಬಂಧದಿಂದ ೧೯೧೭ರಲ್ಲಿ ರುಷ್ಯದಲ್ಲಿ ಉತ್ಕ್ರಾಂತಿಯಾಯಿತು. ಫ್ರೆಂಚ ಉತ್ಕ್ರಾಂತಿಯಲ್ಲಿ ನಡೆ ದಂತೆ ಝಾರನಿಕೋಲಸ ಎಂಬ ಅರಸನನ್ನು ಜನರು ಗಲ್ಲಿಗೆ ಹಾಕಿದರು. ರುಷ್ಯದ ಉತ್ಕ್ರಾಂತಿಯು ೬ ತಿಂಗಳೊಳಗೆ ಅಂದರೆ ೧೯೧೭ ಮಾರ್ಚಿಯಿಂದ ಒಕ್ಟೋಬರದ ಒಳಗೆ ಸ್ಥಾಪಿತ ವಾಯಿತು. ಕ್ರೈಸ್ತ ದೇವಾಲಯಗಳನ್ನು ಮುಚ್ಚಿಸಿ ನಾಸ್ತಿಕ ಧರ್ಮವನ್ನು ರುಷ್ಯದ ಸರ್ಕಾರವು ಸ್ವೀಕರಿಸಿದರೂ ಅದು ಸಾಧಾರಣ ವ್ಯಕ್ತಿಯ ಅಭಿವೃದ್ಧಿಯನ್ನು ಮುಂದರಿಸಿತು. ಫ್ರೆಂಚ ಉತ್ಕ್ರಾಂತಿಯಲ್ಲಿ ಮಧ್ಯಮತರಗತಿಯ ಜನರೇ ಮುಖಂಡರು. ರುಷ್ಯದಲ್ಲಿ (proletariat) ಕನಿಷ್ಠ ಸ್ಥಿತಿಯ (ಆರ್ಥಿಕ) ಜನರಾದ ಕೆಲಸಗಾರರೇ ಮುಖಂಡರು. ರುಷ್ಯದ ಉತ್ಕ್ರಾಂತಿಯಿಂದ ವ್ಯಕ್ತಿಗಳ ಸ್ವಾತಂತ್ರ್ಯವು ಹೆಚ್ಚಾಗಿ ಗೌರವವು ಇನ್ನೂ ಹೆಚ್ಚುತ್ತಲಿರುವದು. ಮನುಷ್ಯರ ಹಕ್ಕುಗಳನ್ನು ಸ್ಥಾಪಿಸಿ ಈ ಮೂಲಕ ನಾವು ದೇವರನ್ನು ಆರಾಧಿಸುತ್ತೇವೆ ಎಂಬದಾಗಿ ಫ್ರೆಂಚ ಉತ್ಕ್ರಾಂತಿಯ ಮುಖಂಡರು ಹೇಳಿದರು. ಕೆಲಸವೇ ದೇವರ ಆರಾಧನೆ ಎಂಬ ದಾಗಿ ರುಷ್ಯದ ಮುಖಂಡರ ಧ್ಯೇಯ. ೧೯೧೭ರ ಲಾಗಾಯ್ತು ತಮ್ಮ ದೇಶದಿಂದ ಬಡತನವನ್ನು ದೂರಮಾಡಿ ತಮ್ಮ ದೇಶ ವನ್ನು ಉನ್ನತಿಗೆ ತರಬೇಕೆಂದು ರುಷ್ಯದ ಜನರು ಇಡೀ ದಿವಸ ಎಡೆಬಿಡದೆ ಏಕಾಗ್ರಚಿತ್ತದಿಂದ ಕೆಲಸಮಾಡುತ್ತ ಲಿರುವರು.

ಯುದ್ಧವು ಒಂದು ದೊಡ್ಡ ಭ್ರಮೆ. ಅದರಿಂದ ನಾಗರೀಕ ತನವು ನಾಶವಾಗುವದು. ಅದರಲ್ಲಿ ಯೋಗ್ಯರಾದವರು ಹೆಚ್ಚಾಗಿ ಮೃತಪಡುವರು. ಅದರಲ್ಲಿ ಉಂಟಾಗುವ ಕಷ್ಟಕ್ಕೆ ಸರಿಯಾದ ಪ್ರಯೋಜನವಿಲ್ಲವೆಂಬ ಭಾವನೆಯು ಈಗ ಪಾಶ್ಚಾತ್ಯ ಜನರಲ್ಲಿ ಹುಟ್ಟಿ ಯುದ್ಧವನ್ನು ತಾವು ಒಂದು ಶಾಪವೆಂದೆಣಿಸಿ ಅದನ್ನು ತೆಗೆದುಹಾಕುವಂತೆಯೂ ಮುಂದಕ್ಕೆ ಯುದ್ಧವಾಗದಂತೆ ಮಾಡಬೇಕೆಂಬದಾಗಿಯೂ "League of Nations" ಜನಾಂಗಗಳ ಒಂದು ಸಂಸ್ಥೆಯು ಏರ್ಪಾ ಡಾಗಿಯಿದೆ. ನೌಕಾಸೈನ್ಯದ ಪರಿಷತ್ತು ನಡೆಯಿತು. ಅದರಲ್ಲಿ ಇಂಗ್ಲಾಂಡ ಅಮೇರಿಕ ಜಪಾನದವರು ಸೇರಿ ನೌಕಾಸೈನ್ಯವನ್ನು ಹೆಚ್ಚಿಸಬಾರದಾಗಿ ಮಾಡಿದ ನಿರ್ಣಯವು ಫ್ರೆಂಚ ಮತ್ತು ಇಟಲಿಯವರ ಪರಸ್ಪರ ಹಗೆಯಿಂದ ನಿಷ್ಫಲವಾಯಿತು. ವಿಲಾಯತಿಯ ಎಲ್ಲಾ ರಾಜ್ಯಗಳು ಒಂದು (Federation) ಸಂಯುಕ್ತ ಸಂಸ್ಥೆಯಲ್ಲಿ ಐಕ್ಯವಾಗಬೇಕೆಂಬ ಭಾವನೆಯು ಅಲ್ಲಿ ಎದ್ದಿದೆ. ಜನಾಂಗಗಳ ವಿವಾದವನ್ನು ಈ "League of Nations" ಎಂಬ ಸಂಸ್ಥೆಯ ಪಂಚಾಯ್ತಿಯ ಮುಂದೆ ಇಡಬೇಕು ಎಂಬ ಪ್ರಯತ್ನಗಳು ನಡೆಯುತ್ತಲಿವೆ.

ನಮ್ಮ ಈ ಬಡ ದೇಶನಲ್ಲಿ ಯುದ್ಧವನ್ನು ನಿಲ್ಲಿಸುವದ ಕ್ಕೋಸ್ಕರ ಅದಕ್ಕೆ ಸರಿಸಮಾನವಾಗಿರುವ ಹಾಗೂ ಸ್ವಾತಂ ತ್ರ್ಯವನ್ನು ದೊರಕಿಸಲು ಅದರಷ್ಟೆ ಪ್ರಯೋಜನಕರವಾಗುವ (Moral Equivalent of war) ಉತ್ಕ್ರಾಂತಿಯ ಒಂದು ನವೀನ ವಿಧಾನವನ್ನು ಮಹಾತ್ಮಾಜಿಯವರು ಕಂಡು ಹಿಡಿದರು. ಅದು ಅಹಿಂಸಾತತ್ವ ಅದನ್ನು ಸ್ವಯಂಸೇವಕರು ಜಾರಿಗೆ ತರುತ್ತಿದ್ದಾರೆ. ಅವರ (Disc plined selfi-sacrifice) ಶಿಸ್ತುಳ್ಳ ತ್ಯಾಗವೂ ದೇಹದಂಡನೆಯೂ ಅತಿ ಅದ್ಭುತ. ಯುದ್ಧದಲ್ಲಿ ಹೆಂಗಸರು ಹೋಗಲು ಸಾಧ್ಯವಿಲ್ಲ ವಾದರೂ ಈ ಹೊಸ ವಿಧಾನದಲ್ಲಿ ಹೆಂಗಸರು ತಮ್ಮ ಅದ್ಭುತ ವಾದ ಆತ್ಮಶಕ್ತಿಯನ್ನು ತೋರಿಸುತ್ತಲಿರುವರು. ಈ ಆಯು ಧದ ಪ್ರಯೋಜನವು ಮುಂದಕ್ಕೆ ತಿಳಿಯುವದು.

ಐಗುಪ್ತದ ಚಳವಳ, ಇರಾಣಿನ ಸಂಗಡ ಆದ ಒಪ್ಪಂದ, ಚೀನಾದೇಶದಲ್ಲಿ ನಡೆಯುವ ಯುದ್ಧಗಳು, ಪರರಾಜ್ಯದವರಿಗೆ ಚೀನದಲ್ಲಿದ್ದ ಹಕ್ಕಿನ ನಾಶ, ಪರ್ಷಿಯಾ ದೇಶದಲ್ಲಿ ಆಗುವ ಯುದ್ಧ, ಪೆಲಿಸ್ಟೈನ ಮೊದಲಾದ ಪ್ರಾಂತ್ಯಗಳ ಅಸಮಾಧಾನ ಇವೇ ಮೊದಲಾದವು ೧೯೧೪–೧೯೧೮ನೇ ಯುದ್ಧದಲ್ಲಿ ಜನ್ಮವೆತ್ತಿದ ಹೊಸ ರಾಷ್ಟ್ರೀಯತೆಯ ಕುರುಹುಗಳು.

ಕೋಪಣನಗರ

(೧)

ನೃಪತುಂಗದೇವನಾಳಿಕೆಯಲ್ಲಿ ನನ್ನ—
ಕೋಪಣವೆ ! ನೀನಾಗ ನಗರವಾಗಿದ್ದೆ.
ಕಾಣುವುದು ನಿನ್ನ ಅತ್ಯುನ್ನತ್ಯವಿಂದು—
ಅಲ್ಲವೇನೋ —
ಆ ತುಂಗ ಗಿರಿಶಿಖರದೆಡೆಯಲ್ಲಿ !
ಕೋಪಣವೆ ! ಓ ! ನನ್ನ ತಿರುಳಗನ್ನಡನಾಡೆ !
ಎಲ್ಲಿಹುದು ನಿನ್ನಲ್ಲಿ ಈಗ ಆ ತಿರುಳು ?
ನೃಪತುಂಗ ತನ್ನ ತುಂಗಸ್ವನದಿ ಹಾಡಿವನು
ನಿನ್ನ ಆ ತಿರುಳ ಮಹಿಮೆ
ಹಿಂಸೆಯೆಲ್ಲವನಳಿಸಿ ಬಿಡಲು ಅವತರಿಸಿರ್ದ
ತೀರ್ಥಂಕರರ ಪುಣ್ಯಪಾದಧೂಳಿಗಳಿಂದೆ
ಸುಪವಿತ್ರವಾಗಿರ್ದ ಪುಣ್ಯತೀರ್ಥವು ನೀನು !
ಆ ಮಹಿಮ ಪುಣ್ಯಕ್ಷೇತ್ರವು ನೀನು !!
ಎಲ್ಲಿಹುದು ? ಆ ಕುರುಹು ಎಲ್ಲಿಹುದು ಆ ಮಹಿಮೆ ?
ಇಂದೊದುಗುತಿಹುದಿಲ್ಲಿ ಬಹುವಾಗಿ ಹತ್ಯೆ !!
ಅಲ್ಲಲ್ಲಿ ಗಿರಿಶಿಲೆಗಳಲ್ಲಿ—
ಕಾಣುತಿಹುದೊಂದು ಕುರುಹು !
ಮತ್ತೊಂದು ಆ ತುಂಗಗಿರಿಶಿಖರದೆಡೆಯಲ್ಲಿ !!

(೨)

ಮತ್ತೊಮ್ಮೆ ಹೊರಳು ಆ ಕೋಟೆಕೊತ್ತಲ ಕಡೆಗೆ
ಕಾಣಿಪರು ಒರೆಗಳೆದ ಖಡ್ಗದಾ ವೀರರು.
ನೋಡಲ್ಲಿ ! ಕುಳಿತಿಹರು ನೋವನೆಲ್ಲವ ನುಂಗಿ
ಹಿಂಸೆಗಿದು ಎಡೆಯಲ್ಲವೆಂದು ಬೋಧಿಪ—
ದಿಗಂಬರಸಿದ್ಧರು.
ಕಾಣಿಪುದು ನೋಡಿಲ್ಲಿ ಇಂದಿನೀ ಜಗವು
ಹೀನವಾಗೆನಿತು ಈ ಹೇಡಿ ಜೀವನದಿ !
ಇಂದೀಗ: —
ಆ ಮಹಿಮೆ ಆ ತಿರುಳು ಆ ಪುಣ್ಯಗಳ ನಡುವೆ
ಅಂಥ ಕಾಳದ ತೆರೆಯ—ಪರೆಯು ಒಂದು,
ಕಾಣುತಿರುವುದು ನೋಡು !
ಮತ್ತಲ್ಲಿ ಕಾಣುವುದು ಆ ತೆರೆಯ ಹಿಂದೇ
ಕಾಳನಟ ರಾಜನಾ ಭೀಕರದ ನೃತ್ಯ!
ವೀರರೆನ್ನದೆ ಮುದ್ದು ಮಕ್ಕಳುಗಳೆನ್ನದೇ
ಆತನಾ ನೃತ್ಯಲೀಲೆಯು ಅವರ ಬೆನ್ನಮೇಲೇ
ಹಗಲೆಲ್ಲ ನಡೆದೆ ಇಹುದು.

—'ನಾ. ಭಾ'

ಮೂಕಮಗು

ಬಾಳು ಮೊದಲಿಗೆ ಬತ್ತಿಬಂದಿರುವ ವಾಣಿ !
ಕಾಲು ಬಂದರೆ ಕಾಣಬಹುದೆಂದೆ ನನ್ನಿ !
ಬಾಲ್ಯ ಬಯಲಾಗಿ ಈ ಬಾಳು ಅರಿಯರಾಯ್ತು;
ಲಾಲಸಾಲನೆ ಎಂದಿಗೋ ನಿಂತು ಹೋಯ್ತು;
ಕಾಯ ಕೊನರಿಕೆಗು ಆ ಕಾಯ ಕಾಣಿಕೆಗು !
ತಾಲಕಲೆಯುವುದೆಂತು ಮಾತರಿದು ಬರದು !
ಹೆತ್ತ ಕರುಳಿದುವೆ ದೇವ !— ಮಾತರಿಯೆ !
ಚಿತ್ರಿಸುವೆ ಹಾವ ! ಭಾವ !!

ಇದ್ದ ಆರ್ಯರ ನಡತೆ ಗಿಳಿಗಾಣ ನೀಡಿ,
ಬುದ್ಧಿಗಳೆದುವ ಅನ್ಯರಾಚರಣೆಗೂಡಿ,
ತನ್ನ ತೇಜಸ್ಸಿನಿಂ ತಾನಿರದೆಮಾಗಿ,
ಅನ್ಯತೇಜೋದಾಸ್ಯದೊಳು ಬಾಳೆ, ಬಾಗಿ,
ಬಾಳು ಕಳವಳಗೊಂಡು ತಾ ಬಳಲುವುದನು
ಕಾಳು ಸೆರೆ ಕಾಣದಿಹ ಒಡಲ ದೈನ್ಯವನು
ಹೇಳಿ ಕನಿಕರ ಬಡಿಸೆ ಬಾಯಿಲ್ಲವಲ್ಲ !
ಹೆತ್ತ ಕರುಳಿದುವೆ ದೇವ !— ಮಾತರಿಯೆ !
ಚಿತ್ರಿಸುವೆ ಹಾವ ! ಭಾವ !!

ಪೂರ್ವ ಪ್ರತಿಭಾ ಪುತ್ಥಲಿಗಳಂತೆ ಆಗಿ
ತೋರ್ವ ಶಕ್ತಿಯು ಇಲ್ಲ ಎದೆಯೊಲವ ಕೂಗಿ
ಬಾಹ್ಯಬಂಧನೆ ಬೆಳೆದ ಈ ಬಾಳಿನಲ್ಲಿ !
ಶಿಕ್ಷಣವು ಸಲೆ ದೊರಕದಿಹ ಗಾಳಿಯಲ್ಲಿ !
ಅತಿಥಿಗಾಳಾಗಿ ಸಿವ ಕಾಡಾಟದಲ್ಲಿ

ಬಟ್ಟೆ ಬಳಲಿಕೆ ನೀಗೆ ಆವ ಕಡೆಗೆಂದು ?
ತಟ್ಟುವೊಲು ನಿನ್ನೆದೆಯ ಕೇಳೆ ಬಾಯ್ಬರಿದು–
ಹೆತ್ತ ಕರುಳಿದುವೆ ದೇವ !– ಮಾತರಿಯೆ !
ಚಿತ್ರಿಸುವೆ ಹಾವ ! ಭಾವ !!

ಜಗದ ಜಗಲಿಯನೊಂದು ಅಡಿಯಿಂದಲಳಿದು
ಮುಗಿ ಮುಟ್ಟದಿಹ ಕಡಲುಗಳ ಕೂಡಿ ತಳೆದು
ನೆಗೆದು ಮೇಲಕ್ಕೇರಿ ಮತ್ತೆ ನೀ ಬೆಳೆದು
ಮುಗಿಲಿನೊಳು ಮುಗಿಗಾಣದಂತಾಗಿ ಉಳಿದು
ಎಳೆಗೂಸ ಕೂಸಾಗಿ ತಳಿರೊಳಗೆ ಆಡಿ
ಕಳೆಯುವನ ಪರಸುಖವನದರೊಳಗೆ ತೀಡಿ
ಮೂಡಿಸುವ 'ಕಲೆ'ಯ ಬಾಯ್ಬಳಸಿನಾನಾಡೆ !
ಹೆತ್ತ ಕರುಳಿದುವೆ ದೇವ !– ಮಾತರಿಯೆ ?
ಚಿತ್ರಿಸುವೆ ಹಾವ ! ಭಾವ !!

ಬುದ್ಧಿ ಬೆಳೆಯಿಸಿ ತಿದ್ದಿ ತೋರಿಸಿದ ರೂಪ !
ಎದ್ದುಗಾಣಲು ಕಲ್ಪನೆಗೆ ಕಣ್ಣೆ ಲೋಪ !
ತಲ್ಪಗಿದೆಗೊಟ್ಟೆ ಶ್ರೀ. ಸಿರಿ ಹೃದಯ ತಲ್ಪ,
ಶಿಲ್ಪಿ ನಾ ಚಿತ್ರಿಸುವೆ ನಿನ್ನ ಅತ್ಯಲ್ಪ,
ಕಲ್ಪನೆಯ ಕೂಡಿ ಕಳೆಗೊಟ್ಟು ಅಡಿವಳಿರ !
ತಲ್ಪಿಯಾಗಿರುವಂತೆ ಬಗೆ ದೈನ್ಯದೋರಿ !
ಇದಕಿರಲಿ ಹರಿಕೆ ಇದೆ ಬಾಳ ಬೇಡಿಕೆಯೊ
ಹೆತ್ತ ಕರುಳಿದುವೆ ದೇವ !– ಮಾತರಿಯೆ !
ಚಿತ್ರಿಸುವೆ ಹಾವ ! ಭಾವ !!

—ಶಿಲ್ಪಿ ಶಿವರಾಮ

ಜನಪದ ಸಾಹಿತ್ಯ

ಬೀಸುವ ಹಾಡುಗಳು

ಸಂಗ್ರಾಹಕರು—ಶ್ರೀ ಗೋ. ಮ. ದೇಶಪಾಂಡೆ, (ತುಂಟರತಂಡ) ಬೆಳಗಾವಿ

ಒಬ್ಬ ರಮಣಿಯ ಹಾರೈಕೆ

ಲಿಂಗಯ್ಯ ಒಳಗಿನ ಲಿಂಗ ಮೂರುತಿ ಸ್ವಾಮಿ ।
ಮಂಗಲಾರುತಿ ನಾ ಬೆಳಗಿ । ಬೇಡುವೆನು
ಮಾರಾಯರ ಮುಂದೆ ಮರಣವ ॥

ಮಕ್ಕಳ ಮಹಿಮೆ

ಬಡತಾನ ಬಂದರ ಬಡಿಬ್ಯಾಡ ಮಕ್ಕಳನು ।
ಆಡ್ಯಾಡಿಬಂದು ತೊಡೀಮ್ಯಾಲೆ । ಕೂತರ
ಬಂದ ಬಡತಾನ ಮರೆಯುವದು ॥

ಯಾಲಕ್ಕಿ ಕಾಯ್‌ಸುಲಿದು ಯಾವಡಿಗಿ ಮಾಡಲಿ ।
ಊರೀಗೆ ಹೋಗ್ಯಾರ ರಾಯರು । ಬಾರದೇ
ಯಾವಡಿಗಿ ಮಾಡಿ ಫಲವೇನ ॥

ಬಡವನೊಬ್ಬನ ಹೆಂಡತಿಯ ವಿಚಾರ

ಚಿಂತಾಕ ಇಡಲಿಲ್ಲ; ಚಿಂತೀಯ ಬಿಡಲಿಲ್ಲ ।
ಎಂಥಲ್ಲಿ ಕೊಟ್ಟ ಹಡೆದವ್ವ । ನಿನ್ನಮನಿ
ಜಂತಿ ಜರದ್ಹಾಂಗ ಜರದೇನ ॥

ಭಕ್ತಿ

ದಾರಾಶಿ ನನಗಿಲ್ಲ; ಭಾಗ್ಯದ ಬಲವಿಲ್ಲ ।
ಕಲ್ಲೊಳ್ಳಿ ಊರೀನ ಕರಿರಂಗ । ವೆಂಕೋಬ ।
ನಿನ್ನಾಶೆ ನನಗ ಅನುಗಾಲ

ಸಂಗ್ರಾಹಕರು— ಶ್ರೀ ದತ್ತು ಮುದೇನಕೊಪ್ಪ

ಸೊಸಿ ಬರತಾಳಂತ ಖುಸಿ ಬಾಳ ಮನದಾಗ
ಸೊಸಿ ಬಂದು ಮಗನ ಕಸಗೊಂಡು । ಬಾಳ್ವಾಗ ।
ಮುಗಿಲಿಗೆ ಬಾಯಿ ತೆಗೆದಾಳ ॥

ಕುಟ್ಟುವ ಹಾಡುಗಳು

ಸಂಗ್ರಾಹಕರು— ಶ್ರೀ ಶಿ. ಲಿಂ. ಕುಲಕರ್ಣಿ, ಕಾಲವಾಡ

ಕುಟ್ಟೀ ಕುಟ್ಟೀ ನನ್ನ ರಟ್ಟೆಲ್ಲ ನೊಂದಾವ ।
ಶೆಟ್ಟಿ ನಿಂಭತ್ತಾ ನುರಿಯಾವ ॥೧॥
ಶೆಟ್ಟಿ ನಿಂಭತ್ತಾ ನುರಿಯಾವ ತವರಲಿಂದಾ ।
ಕುಟ್ಟದಕ್ಕೀಯ ಕಳಿಸ್ಯಾರ ॥೨॥

\+ \+ \+

ನಾನಾರಕುಟಲಾರೆ ಕೂಲೀನ ಕೊಡಲಾರೆ ।
ಯಾರಿಗೂ ದೈನಾಸ ಬಿಡಲಾರೆ ॥೧॥
ಯಾರಿಗೂ ದೈನಾಸ ಬಿಡಲಾರೆ ಅಣ್ಣಯ್ಯಾ ।
ಮರ್‍ಯಾದಿಯಾ ನಿನಮಗಳ ಕಳುಹಂದೆ ॥೨॥

ಸಂಗಮೇಶನ ತೇರಿನ ಹಾಡು

ಸಂಗ್ರಾಹಕರು ಶ್ರೀ. ಫ. ಕೋ. ಕಲ್ಯಾಣಶೆಟ್ಟಿ, ಗದಗ

ಕರಿಜಾಲಿಯು ಮರವ । ಅದರಾಗ ಸಂಗಮತೇರ । ಬಂಗಾರದ ಕಳಸ ತಂದಿಟ್ಟ ಹುನಗುಂದದ ಧೊರಿಯು ॥ ಪಲ್ಲ ॥

ಸಂಗಣ್ಣ ನಿನ್ನತೇರ । ಯಾವಣ್ಣ ಕಟ್ಟಿಸ್ಯಾನ ।
ಬಾಳುಳ್ಳಬಗುತ ಬಣಜಿಗ ಬಸವಲಿಂಗಣ್ಣ ।
ತೇರಕಟ್ಟಿಸಿ ಹೆಸರಾದಾ ॥೧॥

ಕಪ್ಪಡಿಸಂಗಣ್ಣ ಒಪ್ಪುಳ್ಳ ಭಂಗಾರ ।
ಇಟ್ಟಬಂಗಾರ ಪುಟವೇರಿ ಕೂಡಲ ಸಂಗ ।
ಕೃಷ್ಣಾನದಿಯನ್ನು ನೆನೆದಾನೆ ॥೨॥

ಬಂಗಾರದ ಕಳಸ ತಡದಾವ ।
ರಂಭೇರು ಕಳಸ ಹಿಡದರ ಕೂಡಲ ಸಂಗ ।
ಚಂದಿರ ಸಾಲ್ಯಾಗ ಇಳಿವ್ಯಾರ ॥೩॥

ಮಲ್ಲಿಗ್ಹೂವಿನದಂಡಿ । ಅಲ್ಲಿಟ್ಟೆ ಇಲ್ಲಿಟ್ಟೆ ।
ಕಲ್ಲಮೇಲಿಟ್ಟೆ ಕೈಬಿಟ್ಟೆ ಸಂಗಣ್ಣನ ।
ಪಲ್ಲಕ್ಕ್ಯಾಗಿಟ್ಟೆ ಹಿಡಿಹೊನ್ನ ॥೪॥

ಧನ್ನೂರು ಚಂದ, ಧನ್ಯೇಶನ ಗುಡಿಚಂದ ।
ಹೊನ್ನನತನಡಿಗೆ ಹೊಳಿಚಂದ ಮುಂದಿರುವ ।
ತಂಗಿನೀಲವ್ವನ ಗುಡಿಚಂದ ॥೫॥

ಹೊನ್ನಿಯು ಹುಳದಂತೆ ಮುನ್ನೂರುದೀವಟಿಗೆ ।
ಚೆನ್ನ ಸಂಗಮದ ಬೈಲಾಗ ಹಿರಿಹೊಳಿ ಸಂಗ ।
ಬನ್ನಿಯ ಮುಡದು ಬರತಾನ ॥೬॥

ಆಗುವ ಮುಕ್ಕಿಗೆ ಶರಣು । ಗೋಡಿಯ ಕಲ್ಲಿಗೆ ಶರಣು ।
ನಾಲ್ಕುಮುಕ್ಕಿಗೆ ಶಿವಶರಣು । ಕರಿಜಾಲಿಯುಮರವ ॥೭॥

ಬಾಗಿಲ ತಡೆದ ಹಾಡು

ಸಂಗ್ರಾಹಕರು— ಸೌ. ರಾಧಾದೇವಿ ಟೀಂಗಸಿ (ಸುರತ)

ನಾಗವೇಣಿಯೆ ನೀನು ಸಾಗಿ ಮುಂದಕೆ ಬಂದು
ಬಾಗಿಲನ್ನು ನೀ ತೆರೆ ಬೇಗ ॥೧॥

ಯಾರು ಬಂದವರೆಂದು ಪೇಳದೆ ನಿಮ್ಮ ಪೆಸರ
ಹ್ಯಾಂಗೆ ತೆಗೆಯಲಿ ಕದವನು ॥೨॥

ಕೇಳೆ ಯೆನ್ನಯ ಜಾಣೆ ಹೆಸರು ಮಾಧವನೆಂದು
ಬಾಗಿಲನ್ನಿನ್ನು ತೆಗೆ ಬೇಗ ॥೩॥

ಹೇಳಿ ಮಾಧವನಾರು ಬಾಲವಸಂತನೇನು
ಹ್ಯಾಂಗೆ ತೆಗೆಯಲಿ ಕದವನು ॥೪॥

ಮಾನವಂತಳೆ ನಾನು ಚಕ್ರಿ, ವಸಂತನಲ್ಲೆ
ಬಾಗಿಲನ್ನಿನ್ನು ತೆಗೆ ಬೇಗ ॥೫॥

ಚಕ್ರಿಯೆಂದರೆ ನೀವು ಹೇಳಿ ಕುಂಬಾರರೇನು
ಹ್ಯಾಂಗೆ ತೆಗೆಯಲಿ ಕದವನು ॥೬॥

ಚಲುವೆ ಕುಂಬಾರನಲ್ಲೆ ನೆಲವ ಹೊತ್ತವ ನಾನು
ಬಾಗಿಲನ್ನಿನ್ನು ತೆರೆಬೇಗ ॥೭॥

ನೆಲವ ಹೊತ್ತವರಾರು ನಾಗರಾಜರೆ ನೀವು
ಹ್ಯಾಂಗೆ ತೆಗೆಯಲಿ ಕದವನು ॥೮॥

ನಾಗರಾಜನು ಅಲ್ಲೆ ನಾಗಮರ್ದಿಯು ನಾನು
ಬಾಗಿಲನ್ನಿನ್ನು ತೆಗೆ ಬೇಗ ॥೯॥

ನಾಗಮರ್ದಿಯು ನೀವು ವಿಹಗರಾಜರೆ ಹೇಳಿ
ಹ್ಯಾಂಗೆ ತೆಗೆಯಲಿ ಕದವನು ॥೧೦॥

ವಿಹಗರಾಜನು ಅಲ್ಲೆ ಹರಿಯು ಯೆನ್ನಯ ಹೆಸರು
ಬಾಗಿಲನ್ನಿನ್ನು ತೆರೆ ಬೇಗ ॥೧೧॥

ಹರಿಯು ಯೆಂದರೆ ಯಾರು ಮಂಗನೇನಯ್ಯಾ ನೀವು
ಹ್ಯಾಂಗೆ ತೆಗೆಯಲಿ ಕದವನು ॥೧೨॥

ಅಲ್ಲ ಮಂಗನು ನಾನು ನಲ್ಲೆ ನಿನ್ನಯ ನಲ್ಲನೆಂದು ನನ್ನನ್ನು ಕರೆವರು ॥೧೩॥

ಯೋಗಿಮಾನಸರಾಜಹಂಸ ಕೃಷ್ಣನು ನಾನು
ಕರೆವರೆನ್ನನ್ನು ಹರಿ ಯೆಂದು ॥೧೪॥

ಸೋತೆ ಜಾಣೆಯೆ ನಾನು ಮಾತಿಗೀತಕೆ ಮಾತು
ಬಾಗಿಲನ್ನು ನೀ ತೆರೆ ಬೇಗ ॥೧೫॥

ಕೇಳಿ ನಲ್ಲನ ಮಾತ ಜಾಣೆ ರುಕ್ಮಿಣಿ ನಗುತ
ಬಾಗಿಲನ್ನೀಗ ತೆರೆದಳು ॥೧೬॥

೫–೧೦–೩೦ನೆಯ ದಿನ ಮೈಸೂರಲ್ಲಿ ನೆರೆದ

೧೫ನೆಯ ಕರ್ನಾಟಕ ಸಾಹಿತ್ಯಸಮ್ಮೇಲನದ ಅಧ್ಯಕ್ಷರಾದ

ಶ್ರೀ ಆಲೂರ ವೆಂಕಟರಾಯರ ಭಾಷಣವು

नाहं कर्ता हरिः कर्ता तत्पूजा कर्म चाखिलम् ॥

ಸ್ವಸ್ತಿಶ್ರೀಮತ್ಕರ್ನಾಟಕ ವಾಙ್ಮಯ ದೇವತಾಪೂಜೆಗೆ ಸನ್ನದ್ಧರಾದ ಮಹಾಜನಗಳ ಚರಣ ಸನ್ನಿಧಿಯಲ್ಲಿ— ಸರಸ್ವತಿಯ ಪಾದಪದ್ಮಾರಾಧಕನಾದ ನಾನು ತಮ್ಮೆಲ್ಲರಿಗೆ ಸಹಸ್ರ ವಂದನೆಗಳನ್ನು ಸಮರ್ಪಿಸಿ ಅರಿಕೆಮಾಡಿಕೊಳ್ಳುವುದೇನೆಂದರೆ—

ನಾನು ಮಾತೃಭಾಷಾಪುತ್ರರಲ್ಲೊಬ್ಬನೆಂಬ ಪ್ರೇಮದಿಂದ ತಾವೆಲ್ಲರೂ ನನ್ನನ್ನು ಈ ಸಮ್ಮೇಲನದ ಪ್ರಾಣಪ್ರತಿಷ್ಠಾಚಾರ್ಯನಾಗಲು ಆಜ್ಞಾಪಿಸಿರುವಿರಿ. ಆ ಮಹಾಪದವಿಗೆ ನಾನು ತೀರ ಅಯೋಗ್ಯನಿರುವೆನೆಂಬುದು ನನಗೆ ಗೊತ್ತಿದ್ದರೂ, ತಮ್ಮ ಅಪ್ಪಣೆಯನ್ನು ಮೀರಲು ಮನಸ್ಸಿಲ್ಲದ್ದರಿಂದ ಅದನ್ನು ಅಂಗೀಕರಿಸಿರುವೆನು. ಹಿಂದಕ್ಕೆ ಈ ಪೀಠವನ್ನಲಂಕರಿಸಿದವರು ಅನೇಕ ವಿಧವಾಗಿ ಅವಳ ಪೂಜೆಯನ್ನು ಕಟ್ಟಿರುತ್ತಾರೆ. ಕೆಲವರು ಜ್ಞಾನದೀಪದಿಂದ ಅವಳಿಗೆ ಆರತಿಯನ್ನೆತ್ತಿರುತ್ತಾರೆ. ಕೆಲವರು ಅನನ್ಯವಾದ ಭಕ್ತಿಯಿಂದ ಅವಳ ಗುಣಗಳನ್ನು ಗಾನಮಾಡಿ ಅವಳ ಪ್ರಸಾದವನ್ನು ಪಡೆದಿರುತ್ತಾರೆ. ಕೆಲವರು ತಮ್ಮ ಸ್ನಿಗ್ಧಮಧುರಕಾವ್ಯಮಯವಾಣಿಯಿಂದ ಅವಳಿಗೆ ಪಂಚಾಮೃತಾಭಿಷೇಕ ಮಾಡಿರುತ್ತಾರೆ. ಕೆಲವರು ಸಂಶೋಧನದ ನಂದಾದೀಪಗಳನ್ನಿಟ್ಟು ಅವಳ ಮೂರ್ತಿಯನ್ನು ಪ್ರಕಾಶಮಾನವಾಗಿ ಮಾಡಿರುತ್ತಾರೆ. ಮತ್ತೆ ಕೆಲವರು, ಶ್ರೀಮನ್ಮಹಾರಾಜರವರ ಕೃಪಾಜಲ ಪೋಷಿತವಾದ ಸುಂದರವಾದ ಉದ್ಯಾನಗಳಿಂದ ಸುಗಂಧಪುಷ್ಪಗಳನ್ನು ತೆಗೆದುಕೊಂಡು ಅವಳನ್ನು ಪೂಜಿಸಿರುತ್ತಾರೆ. ನಾನಾದರೋ, ಇವುಗಳಲ್ಲೊಂದನ್ನೂ ಮಾಡಲಾರೆ. ಗಾನದಿಂದ ಹೃದಯವನ್ನು ಸೆಳೆಯಲರಿಯೆ, ಜ್ಞಾನದಿಂದ ಬಗೆಯನ್ನರಳಿಸಲರಿಯೆ, ಸಂಶೋಧನದೀಪದಿಂದ ಬೆಳಗಲರಿಯೆ. ಕರ್ನಾಟಕ ಸಾಹಿತ್ಯಸಾಗರದಲ್ಲಿ ಸ್ನಾನಮಾಡಿ ಶುಚಿರ್ಭೂತನಾದವನೂ ನಾನಲ್ಲ. ಆದಕಾರಣ, ಪಾವನತರವಾದ ಅವಳ ಮೂರ್ತಿಯನ್ನು ಮುಟ್ಟಿ, ಅವಳನ್ನು ಭ್ರಷ್ಟಗೊಳಿಸಲಿಚ್ಛಿಸುವುದಿಲ್ಲ. ಸುಗಂಧಪುಷ್ಪಗಳನ್ನಾದರೂ ಏರಿಸಬೇಕೆಂದರೆ, ಸಹಾನುಭೂತಿಯ ದ್ರವವೂ ಕೂಡ ಇಲ್ಲದ ಮರುಭೂಮಿಯಲ್ಲಿ ಹುಟ್ಟಿದ ನನ್ನ ಬಳಿಯಲ್ಲಿ ಹೂವುಗಳೆಲ್ಲಿಂದ ಬರಬೇಕು ? ಆದರೆ, ನನಗೆ ಪೂಜೆಮಾಡಲಿಕ್ಕೆ ಬೇರೊಂದು ಬಗೆಯ ಅಧಿಕಾರವಿದೆ. ನಾನು ಆರ್ತಭಕ್ತನು. ಆದುದರಿಂದ ಆರ್ತಧ್ವನಿಯಿಂದ ಕೂಗಿಕೊಂಡು, ದೂರದಿಂದಲೇ ನಾಲ್ಕು ದೂರ್ವಾಪತ್ರಗಳನ್ನೇರಿಸಿ ಅವಳ ಪೂಜೆಮಾಡುವೆನು.

ಆದರೆ, ಹೀಗೆ ವಾಗ್ದೇವತೆಯ ಪೂಜೆ ಮಾಡುವ ಮುಂಚೆ, ನಾವು ಅವಳ ನಿಜಸ್ವರೂಪವನ್ನರಿತುಕೊಳ್ಳಬೇಕಲ್ಲವೆ ? ದೇವತಾಸಮುದಾಯದಲ್ಲಿ ಆಕೆಯ ಸ್ಥಾನವಾವುದು ? ಅವಳು ಬ್ರಹ್ಮನ ಮಗಳೂ ಅಹುದು, ಪಟ್ಟದ ರಾಣಿಯೂ ಅಹುದು. ಇಡೀ ಸೃಷ್ಟಿಯನ್ನು ಹುಟ್ಟಿಸಿದಾತನು ಬ್ರಹ್ಮನು. ಇಡೀ ಸೃಷ್ಟಿಯನ್ನು ಹುಟ್ಟಿಸುವಾಗ ಆತನು ಅರ್ಥಾತ್ ವಾಣಿಯನ್ನೂ ಹುಟ್ಟಿಸಿದನು. ಆದುದರಿಂದ ಅವಳು ಆತನ ಮಗಳು. ಆದರೆ, ಮುಂದೆ ಸೃಷ್ಟಿಯೊಳಗಿನ ಸರ್ವ ವಾಚನಿಕ ವ್ಯವಹಾರಕ್ಕೆ ಅವಳ ಆವಶ್ಯಕತೆಯುಂಟಾದುದರಿಂದ, ಅವಳಿಗೂ ಬ್ರಹ್ಮನಿಗೂ ನಿತ್ಯ ಸಂಬಂಧವುಂಟಾಯಿತು, ಎಂದರೆ

ಅವಳು ಆತನ ಪಟ್ಟದ ರಾಣಿಯಾದಳು. ಇದನ್ನೇ ಈಗ ರೂಢವಾಗಿರುವ ಅಚೈತನ್ಯ ಭಾಷೆಯಲ್ಲಿ ಕೇಳುವುದಾದರೆ, ಮನುಷ್ಯನ ಮನಸ್ಸಿನಲ್ಲಿ ಹುಟ್ಟುವ ಯಾವತ್ತು ವಿಕಾರಗಳಿಗೂ ವಿಚಾರಗಳಿಗೂ ವಾಣಿಯ ಆವಶ್ಯಕತೆಯುಂಟು. ಇಲ್ಲದಿದ್ದರೆ, ವ್ಯವಹಾರವೆಲ್ಲವೂ ಕಟ್ಟಾಗುವುದು. ಮನದೊಳಗೆ ಜನಿಸಿದ ಹೊಸ ಭಾವನೆ, ಹೊಸ ಕಲ್ಪನೆ, ಹೊಸ ವಿಚಾರ–ಇವುಗಳಿಗೆಲ್ಲಕ್ಕೂ ಮೂರ್ತಸ್ವರೂಪ ವನ್ನು ಕೊಡುವುದು ವಾಣಿಯು. ಈ ಕಾರ್ಯವನ್ನು ಉತ್ಕೃಷ್ಟವಾಗಿ ನೆರವೇರಿಸುವ ವಾಙ್ಮಯವೇ ಉಜ್ವಲ ವಾಙ್ಮಯವು.

ವಾಙ್ಮಯದ ಈ ಧರ್ಮದ ಮೂಲಕವೇ, ಜನಾಂಗಕ್ಕೂ ವಾಙ್ಮಯಕ್ಕೂ ನಿತ್ಯವಾದ ಸಂಬಂಧ ವುಂಟಾಗುತ್ತದೆ. ಮನುಷ್ಯನು ಯಾವಾಗಲೂ ಸಮಾಜದಲ್ಲಿ ವಿಹರಿಸುವ ಪ್ರಾಣಿಯಾದುದರಿಂದ, ಅವನ ವಾಙ್ಮಯವು ಜನಜೀವನವನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ, ನಿರ್ಜೀವವಾದ ಜನಾಂಗ ದಲ್ಲಿ ಸಜೀವವಾದ ವಾಙ್ಮಯವು ಹುಟ್ಟಲಾರದು. ಭರತಖಂಡದ ಜನತೆಯ ಜೀವನ, ಅಭ್ಯುದಯ, ಉತ್ಕರ್ಷ ಇವೆಲ್ಲವುಗಳ ಮೇಲೆ ನಮ್ಮ ವಾಙ್ಮಯವು ಅವಲಂಬಿಸಿರುತ್ತದೆ. ಕರ್ನಾಟಕದ ವಾಙ್ಮಯ ವೆಂದರೆ ಭರತಭೂಮಿಯ ಜನಜೀವನವನ್ನು ಒಂದು ವಿಶಿಷ್ಟವಾದ ಎರಕದಲ್ಲಿ ಹಾಕಿ ಮಾಡಿದ ಮೂರ್ತಿ. ಆದುದರಿಂದ, ಕರ್ನಾಟಕದ ವಾಙ್ಮಯದಲ್ಲಿ ಇವೆರಡೂ ಸಂಸ್ಕೃತಿಗಳು ಎಂದರೆ ಭರತಖಂಡ ಮತ್ತು ಕರ್ನಾಟಕ ಇವೆರಡೂ ಸಂಸ್ಕೃತಿಗಳು ಪ್ರತಿಫಲಿತವಾಗಿರಬೇಕು. ನಮ್ಮ ರೋಮ ರೋಮಗಳಲ್ಲಿ ರಾಷ್ಟ್ರೀಯತ್ವವೂ ಕರ್ನಾಟಕತ್ವವೂ ತುಂಬಿದ್ದರೆ ಮಾತ್ರವೇ ನಮ್ಮಿಂದ ಅತ್ಯಂತ ಉಜ್ವಲವಾದ ವಾಙ್ಮ ಯವು ಹುಟ್ಟಬಹುದು. ಇಲ್ಲದಿದ್ದರೆ ಎಂದೂ ಹುಟ್ಟಲಾರದು. ಸಾರಾಂಶವೇನೆಂದರೆ– ನಾವು ವಿಶ್ವ ಸಂಸ್ಕೃತಿಯನ್ನೊಳಕೊಂಡ ರಾಷ್ಟ್ರೀಯತ್ವವನ್ನೂ ಕರ್ನಾಟಕತ್ವವನ್ನೂ ಯಾವಾಗಲೂ ಅನುಸಂಧಾನ ಮಾಡಿಕೊಂಡೇ ವಾಙ್ಮಯವನ್ನು ಹುಟ್ಟಿಸುವುದಕ್ಕೆ ಪ್ರವೃತ್ತರಾಗಬೇಕು.

೧ ವಾಙ್ಮಯದ ಅಂತಃಪ್ರಭಾವ

ವಾಙ್ಮಯದ ಯಜ್ಞ, ದಾನ ತಪ

ಈ ರೀತಿಯ ಅನುಸಂಧಾನವನ್ನು ನಾವು ಮೂರು ವಿಧವಾಗಿ ಮಾಡಬಹುದು. ಅವು ಯಾವು ವೆಂದರೆ ವಾಙ್ಮಯಯಜ್ಞ, ವಾಙ್ಮಯದಾನ ಮತ್ತು ವಾಙ್ಮಯತಪ. ವಾಙ್ಮಯವನ್ನು ಹುಟ್ಟಿಸು ವಾಗ, ನಮ್ಮ ಮನಸ್ಸಿನಲ್ಲಿ ಯಾವ ತರಹದ ಪ್ರಯೋಜನಾಪೇಕ್ಷೆಯೂ ಇರದೆ, ಅದು ಕೇವಲ ಪರಮಾತ್ಮನ ಪೂಜೆಯೆಂದೂ ಅದರಿಂದಲೇ ಆತನು ತೃಪ್ತನಾಗುತ್ತಾನೆಂದೂ ಭಾವನೆಯನ್ನು ತಾಳಿ, ನಮಗೆ ದೇವರು ಕೊಟ್ಟಿರುವ ಸಕಲವಿಧಶಕ್ತಿಗಳನ್ನೂ ವಾಗ್ದೇವತೆಯ ಪಾದಾರವಿಂದದಲ್ಲಿ ಸಮರ್ಪಿಸು ವುದೇ ವಾಙ್ಮಯಯಜ್ಞ. ಈ ತರಹದ ವಿಶುದ್ಧ ಬುದ್ಧಿಯಿಲ್ಲದೆ, ಯಾವುದೊಂದು ಪ್ರಯೋಜನಾ ಪೇಕ್ಷೆಯಿಂದ ಹುಟ್ಟಿದ ವಾಙ್ಮಯವು ನಿಜವಾದ ವಾಙ್ಮಯವಾಗಲಾರದು. ಆದುದರಿಂದ, ಗ್ರಂಥಕರ್ತರು ಮತ್ತು ಲೇಖಕರು ವಾಗ್ದೇವತೆಯ ಸೇವೆಯೆಂದೇ ಗ್ರಂಥಗಳನ್ನು ಅಥವಾ ಲೇಖಗಳನ್ನು ಬರೆಯುವು ದಕ್ಕೆ ಪ್ರವೃತ್ತರಾಗಬೇಕು. ಹೀಗೆ ಮಾಡಿದರೆ ಮಾತ್ರ, ಅವರ ವಾಙ್ಮಯವು ತೇಜೋವಂತವಾಗುವುದು. ವಾಙ್ಮಯದಾನವೆಂದರೆ ನಾವು ಸಂಪಾದಿಸಿದ ಜ್ಞಾನವನ್ನು ಅನ್ಯರಿಗೆ ಕೊಡುವುದು, ಎಂದರೆ ಜ್ಞಾನ ಪ್ರಸಾರವು. ವಾಙ್ಮಯತಪವೆಂದರೆ ಆ ಜ್ಞಾನವನ್ನು ಗಳಿಸುವುದಕ್ಕೆ ಮಾಡಬೇಕಾದ ಸ್ವಾಧ್ಯಾಯ ಮತ್ತು ಅಭ್ಯಾಸ. ಈ ಬಗೆಯಾಗಿ, ನಾವು ವಿಶುದ್ಧವಾದ ಬುದ್ಧಿಯಿಂದ ಅಧ್ಯಯನಾದಿಗಳನ್ನು ಮಾಡಿ ಜ್ಞಾನ ಸಂಪಾದಿಸಿ ಜ್ಞಾನ ಪ್ರಸಾರವನ್ನು ಮಾಡಬೇಕು.

ಕರ್ನಾಟಕದ ಪಂಚಕೋಶಗಳ ವಿಕಾಸ

ಈ ಪ್ರಕಾರದ ಯಜ್ಞದಾನ ತಪಗಳಿಂದ ವಾಙ್ಮಯದ ಮುಖಾಂತರವಾಗಿ ನಾವು ಕರ್ನಾಟಕದ ಪಂಚಕೋಶಗಳನ್ನೂ ವಿಕಾಸಗೊಳಿಸಬೇಕು. ಆ ಪಂಚಕೋಶಗಳು ಯಾವುವೆಂದರೆ—ಕರ್ನಾಟಕದ ಶರೀರ ಪ್ರಾಣ, ಮನಸ್ಸು, ವಿಜ್ಞಾನ ಮತ್ತು ಆನಂದ. ಇದರಿಂದ ನಮ್ಮ ವಾಙ್ಮಯದಲ್ಲಿ ಯಾವತ್ತು ತರಹದ ಗ್ರಂಥಗಳು ಹುಟ್ಟುವವು. ಕರ್ನಾಟಕದ ಭೂಗೋಲು, ಜನಸಂಖ್ಯೆ ಭೂಗುಣ, ಖನಿಜ ಸಂಪತ್ತು ಇವೇ ಮುಂತಾದವುಗಳು ಹುಟ್ಟಿದರೆ ಕರ್ನಾಟಕದ ಭೌತಿಕ ಶರೀರದ ವಿಕಾಸವಾಗುವುದು. ಆದರೆ, ಇಂಥ ವಾಙ್ಮಯದಲ್ಲಿ ಪ್ರಾಣಶಕ್ತಿಯ ಸಂಚಾರವು ಸಾಕಷ್ಟು ಇರದಿದ್ದರೆ, ಈಗಿನ ನಮ್ಮ ನಿರ್ಜೀವಪಠ್ಯಪುಸ್ತಕಗಳಂತೆ ಅವು ನಿಃಸತ್ವವಾಗುವವು. ಯಾವತ್ತು ವಾಙ್ಮಯಕ್ಕೆ ಪ್ರಾಣವೇ ಮುಖ್ಯ. ಆದಕಾರಣ ನಮ್ಮ ಯಾವತ್ತು ತರಹದ ವಾಙ್ಮಯದಲ್ಲಿ ಪ್ರಾಣಸಂಚಾಲನವಾಗುವಂತೆ ನಾವು ಎಚ್ಚರಪಡಬೇಕು. ಆದರೆ ಮನುಷ್ಯನು ಪ್ರಾಣವನ್ನಷ್ಟೆ ಹಿಡಿದುಕೊಂಡು ಜೀವಿಸಿದರೆ, ಅದು ಹೇಗೆ ಉಚ್ಚ ಜೀವನವಾಗುವುದಿಲ್ಲವೋ ಹಾಗೆ, ವಾಙ್ಮಯದಲ್ಲಿ ಮನಸ್ಸಿನ ವಿಕಾಸಕ್ಕೆ ಎಡೆಯಿರದಿದ್ದರೆ ಅದು ಉಚ್ಚ ವಾಙ್ಮಯವೆನಿಸುವುದಿಲ್ಲ. ಆದುದರಿಂದ ವಾಙ್ಮಯದ ಉನ್ನತಿಯನ್ನು ಬಯಸುವವರು ಸಮಾಜದ ಮನಸ್ಸನ್ನು ಸಂಪೂರ್ಣವಾಗಿ ವಿಕಾಸಗೊಳಿಸುವುದಕ್ಕೆ ತಕ್ಕ ಗ್ರಂಥಗಳನ್ನು ಬರೆಯಬೇಕು. ಇದರಿಂದ ನಮ್ಮ ವಾಙ್ಮಯದಲ್ಲಿ ಮಾನಸಶಾಸ್ತ್ರ, ಚರಿತ್ರೆ, ಇತಿಹಾಸ, ಕಥೆ ಕಾದಂಬರಿ, ನಾಟ್ಯಶಾಸ್ತ್ರ, ಅಭಿನಯಶಾಸ್ತ್ರ, ಸಂಗೀತಶಾಸ್ತ್ರ ಮುಂತಾದ ಗ್ರಂಥಗಳು ಹುಟ್ಟುವವು. ಕರ್ನಾಟಕದ ವಿಜ್ಞಾನಮಯ ಕೋಶದ ವಿಕಾಸವಾಯಿತೆಂದರೆ, ನಮ್ಮಲ್ಲಿ ಕಾವ್ಯಗಳು, ನಾಟಕಗಳು, ಪದಗಳು ವಿಶೇಷವಾಗಿ ಹುಟ್ಟುವವು. ಆನಂದ ಕೋಶವು ವಿಕಾಸವಾಯಿತೆಂದರೆ, ಶ್ರುತಿಸ್ಮೃತ್ಯಾದಿ ಧಾರ್ಮಿಕ ವಾಙ್ಮಯವು ವಿಶೇಷವಾಗಿ ಬೆಳೆಯುವುದು. ವಾಙ್ಮಯದಲ್ಲಿ ಯಾವ ಗ್ರಂಥಗಳು ವಿಪುಲವಾಗಿರುವವೆಂಬುದರ ಮೇಲಿಂದ ಆ ಸಮಾಜದ ಸುಧಾರಣೆಯು ಎಷ್ಟರ ಮಟ್ಟಿಗೆ ಆಗಿರುವುದೆಂಬುದನ್ನು ತಿಳಿಯಬಹುದು. ಸಾರಾಂಶವೇನಂದರೆ—ವಾಙ್ಮಯವು ಸುಧಾರಣೆಯನ್ನಳೆಯುವ ಉಷ್ಣತಾಮಾಪಕ ಯಂತ್ರವು. ಯಾವ ಸಮಾಜದಲ್ಲಿ ಉದಾತ್ತವಾದ ವಾಙ್ಮಯವಿಲ್ಲವೋ ಆ ಸಮಾಜವು ಹೀನ ಸಮಾಜವೆಂದು ತಿಳಿಯಬೇಕು. ಮತ್ತು ಅದರಲ್ಲಿರುವ ಗ್ರಂಥಗಳ ಮೇಲಿಂದ ಅದರ ಮಟ್ಟನ್ನು ಗೊತ್ತುಪಡಿಸಬಹುದು.

ವಾಙ್ಮಯದಲ್ಲಿ ಸಾತ್ವಿಕ, ರಾಜಸ, ತಾಮಸಗಳೆಂಬ ಭೇದ

ಇಲ್ಲಿಯ ವರೆಗೆ ನಾವು ಹೇಳಿದುದು ಶುದ್ಧ ವಾಙ್ಮಯದ ವಿಷಯವು. ಆದರೆ ಸಮಾಜದಲ್ಲಿ ಯಾವಾಗಲೂ ಶುದ್ಧ ವಾಙ್ಮಯವೇ ರಚಿತವಾಗುತ್ತಿರುವುದಿಲ್ಲ. ಏಕೆಂದರೆ ಈ ಜಗತ್ತು ಸಾತ್ವಿಕ ರಾಜಸ ತಾಮಸರೆಂಬ ತ್ರಿವಿಧವಾದ ಜೀವರುಗಳಿಂದ ತುಂಬಿದೆ. ಆಯಾ ಜನರು ತಮ್ಮ ತಮ್ಮ ಸ್ವಭಾವಕ್ಕನುಗುಣವಾಗಿ ಗ್ರಂಥ ಬರೆಯುವರು. ಆದುದರಿಂದ ಅವರವರ ಸ್ವಭಾವಕ್ಕನುಸರಿಸಿ, ವಾಙ್ಮಯದಲ್ಲಿಯೂ ಸಾತ್ವಿಕರು ರಾಜಸರು ಮತ್ತು ತಾಮಸರುಗಳೆಂಬ ತ್ರಿವಿಧ ಭೇದಗಳುಂಟಾಗುವವು. ತಾಮಸ ವೃತ್ತಿಯುಳ್ಳವನು ಭೂವಿವರಣೆಯನ್ನೇ ಬರೆಯಲಿ, ಇತಿಹಾಸವನ್ನೇ ಬರೆಯಲಿ ಅಥವಾ ಮತ್ತಾವ ಗ್ರಂಥವನ್ನೇ ಬರೆಯಲಿ, ಆತನ ಗ್ರಂಥಗಳಲ್ಲಿ ಆತನ ತಾಮಸ ವೃತ್ತಿಯು ಒಡಮೂಡದೆ ಉಳಿಯುವದಿಲ್ಲ. ನಮ್ಮ ಕನ್ನಡ ವಾಙ್ಮಯದ ಕ್ಷೇತ್ರವನ್ನವಲೋಕಿಸಿದರೆ, ಅದರಲ್ಲಿ ಈ ಬಗೆಯಾಗಿ ಮೂರೂ ವಿಧದ ವಾಙ್ಮಯವಿದ್ದುದು ಕಂಡು ಬರುವುದು. ತಾಮಸ ವಾಙ್ಮಯವು ನಮ್ಮನ್ನು ಯಾವಾಗಲೂ ಅಧಃಪಾತಕ್ಕೆ ಒಯ್ಯುವುದರಿಂದ, ಅದನ್ನು ಹುಡುಕಿ ತೆಗೆದು ಅದಕ್ಕೆ ನಾವು ಶಾಶ್ವತವಾದ ಸಮಾಧಿಯನ್ನು ಕಾಣಿಸಬೇಕು. ರಾಜಸ ವಾಙ್ಮಯದೊಳಗಿನ ಸಾತ್ವಿಕ ಭಾಗಕ್ಕೆ ಪ್ರೋತ್ಸಾಹನ ಕೊಡಬೇಕು. ವಾಙ್ಮಯವನ್ನು ವಿಂಗಡಿಸುವ ರೀತಿಗಳು ಅನೇಕ ವಿಧವಾಗಿವೆ,

ಉದಾಹರಣಾರ್ಥವಾಗಿ — (೧) ಸ್ವತಂತ್ರ ವಾಙ್ಮಯ, ಅಸ್ವತಂತ್ರವಾಙ್ಮಯ (೨) ಹಳೆಗನ್ನಡ ಹೊಸಗನ್ನಡ (೩) ಗದ್ಯವಾಙ್ಮಯ–ಪದ್ಯವಾಙ್ಮಯ (೪) ಲಘುವಾಙ್ಮಯ ಉದಾತ್ತವಾಙ್ಮಯ (೫) ಜನಪದಸಾಹಿತ್ಯ ಮಹಾಜನಸಾಹಿತ್ಯ (೬) ಜ್ಞಾನವಾಙ್ಮಯ ಭಕ್ತಿವಾಙ್ಮಯ (೭) ಇವೇ ಮೊದಲಾಗಿ ನಾವು ವಾಙ್ಮಯದ ಕಡೆಗೆ ಅನೇಕ ದೃಷ್ಟಿಗಳಿಂದ ನೋಡಬಹುದು. ಅನೇಕರು ಆ ದೃಷ್ಟಿಯಿಂದ ವಿಭಾಗ ಮಾಡಿ ಪ್ರತಿಯೊಂದು ಬಗೆಯ ವಾಙ್ಮಯವನ್ನು ವಿಸ್ತಾರಗೊಳಿಸುವುದಕ್ಕೆ ಅನೇಕ ಉಪಾಯಗಳನ್ನು ಈ ಮೊದಲೇ ಸೂಚಿಸಿರುವುದರಿಂದ, ನಾನು ಆ ವಿವರಗಳನ್ನು ಇಲ್ಲಿ ಹೇಳುವ ಕಾರಣವಿಲ್ಲ. ಆದರೆ ವಾಙ್ಮಯದಲ್ಲಿ ಇವಕ್ಕೂ ಮಹತ್ವದ ವಿಭಾಗವೆಂದರೆ ಸಾತ್ವಿಕ ರಾಜಸ ಮತ್ತು ತಾಮಸ ಎಂಬುದೇ ಎಂದು ನನ್ನ ಅಭಿಪ್ರಾಯ. ಏಕೆಂದರೆ, ಮನುಷ್ಯನ ಅಥವಾ ಸಮಾಜದ ಶಾಶ್ವತ ಸುಖಕ್ಕೆ ಅಥವಾ ದುಃಖಕ್ಕೆ ಕಾರಣವಾಗುವುದು ಈ ತರಹದ ವಿಭಾಗವೇ.

ಮೇಲಿನ ವಿವೇಚನೆಯಿಂದ ವಾಙ್ಮಯದ ಅಂತಃಪ್ರಭಾವವು ಬೆಳೆಯಬೇಕಾದರೆ ಯಾವ ಯಾವ ಸಂಗತಿಗಳ ಅವಶ್ಯಕತೆಯಿರುತ್ತದೆಂಬುದು ಗೊತ್ತಾಗುವುದು. ಆ ಸಂಗತಿಗಳು ಯಾವುವೆಂದರೆ, (೧) ವಾಙ್ಮಯವನ್ನು ಹುಟ್ಟಿಸುವವರು ವಿಶ್ವಸಂಸ್ಕೃತಿಯನ್ನೊಳಕೊಂಡ ರಾಷ್ಟ್ರೀಯತ್ವವನ್ನೂ ಕರ್ನಾಟಕತ್ವವನ್ನೂ ಅನುಸಂಧಾನಮಾಡಿ ಗ್ರಂಥಗಳನ್ನು ಬರೆಯಬೇಕು. (೨) ವಿಶುದ್ಧವಾದ ಮನಸ್ಸಿನಿಂದ ಗ್ರಂಥಬರೆಯುವುದೂ ಒಂದು ಪ್ರಕಾರವಾಗಿ ಪರಮಾತ್ಮನ ಸೇವೆಯೆಂಬ ಭಾವನೆಯಿಂದ ಪ್ರೇರಿತರಾಗಿ ತಾವು ಬರೆಯುವ ಗ್ರಂಥದ ವಿಷಯವನ್ನು ಸತತವಾಗಿ ಅಭ್ಯಾಸಮಾಡಿ ಗ್ರಂಥ ಬರೆದು ಜ್ಞಾನಪ್ರಸಾರವನ್ನು ಮಾಡಬೇಕು. (೩) ಗ್ರಂಥಗಳನ್ನು ಬರೆಯುವವರು ಕರ್ನಾಟಕ ಪುರುಷನ ಶರೀರ, ಮನಸ್ಸು ಮತ್ತು ಆತ್ಮ ಇವು ಚೆನ್ನಾಗಿ ವಿಕಾಸಹೊಂದಲಿಕ್ಕೆ ಅನುಕೂಲವಾಗುವಂಥ ಗ್ರಂಥಗಳನ್ನು ಬರೆಯಬೇಕು. (೪) ಈ ಜಗತ್ತು ತ್ರಿವಿಧವಾದ ಜೀವರುಗಳಿಂದ ತುಂಬಿರುವುದರಿಂದ, ಯಾವಾಗಲೂ ಶುದ್ಧ ವಾಙ್ಮಯವು ಹೊರಡುತ್ತಿರುವುದು ಶಕ್ಯವಿಲ್ಲವಾದುದರಿಂದ, ಸಮಾಜವು ತಾಮಸವಾಙ್ಮಯವನ್ನು ಹುಡುಕಿತೆಗೆದು ಅದನ್ನು 'ಹೋಳೀ'ಮಾಡಬೇಕು. ಹೀಗೆ ಮಾಡುವುದರಿಂದ, ವಾಙ್ಮಯದ ಅಂತಃಪ್ರಭಾವವು ಬೆಳೆಯುತ್ತದೆ.

ಇನ್ನು ಇಂತಹ ಅಂತಃಪ್ರಭಾವವುಳ್ಳ **ವಾಙ್ಮಯದಲ್ಲಿ** ನಾವು ನಾಲ್ಕು ಸ್ಥೂಲಭಾಗಗಳನ್ನು ಮಾಡಬಹುದು. ಅವಾವವೆಂದರೆ (೧) ಪ್ರಾಣವಂತವಾಙ್ಮಯ (೨) ವೀರ್ಯವಂತ ವಾಙ್ಮಯ (೩) ಓಜಸ್ವಿವಾಙ್ಮಯ ಮತ್ತು (೪) ಸ್ವಾನಂದವಾಙ್ಮಯವೆಂದರೆ ಸತ್ವರಜತಮೋಗುಣಗಳಿಂದ ಮೀರಿದ ತ್ರಿಗುಣಾತೀತನಿಂದ ಅಥವಾ ಅಪರೋಕ್ಷಜ್ಞಾನಿಯಿಂದ ಹುಟ್ಟಿದ ವಾಙ್ಮಯ, ಇಂಥವನು ಕೇವಲ ವಾಙ್ಮಯಭಕ್ತನಿರುವುದಿಲ್ಲ. ಗ್ರಂಥಗಳನ್ನು ಬರೆಯಬೇಕೆಂದು ಆತನು ಗ್ರಂಥಗಳನ್ನು ಬರೆಯುವುದಿಲ್ಲ. ಮತ್ತನಾದವನು ಹೇಗೆ ಲೀಲೆಯಿಂದ ನೃತ್ಯಗಾಯನಗಳನ್ನು ಮಾಡುತ್ತಿರುತ್ತಾನೋ ಹಾಗೆ ಈ ಅಪರೋಕ್ಷಜ್ಞಾನಿಯು– ಈ ವಾಙ್ಮಯಯೋಗಿಯು ಲೀಲೆಗೋಸ್ಕರ ಗ್ರಂಥಗಳನ್ನು ಬರೆಯುತ್ತಾನೆ. ಈ ತರದ ಸ್ವಾನಂದವಾಙ್ಮಯದಲ್ಲಿಯೂ ತಾರತಮ್ಯಗಳಿವೆ. ಅವುಗಳಲ್ಲಿ ಸ್ಥೂಲವಾಗಿ ಮೂರು ವಿಭಾಗಗಳನ್ನು ಮಾಡಬಹುದು. ಅವು ಯಾವವೆಂದರೆ (೧) ಸ್ವಯಂಭೂ ಅಂದರೆ ಉದ್ಭವ ಅಥವಾ ಒಡಮೂಡಿದ ವಾಙ್ಮಯ (೨) ಹೃದಯಾಕಾಶವಾಣಿಯಿಂದುದ್ಭವಿಸಿದ ವಾಙ್ಮಯ ಅಥವಾ ಆತ್ಮಪ್ರೇರಿತ ವಾಙ್ಮಯ (೩) ಮತ್ತು ಅಪೌರುಷೇಯ ವಾಙ್ಮಯ ಅಥವಾ ಪರಮಾತ್ಮಪ್ರೇರಿತ ವಾಙ್ಮಯ. ಈ ತರಹದ ಅತ್ಯಂತ ಉನ್ನತಶಿಖರಕ್ಕೇರಿದ ವಾಙ್ಮಯವು ಮೊದಲಿನ ಮೂರು ಕೋಶಗಳನ್ನು ದಾಟಿ ವಿಜ್ಞಾನ ಅಥವಾ ಆನಂದಮಯಕೋಶಗಳಲ್ಲಿ ಸೇರಿ ಆನಂದಪಡುತ್ತಿರುವವರಿಂದಲೇ ಹೊರಬೀಳುತ್ತದೆ. ಏಕೆಂದರೆ ಅಲ್ಲಿ ಒಣ ಬುದ್ಧಿಯ ಅಥವಾ ತರ್ಕದ ಆಟವು ಸಾಗುವುದಿಲ್ಲ. "ಬುದ್ಧಿ ವಿದ್ಯಾಬಲದಿ

ಪೇಳಿದ ಶುದ್ಧ ಕಾವ್ಯವಿದಲ್ಲ ತತ್ವಸುಪದ್ಧತಿಗಳನು ತಿಳಿದ ಮಾನವನಲ್ಲ ಬುಧರಿಂದ । ಮಧ್ವನಲ್ಲಭ ತಾನೆ ಹೃದಯದೊಳಿದ್ದು ನುಡಿಸುವ ತೆರದಿ ನುಡಿದೆನಪದ್ಧಗಳನು......" ಎಂದು ಜಗನ್ನಾಥರಾಯರು ಉಸುರಿದ ಉಚ್ಚವಾದ ವಾತಾವರಣದಲ್ಲಿ ನಮ್ಮ ಶರಣರ ದಾಸರ ಸಾಹಿತ್ಯವೂ 'ಭರತೇಶವೈಭವ' 'ಶೂನ್ಯಸಂಪಾದನೆ'ಗಳಂಥ ಗ್ರಂಥಗಳೂ ಹುಟ್ಟಿರುವವು.

ವಾಙ್ಮಯದಲ್ಲಿ ವಿಧಿಭಂಗ

ವಾಙ್ಮಯಲ್ಲಿ ನಾವು ಪುರಾತನರು ಹಾಕಿ ಕೊಟ್ಟ ಕಟ್ಟುಗಳನ್ನು ಎಷ್ಟರ ಮಟ್ಟಿಗೆ ಪಾಲಿಸ ಬೇಕೆಂಬ ಪ್ರಶ್ನೆಯು ಪದೇ ಪದೇ ಚರ್ಚಿಸಲ್ಪಡುತ್ತದೆ. ವ್ಯಾಕರಣಾದಿಗಳ ಕಟ್ಟನ್ನು ತಿಲಪ್ರಾಯವೂ ಸಡಲಿಸದೆ, ಅವರು ಅಂಗೀಕರಿಸಿದ ಅಪವಾದಗಳ ಕ್ಷೇತ್ರವನ್ನು ತುಸುವಾದರೂ ವಿಸ್ತಾರಗೊಳಿಸದೆ, ಅವುಗಳನ್ನು ಅಕ್ಷರಶಃ ಪಾಲಿಸಬೇಕೆಂದು ಒಂದು ಪಕ್ಷ. ಇದಕ್ಕೆ ವಿರುದ್ಧವಾಗಿ, ವ್ಯಾಕರಣ ಛಂದಸ್ಸು ಮುಂತಾದವುಗಳ ಕಟ್ಟನ್ನು ಚಟ್ಟನೆ ಕಿತ್ತೊಗೆದು ಯಥೇಚ್ಛವಾಗಿ ಸ್ವಾತಂತ್ರ್ಯಸುಖವನ್ನು ಅನುಭವಿಸ ಬೇಕೆಂಬ ಮತ್ತೊಂದು ಪಕ್ಷ. ಈ ಎರಡೂ ಪಕ್ಷಗಳು ಅಂಶತಃ ನಿಜವಿರುತ್ತವೆ. ಶಾಸನಭಂಗ ಅಥವಾ ವಿಧಿಭಂಗವನ್ನು ಮಾಡುವುದು ಪಾಪವೇನೂ ಅಲ್ಲ. ಆದರೆ, ಅದನ್ನು ಮಾಡುವವರಿಗೆ ಒಂದು ಬಗೆಯ ಅಧಿಕಾರವು ಬೇಕಾಗುತ್ತದೆ. ಅಲ್ಲದೆ ಕೊನೆಯ ಉಪಾಯವೆಂದೇ ನಾವು ಅದನ್ನು ಸ್ವೀಕರಿಸ ಬೇಕು. ಆ ತರಹದ ಅಧಿಕಾರವು ಮನೋಮಯ ಕೋಶವನ್ನು ದಾಟಿ ವಿಜ್ಞಾನ ಅಥವಾ ಆನಂದ ಮಯ ಕೋಶದಲ್ಲಿ ಇರುವವನಿಗೆ ಮಾತ್ರವೇ ಇರುತ್ತದೆ. ಅಂಥವರಿಗೆ ವಿಧಿ ಬಂಧನವಿಲ್ಲ. ಅಂಥವರು ಶಬ್ದಬ್ರಹ್ಮನನ್ನು ಅತಿವರ್ತಿಸಿದವರಾಗಿರುತ್ತಾರೆಂದರೆ ಸಲ್ಲುವುದು. ಸಾಮಾನ್ಯರು ಕಾರ್ಯಾಕಾರ್ಯ ವನ್ನು ನಿರ್ಣಯಿಸುವಾಗ ಶಾಸ್ತ್ರವನ್ನು ಪ್ರಮಾಣವಾಗಿ ಹಿಡಿದೇ ನಡೆಯಬೇಕು. ಆ ತರಹದ ಅಧಿ ಕಾರವಿಲ್ಲದೆ ಅಧಿಕಾರವಿರುತ್ತದೆಂದೂ ತಿಳಿಯುವುದು ಆತ್ಮವಂಚನೆಯು. ಸಾರಾಂಶವೇನೆಂದರೆ ಯಾವನೂ ಬುದ್ಧಿಪೂರ್ವಕವಾಗಿ ಯಾವುದೊಂದು ಉದ್ದೇಶವನ್ನಿಟ್ಟುಕೊಂಡು ವಿಧಿಭಂಗವನ್ನು ಮಾಡಲಿಕ್ಕೆ ಹೊರಡ ಬಾರದು. ಆತನು ತನ್ನ ವಿಷಯದಲ್ಲಿ ತನ್ಮಯನಾದಾಗ ವಿಧಿಭಂಗವು ತಾನಾಗಿಯೇ ಆದರೆ ಅಡ್ಡಿ ಇಲ್ಲ. ಇಂಥ ವಾಙ್ಮಯವೇ ಆದರ್ಶ ವಾಙ್ಮಯವು. ಇಂಥ ಪುರುಷರೇ ಆದರ್ಶ ಪುರುಷರು.

ವಾಙ್ಮಯದ ಅಭಿವೃದ್ಧಿಯ ಮೂಲ ತತ್ವಗಳಾವುವೆಂಬುದನ್ನು ಇಲ್ಲಿಯ ವರೆಗೆ ವಿವೇಚಿಸಿದ್ದಾ ಯಿತು. ಈ ಮೂಲ ತತ್ವಗಳನ್ನು ನಾನು ಇಷ್ಟು ವಿಸ್ತಾರವಾಗಿ ಹೇಳುವ ಕಾರಣವೇನೆಂದರೆ, ಇವು ಗಳ ಅಜ್ಞಾನದ ಮೂಲಕ ಕನ್ನಡ ವಾಙ್ಮಯದ ವಿಮರ್ಶೆಯನ್ನು ಮಾಡುವುದರಲ್ಲಿ ಅನೇಕ ತಪ್ಪು ಗಳುಂಟಾಗುತ್ತವೆ. ವಾಙ್ಮಯವೆಂದರೆ ಕೇವಲ ಭಾಷೆಯೆಂದು ಹಲವರ ತಿಳವಳಿಕೆ. ವಿಷಯಕ್ಕೆ ಇಂಥ ಜನರು ಮಹತ್ವವನ್ನು ಕೊಡದೆ ಭಾಷೆಗೆ ಮಹತ್ವವನ್ನು ಕೊಡುತ್ತಾರೆ. ಇದು ತಪ್ಪು. ಬ್ರಹ್ಮ ಸರಸ್ವತಿಯರ ಲಗ್ನವಾಗಬೇಕು. ಎಂದರೆ ವಿಷಯ ಮತ್ತು ಭಾಷೆ ಇವುಗಳ ಸಮ್ಮಿಶ್ರಣವಾಗಬೇಕು.

ಕನ್ನಡ ವಾಙ್ಮಯದ ವಿಮರ್ಶೆ

ಇನ್ನು ನಾನು ಕನ್ನಡ ವಾಙ್ಮಯದ ಭೂತ ಮತ್ತು ವರ್ತಮಾನಗಳ ಕಡೆಗೆ ಹೊರಳುತ್ತೇನೆ. ಭೂತಕಾಲದ ವಾಙ್ಮಯಕ್ಕೂ ವರ್ತಮಾನಕಾಲದ ವಾಙ್ಮಯಕ್ಕೂ ಎಂದರೆ ಹಳಗನ್ನಡಕ್ಕೂ ಹೊಸ ಗನ್ನಡಕ್ಕೂ ಅತ್ಯಂತ ಭೇದವಿರುತ್ತದೆಂಬುದನ್ನು ನಾವು ಮೊದಲು ಲಕ್ಷ್ಯದಲ್ಲಿಡಬೇಕು. ಭೂತ ಕಾಲದ ವಾಙ್ಮಯವೇ ಒಂದು ವಿಧದಿಂದ ರೂಪಾಂತರವನ್ನು ಹೊಂದುತ್ತ ಹೊಂದುತ್ತ ಈಗಿನ ಹೊಸ ಗನ್ನಡ ರೂಪವನ್ನು ತಾಳಿರುತ್ತದೆಂಬುದು ಅಂಶತಃ ನಿಜವೇನೋ ಅಹುದು. ಆದರೂ, ಕನ್ನಡದಲ್ಲಿ ಅವೆ ರಡು ತರಹದ ಭಾಷೆಗಳ ನಡುವೆ ದೊಡ್ಡದೊಂದು ಕೊನ್ನಾರವು ಬಿದ್ದಿರುವುದೆಂಬುದನ್ನು ನಾವು ಅಲ್ಲ

ಗಳೆದು ಫಲವಿಲ್ಲ. ಭೂತಕಾಲದ ವಾಙ್ಮಯದ ಮುಖ್ಯಭಾಗವು ಬಹುಶಃ ಪದ್ಯರೂಪದಲ್ಲಿ ಇರುವುದೇ ಇದಕ್ಕೆ ಕಾರಣವಾಗಿರಬಹುದು. ಅದು ಏನೇ ಇರಲಿ, ವರ್ತಮಾನ ಕಾಲದ ಗದ್ಯ ವಾಙ್ಮಯವನ್ನು ಹುಟ್ಟಿಸುವುದಕ್ಕೆ ಹಳಗನ್ನಡವು ಬಲು ಮಟ್ಟಿಗೆ ನೆರವಾಗಲಾರದೆಂದು ನನ್ನ .ಅಭಿಪ್ರಾಯ. ಇದರಿಂದ, ಹಳಗನ್ನಡವನ್ನು ನಾನು ನಿಂದಿಸುತ್ತೇನೆಂದು ತಾವು ಸರ್ವಥಾ ಭಾವಿಸಕೂಡದು. ಅದರ ಯೋಗ್ಯತೆಯನ್ನು ನಾನು ಅಲ್ಲಗಳೆಯುವುದಿಲ್ಲ. ಈಗ ನಾನು ಅದನ್ನು ಒಂದೇ ಒಂದು ದೃಷ್ಟಿಯಿಂದ ವಿಚಾರ ಮಾಡುತ್ತೇನೆ. ಅದಾವುದೆಂದರೆ ಭೂತಕಾಲದ ವಾಙ್ಮಯವು ವರ್ತಮಾನಕಾಲದ ಗದ್ಯ ವಾಙ್ಮಯವನ್ನು ಎಷ್ಟು ಮಟ್ಟಿಗೆ ವಿಕಾಸಗೊಳಿಸಬಹುದೆಂಬ ದೃಷ್ಟಿಯಿಂದ ಹಾಗೆ ವಿಚಾರ ಮಾಡಿದರೆ, ಹೊಸ ಗದ್ಯ ಶೈಲಿಗೆ ಅದು ವಿಶೇಷವಾಗಿ ಪ್ರಯೋಜನಕಾರಿಯಾಗಲಾರದು. ಹೊಸ ಗದ್ಯಶೈಲಿಯನ್ನು ನಾವು ಹೊಸತಾಗಿ ಹುಟ್ಟಿಸಬೇಕಾಗಿದೆ. ಹಳಗನ್ನಡದಲ್ಲಿಯ ಉತ್ಕೃಷ್ಟವಾದ ಮತ್ತು ಅರ್ಥಪೂರ್ಣವಾದ ಶಬ್ದಗಳು, ಶಬ್ದಸಂಯೋಜನೆಗಳು ನಮಗೆ ಉಪಯೋಗವಾಗುವವು. ಕನ್ನಡ ನುಡಿಯ ಜಾತಿ, ಕುಲಗೋತ್ರಗಳನ್ನು ನಾವು ಕಂಡುಹಿಡಿಯಬಹುದು. ಅದಕ್ಕೋಸ್ಕರ ಕೆಲವು ಪಂಡಿತರು ಹಳಗನ್ನಡದೊಳಗಿರುವ ಉತ್ಕೃಷ್ಟವಾದ ಗ್ರಂಥಗಳ ಸಾರಸರ್ವಸ್ವವೆಲ್ಲವನ್ನೂ ಹೀರಿ ಅದರ ಸಹಾಯದಿಂದ ಆ ಗ್ರಂಥಗಳನ್ನು ರಸವತ್ತಾಗಿ ಹೊಸಗನ್ನಡಕ್ಕೆ ಮಾರ್ಪಡಿಸಬೇಕು. ಹಳಗನ್ನಡವು ಕವಿಗಳಿಗೆ ಬಲು ಮಟ್ಟಿಗೆ ಸಹಾಯಕವಾಗುವದು. ಆದರೆ ಇಲ್ಲಿಯೂ ನಾವು ಒಂದು ಗಡಚಾದ ಪ್ರಶ್ನೆಯನ್ನು ಬಿಡಿಸಬೇಕಾಗಿದೆ. ಅದಾವುದೆಂದರೆ, ದಿನದಿನಕ್ಕೆ ಹೆಚ್ಚುಹೆಚ್ಚಿಗೆ ವಿಸ್ತಾರವಾಗುತ್ತ ನಡೆದಿರುವ ಹೊಸಗನ್ನಡದ ಶೈಲಿಗೆ ಹಳಗನ್ನಡದ ಪದ್ಯ ಶೈಲಿಯನ್ನು ಆದಷ್ಟು ಸಮೀಪಕ್ಕೆ ತರಬೇಕು. ನಾನೇನೂ ಕವಿಯಲ್ಲ. ಆದರೆ, ಇಷ್ಟು ಮಾತ್ರ ನಾನು ಹೇಳಬಲ್ಲೆ. ಏನೆಂದರೆ, ಕವಿಗಳ ಈ ಪ್ರಶ್ನೆಯನ್ನು ತೃಪ್ತಿಕರವಾಗಿ ಬಿಡಿಸದಿದ್ದರೆ, ವರ್ತಮಾನಕಾಲದ ಗದ್ಯಪದ್ಯಗಳಲ್ಲಿರುವ ಅಂತರವು ದಿನದಿನಕ್ಕೆ ಬೆಳೆಯುವುದು.

ವರ್ತಮಾನ ಕಾಲದ ವಾಙ್ಮಯದ ಮುಖ್ಯದೋಷವೇನೆಂದರೆ— ನಮ್ಮ ವಾಙ್ಮಯವು ಮುಂದೆ ಇಂಥದೊಂದು ವಿಶಿಷ್ಟವಾದ ಮಾರ್ಗವನ್ನು ಹಿಡಿದು ಸಾಗತಕ್ಕದ್ದಿರುತ್ತದೆಂಬ ವಿಷಯದಲ್ಲಿ ಐಕಮತ್ಯವಿಲ್ಲದಿರುವುದು. ಇದರ ಮೂಲಕ, ಮನ ಬಂದವರು ಮನಬಂದಂತೆ ಬರೆಯುತ್ತಾರೆ. ಕನ್ನಡ ನಾಡಿನಲ್ಲಿ ಜಾಗ್ರತಿಯುಂಟಾಗಿರುವುದೇ ಇದಕ್ಕೆ ಕಾರಣ. ಗ್ರಂಥಕರ್ತರೂ ಗ್ರಂಥಕರ್ತರಾಗತಕ್ಕವರೂ ಒಂದೆಡೆಗೆ ಸೇರಿ, ಗದ್ಯಪದ್ಯ ವಾಙ್ಮಯದ ಧ್ಯೇಯವನ್ನು ನಿಶ್ಚಯಿಸುವುದು ಬಹಳ ಅವಶ್ಯವಿದೆ. ಪ್ರತಿಯೊಂದು ವಿಷಯದಲ್ಲಿ ಆದರ್ಶ ಪುರುಷರು ಹುಟ್ಟಿ, ಆದರ್ಶ ಗ್ರಂಥಗಳನ್ನು ಬರೆದರೆ ಸಾಮಾನ್ಯ ಜನರು ಅವರನ್ನು ತಾವಾಗಿಯೇ ಹಿಂಬಾಲಿಸುವರೆಂಬುದು ನಿಜ. ಆದರೆ ಅಲ್ಲಿಯ ವರೆಗೆ ನಾವು ಕೆಲವು ಸಾಮಾನ್ಯ ನಿಯಮಗಳನ್ನಿಟ್ಟುಕೊಂಡು ನಡೆದರೆ ಒಳ್ಳೆಯದು.

ವಿಚಾರ ಮಾಡತಕ್ಕ ಪ್ರಶ್ನೆಗಳು

ಕನ್ನಡ ವಾಙ್ಮಯ ಭಕ್ತರು ಒಟ್ಟುಗೂಡಿ ಬಿಡಿಸತಕ್ಕ ಪ್ರಶ್ನೆಗಳು ಅನೇಕವಾಗಿವೆ. (೧) ನಾಟಕದಲ್ಲಿಯ ಭಾಷೆಯು ಎಂಥದಿರಬೇಕು ? (೨) ಪುಸ್ತಕಗಳನ್ನು, ಮಾತಾಡುವ ಪದ್ಧತಿಯಲ್ಲಿ ಮುದ್ರಿಸಬೇಕೋ ಹೇಗೆ ? (೩) ಕವಿತೆಗಳಲ್ಲಿ ಪ್ರಾಸ, ಛಂದಸ್ಸು ಇವುಗಳ ವಿಷಯವಾಗಿ ಉದ್ಭವಿಸಿದ ಮತಭೇದದ ತೊಡಕನ್ನು ಹೇಗೆ ಬಿಡಿಸಬೇಕು ? (೪) ಪ್ರೌಢ ಗ್ರಂಥಗಳಲ್ಲಿ ಸ್ತ್ರೀಯರ ಮತ್ತು ಹಳ್ಳಿಯವಾಡದವರ ಭಾಷೆಯನ್ನು ಹೇಗೆ ಉಪಯೋಗಿಸಬೇಕು ? (೫) ಅಂಕಿತನಾಮಗಳನ್ನು ಬರೆಯುವುದರಲ್ಲಿ ಏಕರೂಪತೆ. (೬) ಸಂಸ್ಕೃತ ಅವತರಣಿಕೆಗಳನ್ನು ಯಾವ ಲಿಪಿಯಲ್ಲಿ ಬರೆಯಬೇಕು ? (೭) ಶಾಸ್ತ್ರೀಯ ಪರಿಭಾಷೆಯನ್ನು ನಿಶ್ಚಯಿಸುವುದು. (೮) ವ್ಯಾಕರಣ ವಿಷಯಗಳನ್ನು ಸಿದ್ಧಪಡಿಸುವುದು; ಬರಹಕ್ಕರ

ಗಳಲ್ಲಿ ಏಕರೂಪತೆ. (೯) ನಾಮಲೇಖನದಲ್ಲಿ ಏಕರೂಪತೆ. (೧೦) ಪಠ್ಯಪುಸ್ತಕಗಳ ವಿಚಾರ. ಇವೇ ಮುಂತಾದ ವಿಷಯಗಳನ್ನು ನಾವು ಸಹಜವಾಗಿ ನಿರ್ಣಯಿಸಿ ಆಚರಣೆಯಲ್ಲಿ ತರಲಿಕ್ಕೆ ಪ್ರಯತ್ನಿಸ ಬಹುದು. ಇವಲ್ಲದೆ (೧) ಟಾಯಿಪ ರಾಯಟಿಂಗ ಯಂತ್ರಕ್ಕೆ ತಕ್ಕ ಲಿಪಿ (೨) ಮುದ್ರಣಾಲಯ ಗಳಿಗೆ ಅನುಕೂಲವಾಗುವಂತೆ ಟಾಯಿಪುಗಳಲ್ಲಿ ಬದಲಾವಣೆ (೩) ಬರಹಕ್ಕರಗಳಲ್ಲಿ ಸುಧಾರಣೆ (೪) ಲಘುಲೇಖನ ಪದ್ಧತಿ (೫) ಮಾದರಿಯ ಅಕ್ಷರಗಳ ಲೇಖನಪುಸ್ತಕವಾಲಿ. ಇವೇ ಮುಂತಾದ ಹೊಸ ಪ್ರಶ್ನೆಗಳ ವಿಷಯವಾಗಿಯೂ ವಿಚಾರವು ಅವಶ್ಯವಿದೆ.

೨ ಬಹಿರ್ವ್ಯಾಪ್ತಿ

ಇದು ವರೆಗೆ ಕನ್ನಡ ವಾಙ್ಮಯವನ್ನು ನಾನು ಅಂತರ್ದೃಷ್ಟಿಯಿಂದ ಯೋಚಿಸಿದೆನು. ಆದರೆ ವಾಙ್ಮಯದ ಪೂರ್ಣ ವಿಕಾಸಕ್ಕೆ ಇಷ್ಟೇ ಸಾಲದು. ಅದರ ವ್ಯಾಪಕತೆಯನ್ನು ಕುರಿತು ನಾವು ಯೋಚಿ ಸಲೇ ಬೇಕು. ಕರ್ನಾಟಕಕ್ಕಂತೂ ಈ ವ್ಯಾಪಕತೆಯ ಪ್ರಶ್ನೆಯ ಮಹತ್ವವು ಬಹಳವಿದೆ. ಕರ್ನಾ ಟಕವು ಎಲ್ಲ ಕಡೆಯಲ್ಲಿಯೂ ಕರಗುತ್ತ ನಡೆದಿದೆ. ನಾಲ್ಕೂ ದಿಕ್ಕುಗಳಲ್ಲಿ ನಮ್ಮ ಪ್ರದೇಶವು ಸಂಕು ಚಿತವಾಗುತ್ತ ನಡೆದಿದೆ. ಗಡಿನಾಡಿನ ಗೋಳನ್ನು ನಾವು ಆಲಿಸಬಾರದೊ ? ಕರ್ನಾಟಕವೆಂಬುದೊಂದು ಜನಾಂಗವು, ಅದಕ್ಕೆ ಒಂದೇ ಒಂದು ಶರೀರ ಮನಸ್ಸು ಮತ್ತು ಆತ್ಮಗಳಿರುತ್ತವೆಂಬ ಭಾವನೆಯು ಎಲ್ಲಿಯ ವರೆಗೆ ನಮ್ಮಲ್ಲಿ ಉತ್ಪನ್ನವಾಗಿಲ್ಲವೋ ಅಲ್ಲಿಯ ವರೆಗೆ ನಮ್ಮ ಕನ್ನಡ ನುಡಿಯ ಅಭಿವೃದ್ಧಿಯು ಭರದಿಂದ ಸಾಗಲಾರದು. ಮನುಷ್ಯನ ಬಾಯಿಯಲ್ಲಿ ನಾಲಿಗೆಯಿರುವದೇನೋ ನಿಜ ಆದರೆ ನಾಲಿಗೆಯು ಬಾಯಿಯ ಸೊತ್ತಲ್ಲ. ಕಾಲಿಗೂ ನಾಲಿಗೆಯಿರುವುದು, ಕೈಗೂ ನಾಲಿಗೆಯಿರುವುದು, ಕಿವಿಗೂ ನಾಲಿಗೆ ಯಿರುವದು, ತಲೆಗೂ ನಾಲಿಗೆಯಿರುವುದು. ಬಾಯಿಯೊಳಗಿನ ನಾಲಿಗೆಯೇ ಇವುಗಳ ನಾಲಿಗೆ. ಅದಕಾರಣ, ಅವೆಲ್ಲ ಅವಯವಗಳಲ್ಲಾಂಟಾವ ದುಃಖಗಳನ್ನು ನಾಲಿಗೆಯು ಉಸುರಲೇ ಬೇಕು. ಶರೀ ರದ ಯಾವ ಭಾಗದಲ್ಲಿಯೇ ದುಃಖವಾಗಿರಲಿ, ಅದು ನನ್ನ ದುಃಖವು ಎಂಬುವಷ್ಟು ನಮ್ಮ ಸಂವೇದನಾ ಶಕ್ತಿಯು ತೀಕ್ಷ್ಣವಾಗಬೇಕು. ಹೀಗೆ ಅದು ಈಗ ನಮ್ಮಲ್ಲಿ ಉಂಟಾಗಿರುವದೋ ? ಇಲ್ಲ. ನಾವು ಪಂಪರನ್ನರ ಉತ್ಸವಗಳನ್ನು ಮಾಡುತ್ತೇವೇನೋ ನಿಜ. ಆದರೆ ಪಂಪರನ್ನರ ವಾಸಸ್ಥಳಗಳು ಕನ್ನ ಡಿಗರ ಕೈಬಿಟ್ಟು ಹೋಗುತ್ತವೆಂಬುದರ ಅರಿವು ನಮಗಿರುವುದಿಲ್ಲ. ಇದು, ಗೋವುಗಳನ್ನು ಅನ್ಯರು ಸೆಳೆಯುತ್ತಿರುವಾಗ, ಅವುಗಳನ್ನು ಸಂರಕ್ಷಿಸಿಕೊಳ್ಳುವುದಕ್ಕೆ ತಿಲಪ್ರಾಯವೂ ಪ್ರಯತ್ನ ಪಡದೆ, ಮನೆ ಯಲ್ಲಿ ಬಂಗಾರದ ಗೋವುಗಳನ್ನು ಮಾಡಿ ಪೂಜೆಯನ್ನು ಮಾಡುತ್ತ ಕುಳಿತಂತೆ ಅಲ್ಲವೆ ?

ಗಡಿನಾಡುಗಳ ವಿಷಯವಾಗಿ ಎಂದಿಗೂ ಈ ತರಹದ ಜಗಳಗಳು ಇರತಕ್ಕವೇ. ಹಿಂದಕ್ಕೆ ತುರುಗಾಳಗಗಳಲ್ಲಿ ತುರುಗಳನ್ನು ಸಂರಕ್ಷಿಸುವದಕ್ಕೋಸ್ಕರ ವೀರಗಲಿಗಳ ಸಲುವಾಗಿ ವೀರಗಲ್ಲುಗಳು ನೆಡಿಸಲ್ಪಟ್ಟವೆ. ಈಗಿನ ದಿವಸಗಳಲ್ಲಿ, ಗಡಿನಾಡುಗಳಲ್ಲಿಯ ನಮ್ಮ ಗ್ರಾಮಗಳೆಂಬ ಗೋವುಗಳನ್ನು ಬದುಕಿಸುವ ಕಲಿಗಳು ಹುಟ್ಟಬಾರದೇ ?

ಉದಾಹರಣಾರ್ಥವಾಗಿ ಅನಂತಪುರ ಜಿಲ್ಲೆಯಲ್ಲಿಯ ಗುತ್ತಿ ಮತ್ತು ಹಿಂದೂಪೂರ ತಾಲೂಕಿ ನಲ್ಲಿಯ ೧) ಗುತ್ತಿ ೨) ಕೊನಕೊಂಡಲ ೩) ಬಿಚನಾಗಪಳ್ಳಿ ೪) ಚೌಲೂರು ೫) ಚೋಳಸಮುದ್ರ ೬) ಗೋರೇಪಲ್ಲಿ ೭) ಹಿಂದುಪೂರ ೮) ಕಗ್ಗಲ್ಲು ೯) ಕಿಡಕೇರಿ ೧೦, ಕೊಡಗೇಪಲ್ಲಿ ೧೧) ಕೊಟ್ನೂರ ೧೨) ಲೇಪಾಕ್ಷಿ ೧೩) ಮೂಗೂರ ೧೪) ಮಾನೇಪಲ್ಲಿ ೧೫) ಮಾನಸಾಂದ್ರ ೧೬) ಪರಲಿ ೧೭) ಪುಲಿ ಗುಂಟ ೧೮) ವನವೋಳು; ಕದಿರಿ ತಾಲೂಕಿನಲ್ಲಿಯ:— ೧) ಕದಿರಿ ೨) ಎರಡುಕೇರಿ ೩) ಕಂಬದೂರು ೪ ಮೊಲಕಲೇಡ; ಪೆನಗುಂಡ ತಾಲೂಕಿನಲ್ಲಿಯ:— ೧) ಬುಕ್ಕಪಟ್ಟಣ ೨) ಪೆನಗೊಂಡ ೩)ಮೆಡುಕುರ್ಲೆ ತಾಡಪತ್ರಿತಾಲೂಕ:— ೧) ತಾಡಪತ್ರಿ ಧರ್ಮಾವರ ತಾಲೂಕ:—೧) ದಾದಲೂರು

ಚಿತ್ತೂರ ಜಿಲ್ಹೆಯಲ್ಲಿ ಮದನಪಲ್ಲಿ ತಾಲೂಕಿನಲ್ಲಿ ಚಿಪ್ಪಲಿ, ಮದನಪಲ್ಲಿ, ಮಲ್ಲೆಳ, ಪೆದ್ದತಿಪ್ಪ ಸಮುದ್ರ, ಆಲೇತಿಪಳ್ಳಿ ಎಂಬವೂ ಪಲ್ಮನೇರ ತಾಲೂಕಿನಲ್ಲಿ ದಂಡಪಲ್ಲಿ ಕಳಕಟ್ಟೂರು ಎಂಬವೂ ಪಿಂಗನೂರು ತಾಲೂಕಿನಲ್ಲಿ ಚಲಮಂಗಲ, ಬುಡಿದಪಳ್ಳಿ ಎಂಬಾಡಿ, ಕರ್ಷಣಿಪಳ್ಳಿ, ಮುದುಗಲ್ಲಪಳ್ಳಿ ಮೂಗವಾಡಿ, ನೆಲ್ಲಾಳ, ಪುದುಪಟ್ಲ, ಪುಂಗನೂರು ಎಂಬ ಗ್ರಾಮಗಳೂ ಕೊಯಿಮುತ್ತೂರದ ಅವನಾಸಿ ತಾಲೂಕಿನಲ್ಲಿ ಅವನಾಸಿ ಮುಂತಾದ ಗ್ರಾಮಗಳೂ ಗೋಬಿತಟ್ಟಿಪಾಳ್ಯದಲ್ಲಿ ದಣ್ಣಾಯಕನಕೊಟ್ಟೂರು, ಶಿಪಾಳ್ಯ ಮುಂತಾದವುಗಳೂ ಕೊಳೆಗಾಲ ತಾಲೂಕೂ, ಕಡಪಾ ಜಿಲ್ಹೆಯಲ್ಲಿ ಬೆಂತಲ ಪತ್ತೂರು, ಗೋಟೂರು, ಗುರಪಾಂಡ, ಪುಷ್ಪಗಿರಿ ಜಮ್ಮಲಮಡಗು ತಾಲೂಕಿನಲ್ಲಿ ಡಾನವುಲಪಾಡ, ದೇವಗುಡಿ ಪೆದ್ದಮುದಿಯೂರು ಕಮಲಾಪುರ ತಾಲೂಕಿನಲ್ಲಿ ಚೌಡೂರು ಮುಂತಾದವುಗಳೂ ಪ್ರೊದಟೂರ ತಾಲೂಕಿನಲ್ಲಿ ರಾಮೇಶ್ವರ ತಂಗಟೂರು ಮುಂತಾದವುಗಳೂ ಇವುಗಳಲ್ಲದೇ ಸೇಲಂ ಜಿಲ್ಹೆಯಲ್ಲಿಯೂ, ಕೊಲ್ಹಾಪೂರ ಮಿರಜಿ ಮುಂತಾದ ಸಂಸ್ಥಾನಗಳಲ್ಲಿಯೂ ನೂರಾರು ಗ್ರಾಮಗಳು ಅಚ್ಚಗನ್ನಡಗ್ರಾಮಗಳಿದ್ದು ನಮ್ಮ ಔದಾಸೀನ್ಯದಿಂದ ಇವುಗಳಲ್ಲಿ ಅನೇಕ ಗ್ರಾಮಗಳು ಈಗಾಗಲೇ ನಮ್ಮ ಕೈಬಿಟ್ಟಿವೆ, ಮತ್ತು ಅನೇಕ ಗ್ರಾಮಗಳು ಕೈಬಿಟ್ಟು ಹೋಗುತ್ತಲಿವೆ, ಇದನ್ನು ಕೇಳಿ ಯಾವ ಕರ್ನಾಟಕಾಭಿಮಾನಿಯ ಹೃದಯವು ಜರ್ರನೇ ಜರಕೊಳ್ಳಲಿಕ್ಕಿಲ್ಲ !

ವಾಙ್ಮಯವನ್ನು ಬೆಳಿಸುವುದೆಂದರೆ ಉತ್ಕೃಷ್ಟವಾದ ಗ್ರಂಥಗಳನ್ನು ಬರೆದರೆ ತೀರಿತೆಂದು ಕೆಲವರ ತಿಳುವಳಿಕೆ. ಇದು ತಪ್ಪು. ಪೂಜಾರಿಯು ಪರಿವಾರಸಮೇತನಾಗಿಯೇ ಪೂಜೆಯನ್ನು ಸಾಂಗಗೊಳಿಸುವಂತೆ ನಾವು ನಮ್ಮ ಪರಿವಾರಸಮೇತರಾಗಿಯೇ ವಾಗ್ದೇವತೆಯ ಪೂಜೆಯನ್ನು ಸಾಂಗಗೊಳಿಸಬೇಕಾಗುತ್ತದೆ. ಮುದ್ರಕರು, ಪುಸ್ತಕಮಾರುವವರು, ಇವರೇ ಮುಂತಾದವರು ನಮ್ಮ ಪರಿವಾರ. ಲಘುಪುಸ್ತಕಮಾಲೆ, ಮಧ್ಯಮ ಪುಸ್ತಕಮಾಲೆ, ಉದಾತ್ತಗ್ರಂಥಮಾಲೆ ಮುಂತಾದವುಗಳನ್ನು ಹೊರಡಿಸಿ ನಾವು ವಾಙ್ಮಯದ ಪ್ರಕಾಶವನ್ನು ಮಾಡಬೇಕು. ಕರ್ನಾಟಕವನ್ನೆಲ್ಲ ವಾಚನಾಲಯಗಳ ಜಾಳಿಗೆಯಿಂದ ತುಂಬಿಬಿಡಬೇಕು. ವಾಚನಾಲಯಗಳೆಂದರೆ ಕರ್ನಾಟಕತ್ವದ ವಿದ್ಯುಚ್ಛಕ್ತಿಯನ್ನೊಯ್ಯುವ ತಂತಿಗಂಬಗಳು. ಆದರೆ ಇವೆಲ್ಲ ಕಾರ್ಯಗಳು ಜರುಗಬೇಕಾದರೆ, ನಾವು ಮುಂದೆ ಅಭಿಮಾನವನ್ನು ಜಾಗ್ರತಪಡಿಸಬೇಕು. ಅದಕ್ಕೋಸ್ಕರ ಪ್ರಚಾರಕರು ಸತತವಾಗಿ ಕರ್ನಾಟಕವನ್ನು ಸುತ್ತುತ್ತಿರಬೇಕು.

ಚತುರ್ಮುಖವಾದ ಕರ್ನಾಟಕವು ಏಕಮುಖವಾಗಬೇಕಾಗಿದೆ. ಈಗ ಅದರ ನಾಲ್ಕುಮೋರೆಗಳನ್ನು ಏಕಮುಖವಾಗಿ ಮಾಡುವುದಕ್ಕೋಸ್ಕರ ಅಖಿಲಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯವಾಗಿ ಬೇಕಾಗಿದೆ. ಈಗ ನಮ್ಮ ಪ್ರಾಂತವು ನಾಲ್ಕು ವಿಶ್ವವಿದ್ಯಾಲಯಗಳಿಗೆ ಅಧೀನವಾಗಿದೆ. ನಾಲ್ಕುಕಡೆಗೆ ನಾಲ್ಕು ತರಹದ ಪಠ್ಯಪುಸ್ತಕಗಳು, ನಾಲ್ಕುತರಹದ ಶೈಲಿಗಳು. ಈ ಪರಿಸ್ಥಿತಿಯು ಎಲ್ಲಿಯವರೆಗೆ ದೂರವಾಗಿಲ್ಲವೋ ಅಲ್ಲಿಯವರೆಗೆ ನಮ್ಮ ವಾಙ್ಮಯಕ್ಕೆ ಗಂಡಾಂತರವು ತಪ್ಪಿಲ್ಲ. ಈ ಗಂಡಾಂತರದ ಕಲ್ಪನೆಯು ನಮ್ಮ ವಾಙ್ಮಯಭಕ್ತರಲ್ಲಿ ಸಾಕಷ್ಟು ಇಲ್ಲದಿರುವುದು ಶೋಚನೀಯವಾದ ಸಂಗತಿ. ಕರ್ನಾಟಕದ ಸಂಸ್ಕೃತಿಯಲ್ಲಿ ಏಕರೂಪತೆಯುಂಟಾಗಬೇಕಾದರೆ ನಾವು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸದೆ ಗತ್ಯಂತರವಿಲ್ಲ. ಅದು ಸ್ಥಾಪಿತವಾಗುವವರೆಗೆ ನಮ್ಮ ಕನ್ನಡ ವಾಙ್ಮಯದ ಅಭಿವೃದ್ಧಿಯು ಕುಂಟುತ್ತಲೆ ಸಾಗುವುದು. ಆದುದರಿಂದ ಕನ್ನಡಿಗರೇ ಏಳಿರಿ, ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದಕ್ಕೋಸ್ಕರ ಟೊಂಕಕಟ್ಟಿರಿ. ಏಕಂದರೆ ಅದೆ ನಮ್ಮ ಸಾಹಿತ್ಯದೇವತೆಯ ಮುಖ್ಯ ಪೀಠ. ಅಖಂಡ ಕರ್ನಾಟಕವಿಶ್ವವಿದ್ಯಾಲಯವಿಲ್ಲದವರಿಗೆ ನಮ್ಮ ಸಾಹಿತ್ಯದೇವತೆ ಪದಭ್ರಷ್ಟೆ. ಆದಾದ ಮೇಲೆಯೆ ಅವಳ ಪ್ರಾಣಪ್ರತಿಷ್ಠೆ.

॥ ಜಯ ಕರ್ನಾಟಕ ಮಾತೆ ॥

ಪ್ರಪಂಚಪರಿಚಯ

ಅಭಾಗ್ಯ ಒಕ್ಕಲಿಗ ?

ಹಿಂದುಸ್ತಾನವು ಯಾವ ಶಸ್ತ್ರವನ್ನು ಹಿಡಿದು ಕಾದಿದರೆ ಬ್ರಿಟಿಶರ ದವಡೆಯೊಳಗಿಂದ ಪಾರಾಗಿ ಸಂಪೂರ್ಣ ಸ್ವತಂತ್ರವಾಗುವದು ಎಂಬುದನ್ನು ತೋರಿಸಿಕೊಟ್ಟ ಬಾರಡೋಲಿಯ **ಸರದಾರ ವಲ್ಲಭಭಾಯಿ ಪಟೇಲರು** ಹೀಗೆ ಬರೆದಿರುವರು:—

ಒಕ್ಕಲಿಗನು ಸಂಸಾರಕ್ಕೆಲ್ಲ ಅನ್ನದಾನವನ್ನು ಮಾಡುವ ದೊರೆಯು. ಅವನು ನಿರುದ್ಯೋಗಿಯಾದರೆ ಸಮಸ್ತ ಸಂಸಾರವೇ ಹಸಿವೆಯಿಂದ ಬಳಲಿ ಸಾಯುವದು. ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಆತನು ಜಗತ್ತಿನಲ್ಲೆಲ್ಲ ಪವಿತ್ರತಮನಾದ ಆತ್ಮನು. ಯಾವನಾದರೊಬ್ಬನ ಚರಿತ್ರವನ್ನು ತಿಳಿದುಕೊಳ್ಳಬೇಕಾದ ಪಕ್ಷದಲ್ಲಿ ಅವನು ತನ್ನ ಹೊಟ್ಟೆಯ ಪಾಡಿಗಾಗಿ ದುಡಿಯುತ್ತಿರುವನೋ ಅಥವಾ ಅನ್ಯರ ಅನ್ನಕ್ಕಾಗಿ ಕಾರ್ಯ ಮಾಡುತ್ತಿರುವನೋ ಎಂಬುದನ್ನು ನೋಡಬೇಕು; ಒಕ್ಕಲಿಗನು ಮಾನವಜಾತಿಯಲ್ಲಿ ಎಲ್ಲರಿಗಿಂತಲೂ ಕಡಿಮೆಯಾಗಿ ಎರಡನೆಯವರ ಮೇಲೆ ಅವಲಂಬಿಸಿರುವನು. ನಾನು ಒಕ್ಕಲಿಗರಿಗೆ **'ಬಡ ಅಭಾಗ್ಯ ಒಕ್ಕಲಿಗ'** ರೆಂದು ಅನ್ನಲು ಇಚ್ಛಿಸುವದಿಲ್ಲ. ಇಲ್ಲಿ ಪೃಥ್ವಿಯ ಮೇಲೆ ಕತ್ತನ್ನು ಎತ್ತಿಕೊಂಡು ಸಂಚರಿಸುವ ಹಕ್ಕು ಇರುವದಾದರೆ ಅದು ಒಕ್ಕಲಿಗರಿಗೆ ಮಾತ್ರ ಉಂಟು. ಅನ್ಯರಿಗಿಲ್ಲ. ಆತನು ಅನ್ಯರ ಎದುರಿಗೆ ಏಕೆ ಡೊಗ್ಗಾಲು ಊರಬೇಕು ? ಜಮೀನದಾರರೇ ಇರಲಿ ಅಥವಾ ಸರಕಾರವೇ ಇರಲಿ ಅವರೆದುರಿಗೆ ಏಕೆ ತಲೆ ಬೊಗ್ಗಿಸಬೇಕು ? ಅವನ ಎದುರಿಗೇ ಅವರೆಲ್ಲರೂ ತಲೆ ಬಾಗಿಸಿ ಸಲಾಮು ಮಾಡುವದು ಒಳಿತು. ಯಾಕಂದರೆ ಅವನ ವಿನಾ ಸರ್ವರೂ ಸ್ವರ್ಗದ ದಾರಿಯನ್ನು ಹಿಡಿಯಲಾರಂಭಿಸುವರು.

—ಯುವಕ (ಹಿಂದಿ)

ಮುಸಲ್ಮಾನ ಯುಗದ ದಾನ

ಹಿಂದೂ, ಬೌದ್ಧ, ಮುಸಲ್ಮಾನ ಹಾಗೂ ಇಂಗ್ರೇಜೀ ಆಧಿಪತ್ಯದ ನಾಲ್ಕು ಯುಗಗಳು ಪೂರ್ಣವಾಗಿ ಭಿನ್ನವಾಗಿರುವವೆಂದೂ, ಹಿಂದಿನ ಯುಗದ ಚಿನ್ಹಗಳನ್ನು ಅಳಿಸಿ ಮುಂದಿನ ಯುಗವು ನೆಲೆಗೊಂಡಿತೆಂದೂ, ಭಾರತ ರಾಷ್ಟ್ರವು ಪ್ರತ್ಯೇಕ ಯುಗದ ಕೊನೆಗೆ ಮೃತವಾಗಿ ಮತ್ತೆ ಹುಟ್ಟಿತೆಂದೂ ಸರ್ವಸಾಧಾರಣವಾಗಿ ನಾವು ಎಣಿಸಿದ್ದೇವೆ. ಆದರೆ ಇದು ಸರಿಯಲ್ಲ. ಯುಗಯುಗಗಳಲ್ಲಿಯೂ ಭಾರತದ ಅದೇ ಪ್ರಾಣವು, ಅದೇ ಜಾತೀಯ ವಿಶೇಷತ್ವವು, ಧರ್ಮದ ಭಾಷೆಯು ರಾಜರ ಹಾಗೂ ರಾಜ್ಯಪದ್ಧತಿಯ ಅನೇಕ ಪರಿವರ್ತನೆಗಳಾದರೂ ಸಜೀವವಾಗಿದ್ದು ಮುಂದೆ ಸಾಗಿದೆ. ಬಾಹ್ಯವೇಷವು ಬದಲಾಗಿದ್ದರೂ ಆತ್ಮ ವಿಸ್ಮೃತಿಯಾಗಿಲ್ಲ.

ಹಿಂದಿನ ಯುಗದ ದಾನಗಳೇನು ? ಅದರಿಂದ ಮುಂದಿನ ಯುಗಕ್ಕೆ ಆದ ಲಾಭಗಳೇನು ? ಅವುಗಳ ಸಾಮಂಜಸ್ಯವು ಹೇಗಾಯಿತು ? ಜನಸಂಘದ (Nationality) ಚಾರಿತ್ರ್ಯದ ವಿಶೇಷತ್ವ ಹಾಗೂ ಗುಣ, ಸಂಸ್ಕೃತಿ, ವಿಚಾರ ಇವುಗಳ ಕ್ರಮವಿಕಾಸವು ಹೇಗಾಯಿತು ? ಇವೆಲ್ಲವನ್ನು ವಿಮರ್ಶಿಸುವದೇ ಇತಿಹಾಸದ ಕೆಲಸವಾಗಿದೆ.

ಪ್ರವಾಸಿ (ಬಂಗಾಲೀ ಪ್ರಮುಖ ಮಾಸಿಕ ಪತ್ರಿಕೆ)ಯಲ್ಲಿ ವಿಖ್ಯಾತ ಇತಿಹಾಸಕಾರರಾದ ಸರ್ ಯದುನಾಥ ಸರಕಾರ ಇವರು ಮೇಲ್ಕಂಡ ವಿಚಾರವನ್ನು ಪ್ರದರ್ಶಿಸಿ ಮುಸಲ್ಮಾನ ಯುಗದ ದಾನದ ಬಗ್ಗೆ ಹೀಗೆ ಬರೆಯುತ್ತಾರೆ:—

ಮುಸಲ್ಮಾನ ಯುಗದಿಂದ ಹಿಂದುಸ್ಥಾನಕ್ಕೆ ಹತ್ತು ಲಾಭಗಳಾದವು. ಅವು ಇಂತು:—

(೧) ಪರದೇಶಗಳೊಡನೆ ಸಂಬಂಧವು ಸ್ಥಾಪಿತವಾಗಿ ಅವುಗಳೊಡನೆ ವ್ಯಾಪಾರವು ಪ್ರಾರಂಭವಾಯಿತು. ಭಾರತೀಯ ನೌಕಾಸೇನೆಯು (Navy) ನಿರ್ಮಿಸಲ್ಪಟ್ಟಿತು.

(೨) ಏಕಚ್ಛತ್ರ ರಾಜತ್ವದ ಮೂಲಕ ಎಲ್ಲಕಡೆಗೂ ಶಾಂತಿಯು ಹಬ್ಬಿತು. ವಿಶೇಷತಃ ವಿಂಧ್ಯಾದ್ರಿಯ ಉತ್ತರದಲ್ಲಿ.

(೩) ದೇಶದಲ್ಲಿ ಒಂದೇ ಶಾಸನ ಪದ್ಧತಿಯು ಮತ್ತು ಒಬ್ಬನೇ ರಾಜನ ಅಧಿಕಾರದ ಮೂಲಕ ಸರ್ವಸಾಧಾರಣವಾಗಿ ಜನರ ವ್ಯವಸಾಯ ಹಾಗೂ ವ್ಯಾಪಾರಗಳಲ್ಲಿ, ಬಾಹ್ಯ ಜೀವನದಲ್ಲಿ, ಸ್ವಲ್ಪ ಮಟ್ಟಿಗೆ ವಿಚಾರಧಾರೆಯಲ್ಲಿ ಸಹ ಏಕತೆಯು ಸ್ಥಾಪನೆಯಾಯಿತು.

(೪) ಉಚ್ಚಕುಲದ ಹಿಂದೂ ಮುಸಲ್ಮಾನರ ಸಾಮಾಜಿಕ ಆಚಾರವಿಚಾರಗಳಲ್ಲಿ, ಪೋಷಾಕಿನಲ್ಲಿ, ರೀತಿಯಲ್ಲಿ ಒಂದೇ ಪದ್ಧತಿಯ ಅನುಕರಣೆ,

(೫) ಮೊಗಲ ಚಿತ್ರಕಲೆಯ ಉದ್ಭವ. ಪ್ರಾಚೀನ ಹಿಂದೂ (ಅರ್ಥಾತ್ ಅಜಂತೆಯ) ಚಿತ್ರಪ್ರಣಾಲಿ (ಚಿತ್ರ ರೀತಿ) ಹಾಗೂ ಹೊಸದಾಗಿ ಮೊಗಲರೊಡನೆ ಬಂದ ಚೀನದ ಚಿತ್ರಪ್ರಣಾಲಿ ಇವೆರಡೂ ಕೂಡಿ, ಅವುಗಳ ಸಮಾವೇಶ ಹಾಗೂ ಪರಸ್ಪರ ಪ್ರತ್ಯಾಘಾತದಿಂದ ಮತ್ತೊಂದು ರಮಣೀಯವಾದ ಚಿತ್ರಕಲೆಯು ಮುಂದೆ ಬಂದಿತು. ಇದೇ ಮೊಗಲ ಚಿತ್ರಕಲೆ. ಹಿಂದೂ ವಸ್ತುವನ್ನಿಟ್ಟುಕೊಂಡು ಮೊಗಲ ಚಿತ್ರಕಲೆಯ ರೀತಿಯನ್ನನುಸರಿಸಿ ಬರೆದ ಚಿತ್ರಗಳು ರಜಪೂತ ಪದ್ಧತಿಯವು.

ವಾಸ್ತುಶಿಲ್ಪದಲ್ಲಿ ಮುಸಲ್ಮಾನಯುಗದ ಕೀರ್ತಿಯು ಅಮರವಾಗಿದೆ. ಹಿಂದೂ ರಾಜರು ಸಹ ಇದರ ಅನುಕರಣೆಯನ್ನು ಮಾಡಿರುವರು.

ಮಲಮಲ್ಲು ರತ್ನಗಂಬಳಿಗಳನ್ನು ನೇಯುವದು, ಹರಳುಗಳನ್ನು ಕೂಡಿಸುವದು, ಬಂಗಾರದ ಮುಲಮು ಮಾಡುವದು ಇವೇ ಮೊದಲಾದ ಶಿಲ್ಪಗಳು ಪ್ರಾರಂಭವಾದವು.

(೬) ಸಾಧಾರಣವಾಗಿ ವ್ಯವಹಾರಕ್ಕೆ ಉಪಯುಕ್ತವಾದ ಉರ್ದು ಭಾಷೆಯು ಪ್ರಚಾರದಲ್ಲಿ ಬಂದಿತು. ತುರ್ಕೀ ಹಾಗೂ ಪಠಾಣ ಸೈನಿಕರು ಭಾರತೀಯ ಅಂಗಡಿಕಾರರೊಡನೆ, ದೂತರೊಡನೆ, ಸೇವಕರೊಡನೆ ಈ ಭಾಷೆಯಲ್ಲಿ ಮಾತನಾಡುತ್ತಿದ್ದರು. ಫಾರಸಿಯಲ್ಲಿ ಇದಕ್ಕೆ " ಹಿಂದವೀ " ಅರ್ಥಾತ್ "ಭಾರತೀಯ" ಭಾಷೆಯೆಂದು ಹೆಸರು. ಇದಕ್ಕೆ ಈಗ ಹಿಂದುಸ್ಥಾನೀ ಎನ್ನುವನು. ದಕ್ಷಿಣದಲ್ಲಿ " ರೇಖತಾ " ಅರ್ಥಾತ್ ಪತಿತ ಅಪಭ್ರಷ್ಟ ಭಾಷೆಯೆನ್ನುವರು. ಆದರೆ ಈ ಭಾಷೆಯಲ್ಲಿ ಅನೇಕ ಶತಾಬ್ದಗಳವರೆಗೆ ಸಾಹಿತ್ಯವು ರಚಿಸಲ್ಪಡಲಿಲ್ಲ. ಫಾರಸಿ ಭಾಷೆಯೇ ರಾಜಕೀಯ ಭಾಷೆಯಾಗಿತ್ತು. ಎಲ್ಲ ಹಿಂದೂ ಮುಸಲ್ಮಾನ ಸರಕಾರೀ ನೌಕರರು, ಇಷ್ಟೇ ಅಲ್ಲ ಹಿಂದೂ ರಾಜರು ಕೂಡ ಫಾರಸೀ ಭಾಷೆಯಲ್ಲಿಯೇ ವ್ಯವಹರಿಸುತ್ತಿದ್ದರು. ಇದೂ ಒಂದು ರಾಷ್ಟ್ರೀಯ ಐಕ್ಯದ ಕಾರಣವಾಯಿತು.

(೭) ಸಂಸ್ಕೃತ ಭಾಷೆಯ ವ್ಯವಹಾರವು ಪ್ರಾಯಃ ಕಡಿಮೆಯಾಗುತ್ತ ನಡೆದದ್ದರಿಂದ, ಶಾಂತಿ ಐಶ್ವರ್ಯಗಳು ನೆಲೆಗೊಂಡಿದ್ದರಿಂದ ಹಿಂದೀ, ಬಂಗಾಲೀ, ಮರಾಠೀ ಮೊದಲಾದ ಪ್ರಾಂತೀಯ ಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿಯು ಪ್ರಾರಂಭವಾಯಿತು.

(೮) ಹಿಂದೂ ಸಮಾಜದಲ್ಲಿ ಏಕೇಶ್ವರವಾದಿ ಧರ್ಮ ಸಂಪ್ರದಾಯದ ಉದ್ಭವವಾಯಿತು. ವೈದಾಂತಿಕ ಸೂಫಿ ಧರ್ಮದ ಪ್ರಚಾರವಾಯಿತು.

(೯. ಇತಿಹಾಸವನ್ನು ಬರೆಯುವ ಪದ್ಧತಿಯು ಪ್ರಾರಂಭವಾಯಿತು. ಈ ಮೊದಲು ಈ ವಿಷಯದ ಕಡೆಗೆ ಹಿಂದುಗಳು ಲಕ್ಷ್ಯಕೊಟ್ಟದ್ದಿಲ್ಲ. ಈ ಕಾಲಕ್ಕಿಂತ ಮೊದಲೂ ಬರೆದ ಇತಿಹಾಸಗಳು ಅತಿಶಯೋಕ್ತಿಯಿಂದ ಕೂಡಿವೆ. ಅವುಗಳಿಗೆ ಪುರಾಣವೆಂದರೇ ಸಲ್ಲುವದು.

(೧೦) ಯುದ್ಧವಿದ್ಯೆಯ ಹಾಗೂ ಸಭ್ಯತೆಯ (Civilisation) ಅನೇಕ ಅಂಗಗಳಲ್ಲಿ ಉನ್ನತಿಯಾಯಿತು.

—ಪ್ರಬಾಸಿ (ಬಂಗಾಲಿ)

ವೈವಾಹಿಕ ಜೀವನವು ಹೇಗೆ ಸುಖಕರವಾದೀತು ?

೧ ಪರಸ್ಪರರಲ್ಲಿ ಸಹಾನುಭೂತಿಯು ಬೇಕು

ಸಿರಿವಂತರಿದ್ದು ಹೆಂಡತಿಗೆ ಪುರಾಣಕ್ಕೂ ಕೂಡ ಒಂದು ಬಿಲ್ಲಿಯನ್ನು ಕೊಡದ, ಹೆಂಡತಿ ಮಾಡಿದ ಒಳ್ಳೆ ಮನೆಯೂಟವನ್ನು ಬಿಟ್ಟು ಹಾಟೇಲುಗಳಲ್ಲಿ ನಾಲಗೆ ತಿಂಡಿಗಾಗಿ ಹೋಗುವ ಗಂಡಸರು ಹಲವರಿದ್ದಾರೆ.

ಹೆಂಡತಿಯು ತನ್ನ ಸುಖೋಪಭೋಗಗಳನ್ನು ಹೆಚ್ಚಿಸುವ ಒಂದು ವಸ್ತುವೆಂದೇ ಈ ಜನರ ಭಾವನೆ. ಹೆಂಗುಸರಿಗೂ ಒಂದು ವ್ಯಕ್ತಿತ್ವವಿದೆಯೆಂಬ ಅರಿವು ಕೂಡ ಇವರಿಗಿರುವದಿಲ್ಲ.

ರಾತ್ರಿಶಾಲೆಗಳನ್ನು ಆರಂಭಿಸಿ ಅಥವಾ ಬೇರಿನ್ನಾವ ಹಲವು ಬಗೆಗಳಿಂದ ಜನಾಂಗದ ಸುಧಾರಣೆಯನ್ನು ಮಾಡಲು ಯತ್ನಿಸಿ ಕೀರ್ತಿ ಪ್ರಸಿದ್ಧಿಗಳನ್ನು ಬಯಸುವವರು ಮೊದಲು ತಮ್ಮ ಹೆಂಡಂದಿರಿಗೆ ಕಲಿಸಿ ಸುಶಿಕ್ಷಿತರನ್ನಾಗಿ ಮಾಡುವುದು ಹೆಚ್ಚು ಫಲದಾಯಕವಾಗಿದೆ.

೨ ಮನಬಿಚ್ಚಿ ಮಾತುಕಥೆ

ಪರಸ್ಪರರು ತಮ್ಮ ತಮ್ಮ ಅಂತಃಕರಣದೊಳಗಿನ ವಿಚಾರಗಳನ್ನು ಮನಸು ಬಿಚ್ಚಿ ಹೇಳಿ ಕೇಳಿದರೆ ಸಂಸಾರವು ಎಷ್ಟೋ ಸುಖಕರವಾಗುವುದು.

೩ ಧೈರ್ಯ ಹೇಳಿ ಉತ್ತೇಜನ ಕೊಡುವುದು

ಸಂಸಾರದಲ್ಲಿ ಅವಶ್ಯವಿದೆ. ೪ ಅದರಂತೆ ಹೆಂಡತಿಯು ಗಂಡನ ನಡೆವಳಿಕೆಯ ನಿರೀಕ್ಷಣೆಯನ್ನೂ ಅಗತ್ಯವಾಗಿ ಮಾಡು

ತ್ತಿರಬೇಕು. ೫ ಮತ್ತು ಹೆಂಡಂದಿರು ಮಿತವ್ಯಯದಿಂದ ಶಕ್ಯವಿದ್ದಲ್ಲಿ ದುಡ್ಡು ಉಳಿಸಿ, ಯೋಗ್ಯ ಕೆಲಸಕ್ಕೆ ಅದನ್ನು ಇಸಿದುಕೊಳ್ಳಬೇಕು. ೬ ಸಂಸಾರವು ಸುಖಕರವಾಗಲಿಕ್ಕೆ ಗಂಡ ಹೆಂಡಿರಿಬ್ಬರೂ ಸುಸಂಸ್ಕೃತರಾಗಿರಬೇಕು. ಜಗತ್ತಿನ ಸ್ಥಿತಿಗತಿಯ ಜ್ಞಾನವುಳ್ಳವರಿರಬೇಕು. ಉಚ್ಚವಿಚಾರ, ಉದಾತ್ತ ಧ್ಯೇಯದ ವಾತಾವರಣದಲ್ಲಿ ಉಸುರಾಡಿಸುತ್ತಿರಬೇಕು.

—'ಸ್ತ್ರೀ' (ಮರಾಠಿ)

ಹಿಂದಿನ ಕಾಲದ 'ಶುದ್ಧಿ' ಚಳವಳಿ

ಈಲಿಯಟ ಮತ್ತು ಡಾಸನ್ ಎಂಬ ಲೇಖಕರು ಬರೆದುದೇನೆಂದರೆ, ಸಿಂಧಪ್ರಾಂತದಲ್ಲಿ ಅನೆಯ ಶತಮಾನದಲ್ಲಿ ಮುಹಮ್ಮದೀ ಧರ್ಮಕ್ಕೆ ಇಳಿಗಾಲವು ಪ್ರಾಪ್ತವಾಗಿ ಅಲ್ಲಿಯ ಮುಸಲ್ಮಾನರೆಲ್ಲ ಮತ್ತೆ ಮೂರ್ತಿ ಪೂಜಕರಾದರು. ಅಲ್ ಉತಬಿ ಎಂಬ ಇನ್ನೊಬ್ಬ ಲೇಖಕನು ತಾನು ಬರೆದ ಗಝನಿ ಮಹಮ್ಮದನ ಚರಿತ್ರೆಯಲ್ಲಿ ಬಹಳ ಮೋಜಿನ ಒಂದು ಪ್ರಸಂಗವನ್ನು ವರ್ಣಿಸಿದ್ದಾನೆ. ನವಾಸ ಶಹಾ ಎಂಬ ಮಾಂಡಲಿಕನನ್ನು ಮುಸಲ್ಮಾನಿ ಧರ್ಮವನ್ನು ಸ್ವೀಕರಿಸಿದ್ದಕ್ಕಾಗಿ ಗಝನಿ ಮಹಮ್ಮದನು ಒಂದು ಜಿಲ್ಲಾಧಿಕಾರಿಯನ್ನಾಗಿ ಮಾಡಿದನು. ಆದರೆ "ನವಾಸ ಶಹನಿಗೆ ಮತ್ತೆ ಸೈತಾನಿ ಬುದ್ಧಿಯುಂಟಾಗಿ, ಹಲವು ದೇವರ ಪೂಜೆಯ ಮಡುವಿನ ಕಡೆಗೆ ಓಡತೊಡಗಿದನು. ಇಸ್ಲಾಮಿ ಧರ್ಮವನ್ನು ತ್ಯಜಿಸುವದಕ್ಕಾಗಿ ಮೂರ್ತಿಪೂಜಕರ ಧರ್ಮ ಗುರುಗಳೊಡನೆ ಸಂಧಾನವನ್ನು ನಡೆಸುತ್ತಲೆ ಗಿಝನಿಯು ಬಂದು ಆತನನ್ನು ಪಟ್ಟದಿಂದ ತಳ್ಳಿದನು.

ಈ ವಿಷಯಕ್ಕೆ ಅಲ್ಬರುನಿಯು ಬರೆಯುವದೇನಂದರೆ, ಮುಸಲ್ಮಾನ ದೇಶಗಳಲ್ಲಿ ಗುಲಾಮರಾಗಿ ಮಾರಲ್ಪಟ್ಟ ಹಿಂದೂ ಜನರು ಏನಾದರೂ ಯುಕ್ತಿಪ್ರಯುಕ್ತಿಗಳಿಂದ ಮರಳಿ ಬಂದರೆ ಅವರನ್ನು ಹಿಂದೂ ಜನರು ತಮ್ಮ ಧರ್ಮದಲ್ಲಿ ತಕ್ಕೊಳ್ಳುತ್ತಿದ್ದರು. ಮರಳಿ ಬಂದವರನ್ನು ಕೆಲದಿನ ಗೋಮಯದಲ್ಲಿ ಕುಳ್ಳಿರಿಸುತ್ತಿದ್ದರು! ಬಳಿಕ ಗೋಮೂತ್ರದಿಂದ ಶುದ್ಧೀ ಕರಿಸಿಕೊಳ್ಳುತ್ತಿದ್ದರು. ಆದರೆ ಅಲ್ಬರುನಿಗೆ ಈಬಗ್ಗೆ ಸಂಶಯವುಂಟಾಗಿ ಕೆಲ ಬ್ರಾಹ್ಮಣರನ್ನು ಕೇಳಲಾಗಿ ಅವರು ಮುಸಲ್ಮಾನನಾದವನಿಗೆ ಪ್ರಾಯಶ್ಚಿತ್ತವೇ ಇಲ್ಲವೆಂದರು.

ಆಗಿನ ಕಾಲದಲ್ಲಿ ಅಂತಜ್ಞಾತಿ ವಿವಾಹಗಳೂ ರೂಢವಾಗಿದ್ದವು. ಕಾಶ್ಮೀರಿನ ಗೋವಿಂದ ಮನೆತನದ ಕೊನೆಯ ರಾಜನು ತನ್ನ ತಂಗಿಯನ್ನು ಒಬ್ಬ ಕಾಯಸ್ಥನಿಗೆ ಕೊಟ್ಟನು. (ರಾಜ ತರಂಗಿಣಿ ೪,೪೮೯). ಬಾಣಕವಿಯ ತಂದೆಯು ಒಬ್ಬ ಶೂದ್ರ ಸ್ತ್ರೀಯನ್ನು ಮದುವೆಯಾಗಿದ್ದನು. ಬಾಣಕವಿಯ ಬ್ರಾಹ್ಮಣ ತಾಯಿ ಮತ್ತು ಶೂದ್ರ ತಾಯಂದಿರಿಬ್ಬರೂ ಒಂದೆಡೆಗೇ ಇರುತ್ತಿದ್ದರೆಂದೂ ತಿಳಿದು ಬರುತ್ತದೆ. (ಹರ್ಷಚರಿತ್ರ ದ್ವಿತೀಯ ಉಚ್ಛ್ವಾಸ). ಪ್ರತಿಹಾರಬಾಹುಕನು ಬ್ರಾಹ್ಮಣ ಮತ್ತು ಕ್ಷತ್ರಿಯ ಕನ್ನಿಕೆಯರಿಬ್ಬರನ್ನೂ ಕೈಹಿಡಿದಿದ್ದನು. (J. R. S. 1894) ಇಂತಹ ಇನ್ನೂ ಹಲವು ಉಲ್ಲೇಖಗಳುಂಟು.

—ಭಾ. ಇ. ಸಂ. ಮಂಡಲ ಪತ್ರಿಕೆ. (ಮರಾಠಿ)

ಆದರ್ಶಭೂತವಾದ ಒಂದು ಚಿಕ್ಕಮಕ್ಕಳ ಕಲಾಶಾಲೆ

ಶ್ರೀ. ಡಿ. ಬಿ. ಕರ್ವೆ. B. Sc. M. Ed. (ಲೀಡ್ಸ) ಎಂಬವರು ಬರೆದುದರ ಮುಖ್ಯಾಂಶಗಳು ಹೀಗಿವೆ:—

ಪ್ರೊ. ಸೆಝೆಕ್ ಎಂಬವರು ೧೮೯೬ರಲ್ಲಿ ವಿಯನ್ನಾ ಪಟ್ಟಣದಲ್ಲಿ ಚಿಕ್ಕಮಕ್ಕಳಿಗಾಗಿ ಒಂದು ಕಲಾಶಾಲೆಯನ್ನು ಸ್ಥಾಪಿಸಿದರು. ಇಲ್ಲಿ ಮಕ್ಕಳಿಗೆ ಚಿತ್ರಗಳನ್ನು ಹಾಗೆ ಬರೆಯಿರಿ, ಹೀಗೆ ಬರೆಯಿರಿ ಎಂದು ಏನೂ ಹೇಳುವದಿಲ್ಲ. ಮಕ್ಕಳಲ್ಲಿರುವ ಸಹಜ ಸ್ವಾಭಾವಿಕವಾದ ಕಲಾಶಕ್ತಿಯು ವಿಕಾಸವಾಗುವದಕ್ಕೆ ಆ ವಿದ್ಯಾರ್ಥಿಗಳು ಬಂದು ತಾವಾಗಿ ಕೇಳಿದಾಗ ನೆರವಾಗುವದಷ್ಟೇ ತಮ್ಮ ಕರ್ತವ್ಯವೆಂದು ಶಿಕ್ಷಕರು ತಿಳಿಯುತ್ತಾರೆ. ಇಲ್ಲಿ ೫ ವರುಷದ ಚಿಕ್ಕಮಗುವಿಗೂ ಪ್ರವೇಶವಿದೆ. ೫ರಿಂದ ೯, ಮತ್ತು ೯ರಿಂದ ೧೪ ವಯಸ್ಸಿನ ಮಕ್ಕಳ ಎರಡು ವಿಭಾಗಗಳುಂಟು. ವಾರಕ್ಕೆ ನಾಲ್ಕು ತಾಸುಮಾತ್ರ ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಯಲಿಕ್ಕೆ ಬರುವನು.

ಚಿಕ್ಕಮಕ್ಕಳು ಕೈಯಲ್ಲಿ ದೊರೆತುದನ್ನು ತಕ್ಕೊಂಡು ಗೀಚಲಾರಂಭಿಸುವರು; ಇದೇ ಇವರ ಚಿತ್ರಕಲೆಯ ಮೊದಲನೆಯ ಪಾಠ; ಈ ಬಗೆಯಲ್ಲಿ ತೆಗೆದ ಮಕ್ಕಳ ಚಿತ್ರಗಳನ್ನು ಹಿರಿಯರ ಚಿತ್ರಗಳಿಗೆ ಸರಿಹೋಲಿಸಿ ಪರಿಕಿಸಲಾಗದು. ಈಗಿನ, ಅರ್ಥವಿಹೀನ ಕಲಾಸಾಂಪ್ರದಾಯಗಳಲ್ಲಿ ಜೀವವು ಇಲ್ಲದಾಗಿದೆ. ಆದುದರಿಂದ ಚಿಕ್ಕಮಕ್ಕಳಿಗೆ ಅನುಕರಿಸಲಿಕ್ಕೊಂದು ಪ್ರಾಚೀನ

ಅಥವಾ ಅರ್ವಾಚೀನ ಅದಾವ ಪ್ರಸಿದ್ಧ ಚಿತ್ರಕಾರನ ಚಿತ್ರಗಳನ್ನು ತೋರಿಸುವದಿಲ್ಲ. ಶಾಲೆಯಲ್ಲಿ ಆ ಬಗೆಯ ಮಾದರಿಯ ಚಿತ್ರಗಳನ್ನು ತೂಗುಬಿಟ್ಟಿಲ್ಲ. ಹುಡುಗರು ತಮ್ಮಷ್ಟಕ್ಕೆ ತಾವೇ ತಮ್ಮ ಸಾಂಪ್ರದಾಯವನ್ನು-ಪದ್ಧತಿಯನ್ನು ಹುಡುಕಿಕೊಳ್ಳುವರು. ಈ ತೆರನಾಗಿ ಬರೆದ ಚಿತ್ರಗಳು ನಿಜವಾಗಿಯೂ ಬಹಳ ಮನೋಹರವಾಗಿವೆ. ಹುಡುಗರಿಗೆ ಶಾಲೆಗೆ ಬಂದೊಡನೆ ಅವರಿಗೆ ಬಣ್ಣ, ಕಾಗದ, ಪೆನ್ಸಿಲು, ಕುಂಚ ಮೊದಲಾದುದೆಲ್ಲವೂ ಬೇಡಿದಂತೆ ಕೊಡಲ್ಪಡುವುದು. • ವಿದ್ಯಾರ್ಥಿಗಳು ಸೃಷ್ಟಿನಿರೀಕ್ಷಣೆಯಿಂದ ತಮ್ಮ ಚಿತ್ರಗಳನ್ನು ತಾವೇ ಬರೆಯುವರು.

ಈ ಶಾಲೆಯು ವಿದ್ಯಾರ್ಥಿಗಳು ಚಿತ್ರಕಾರರಾಗಬೇಕೆಂದು ಸೆಜೆಕರ ಅಭಿಪ್ರಾಯವಿಲ್ಲ. ಸೌಂದರ್ಯೋಪಾಸಕರಾಗಿ ರಸಿಕತನದಿಂದ ಜಗತ್ತನ್ನು ಅರಿಯುವ ಶಕ್ತಿ ಬಂದರಾಯಿತು. ಈಗಿನ ಅನೇಕ ನಿಯಮಬದ್ಧವಾದ 'ಶಾಸ್ತ್ರೀಯ' ಚಿತ್ರಕಲೆಯಿಂದ ಸೃಷ್ಟಿಸೌಂದರ್ಯವನ್ನು ಅರಿತುಕೊಳ್ಳುವ ಶಕ್ತಿಯೆ ನಷ್ಟವಾಗಿದೆ. ಈ ದೋಷವನ್ನು ದೂರಮಾಡುವುದೇ ಈ ಶಾಲೆಯ ಉದ್ದೇಶವು.

—ಪ್ರೊಗ್ರೆಸ್ ಆಫ್ ಎಜ್ಯುಕೇಶನ್

ಕರುಳಿನೊಳಗೆ ಉಳಿವ ಸಿಲುಕು

ಅಮೇರಿಕೆಯು ಸರ್ ಲೇನ ಎಂಬವನು ಈ ಬಗ್ಗೆ ಹೀಗೆ ಹೇಳಿದ್ದಾನೆ—"ಪ್ರಾಚೀನ ಕಾಲದ ಸಮರ್ಥವಾದ ಜನಾಂಗಗಳು ಹಣ್ಣು ಹಾಲುಗಳ ಮೇಲೆಯೇ ಸಂಪೂರ್ಣವಾಗಿ ಜೀವಿಸುತ್ತಿದ್ದುದರಿಂದ ಅವರಿಗೆ ಕರುಳಿನ ಬೇನೆಯ ವಿಕಾರಗಳೇ ಇದ್ದಿಲ್ಲ. ಊಟವಾದೊಡನೆ ಬಹಿರ್ದಶೆಗೂ ಆಗಿ ಕರುಳುಗಳು ಸ್ವಚ್ಛವಾಗಿ ಉಳಿಯುತ್ತಿದ್ದುವು. ಅದರಿಂದ ಈಗಿನ ಸುಸಂಸ್ಕೃತರಿಗೆ ಆಗುವ ಬೇನೆಗಳಿಂದ ಅವರು ದೂರವಿದ್ದರು. ಈಗಿನ ತಾಯಂದಿರ ಹಾಲಿನಲ್ಲಿಯೆ ಕೆಲವೊಂದು ಅವಶ್ಯಕ ದ್ರವ್ಯಗಳು ಕಡಿಮೆಯಾಗಿರುವುದುರಿಂದ ಚಿಕ್ಕಮಕ್ಕಳ ಕರುಳಿನೊಳಗಿನ ಹೊಲಸು ಹೊರಬೀಳುವ ಶಕ್ತಿಯೂ ಕುಂದಿದೆ. ಅದರಿಂದ ಹೊಲಸು ಕರುಳಿನೊಳಗೇ ಉಳಿಯುವುದು. ಅವ್ಯವಸ್ಥಿತವಾಗಿ ಆಗೊಮ್ಮೆ ಈಗೊಮ್ಮೆ ಹೊರಬೀಳುವುದು. ಅಂತೂ ಇಂತೂ ಮಗುವಿಗೆ ದಿನಕ್ಕೆ ಒಂದು ಸಲವಾದರೂ ಶೌಚಕ್ಕೆ ಆಗುವಂತೆ ಕಲಿಸಲಾಗುವುದು. ಆಹಾರ ಪದಾರ್ಥಗಳನ್ನು ಅಡಕವಾಗಿಟ್ಟುಕೊಳ್ಳುವುದಕ್ಕಾಗಿ ಇರುವ ದೊಡ್ಡ ಕರುಳಿಗೆ ಈ ಸಿಲುಕುಳಿದ ಹೊಲಸನ್ನು ಹೊರುವ ಕೆಲಸವನ್ನೆ ಮಾಡಬೇಕಾಗುವುದು. ಈ ಬಗೆಯಾಗಿ ಸಿಲುಕುಳಿವ ಹೊಲಸಿನಿಂದ ಅನೇಕಾನೇಕ ರೋಗಗಳು— ಕರುಳಿನ ಬೇನೆಗಳು— ಹುಟ್ಟುವುದು ಸಹಜ.

—ಲಾನ್ಸೆಟ್ (ಅಮೇರಿಕಾ)

ಅಮೇರಿಕದ ಅದ್ಭುತ ಕಟ್ಟಡಗಳು

ನ್ಯೂಯಾರ್ಕಿನಲ್ಲಿ ಕ್ಲೆಸ್ಲರ ಕಟ್ಟಡವು ಈ ಕಳೆದ ಅಗೋಸ್ಟಿನಲ್ಲಿ ಕಟ್ಟಲ್ಪಟ್ಟಿದೆ. ಇದರಲ್ಲಿ ೬೮ ಅಂತಸ್ತುಗಳು. ಸಣ್ಣ ಪಟ್ಟಣದಲ್ಲಿರುವಷ್ಟು ಜನರು ಇದರಲ್ಲಿ ವಾಸಮಾಡಬಹುದು. ಸದ್ಯದಲ್ಲಿ ೮೫ ಅಂತಸ್ತುಗಳಿರುವ ಎಂಪಾಯರ್ ಬ್ಯಾಂಕಿನ ಕಟ್ಟಡವು ಅದೇ ಪಟ್ಟಣದಲ್ಲಿ ಸದ್ಯಕ್ಕೆ ಕಟ್ಟಲ್ಪಡುವದು.

"ಹಿಂದೂ ಪತ್ರಿಕೆ"

ಸಾಹಿತ್ಯಲೋಕ

ಕರ್ನಾಟಕ ವೀರ ರತ್ನಗಳು: – ಕರ್ನಾಟಕ ಗತ ವೈಭವವನ್ನು ಕನ್ನಡಿಗರ ಕಣ್ಣೆದಿರಿಗಿಟ್ಟು ತಾಯ್ನಾಡಿನ ತೀರ್ಥ ಸ್ವರೂಪವನ್ನು ಬೆಳಕಿಗೆ ತಂದ ಮೊದಲನೆಯ ಮನ್ನಣೆಯ ಮೀಸಲನ್ನುಂಡ ಶ್ರೀ ಆಲೂರ ವೆಂಕಟರಾಯರನ್ನು ಅರಿಯದ ಕನ್ನಡಿಗರುಂಟೆ ! ಕತ್ತಲುಗವಿದಿದ್ದ ಕನ್ನಡ ಸಾಹಿತ್ಯದಲ್ಲಿ ದೀವಳಿಗೆಯ ದೀಪಾವಳಿಯನ್ನು ನೋಡಬಯಸಿ ಅದಕ್ಕಾಗಿ ಹಗಲಿರುಳೂ ಹೆಣಗುತ್ತ ಬಂದ ಇವರ ಹರಕೆ ಇಂದಿಗೆ ಕೈಗೂಡುತ್ತಲಿದ್ದುದನ್ನು ಕಣ್ಗಂಡ ಇವರ ವೃದ್ಧಾತ್ಮವು ಇಮ್ಮಡಿ ನಾಲ್ಮಡಿ ನೂರ್ಮಡಿ ಹುರುಪಿನಿಂದ ಕನ್ನಡ ಮರಿಯಾನೆಗಳ ಮುಂದೆ ತಮ್ಮ ಪೂರ್ವಿಕರ ಬೀರ ಸಿರಿಯನ್ನು ಕತೆಮಾಡಿ ಬಣ್ಣಿಸುವುದಕ್ಕೆ ತೋಳು ಚಪ್ಪರಿಸಿ ಮುಂದೆ ಬಂದು ನಿಂತಿರುವುದನ್ನು ನೆನೆದರೆ ಹೆಣವು ಕೂಡ ಕುಣಿಯಬೇಕು !

ಮೇಲೆ ಕಾಣಿಸಿದ ಇವರ ಪುಸ್ತಕದಲ್ಲಿ ಧುರಧೀರನಾದ ಧ್ರುವ, ನಿಜ ಭುಜ ಚಕ್ರವರ್ತಿಯಾದ ಮೂರ್ಮಡಿ ತೈಲಪ, ಚಕ್ರೇಶ್ವರ ಚೂಡಾಮಣಿಯಾದ ಚಾಲುಕ್ಯ ವಿಕ್ರಮ, ರಣರಂಗ ಸಿಂಗನಾದ ಕುಮಾರ ರಾಮ, ರಣಭೈರವಿಯಾದ ಅಕ್ಕಾದೇವಿ, ಇವರೇ ಮೊದಲಾದ ಇಪ್ಪತ್ತೊಂದು ವೀರ ರತ್ನಗಳ ಬೆಳಕು ಬಿತ್ತರಿಸಿದೆ. ಪ್ರತಿಯೊಬ್ಬ ಕನ್ನಡಿಗನೂ ತನ್ನ ಪೂರ್ವಿಕರ ಈ ಯಶೋಗೀತವನ್ನು ಆಲಿಸುವುದಕ್ಕೆ ತವಕಿಸಬೇಕು. ಇದರಲ್ಲಿ ಇತಿಹಾಸವಿದೆ, ಕಥೆಯಿದೆ, ಕಥಾಸಾಮಗ್ರಿಯಿದೆ. ಬೇಕಾದವರು ಕಂಡುಂಡು ತಣಿಯಲಿ.

ಇದರಲ್ಲಿಯ ಒಂದು ಹೊಸ ಮಾತೇನೆಂದರೆ ಕನ್ನಡದಲ್ಲಿ ವೀರಭಾಷೆಯನ್ನು ಹುಟ್ಟಿಸುವುದಕ್ಕೆ ವೀರ ಕನ್ನಡಿಗರ ಕಾಲದ ಬೀರನುಡಿಗಳನ್ನು ಬಳಕೆಯಲ್ಲಿ ತರುವುದಕ್ಕೆ ಲೇಖಕರು ಹಿರಿದಾಗಿ ಹವಣಿಸಿದ್ದಾರೆ. ಈ ಹವಣಿಕೆಯು ಇದರಲ್ಲಿ ಸಂಪೂರ್ಣವಾಗಿ ಸಾಧಿಸಿರದಿದ್ದರೂ ಮುಂದಿನವರಿಗೆ ಸಾಧಿಸಿಕೊಳ್ಳುವುದಕ್ಕೆ ಹಾದಿಹಾಕಿ ಕೊಟ್ಟಂತಾಗಿದೆ. ಪ್ರಾಚೀನ ವೀರಶಾಸನಗಳಲ್ಲಿ ಕಂಡುಬರುವ ವೀರ ಶಬ್ದಗಳನ್ನಷ್ಟೇ ಇದರಲ್ಲಿ ಸೇರಿಸಿಕೊಂಡಿರುವ ಈ ಲೇಖಕರು ಜೈಮಿನಿ ಭಾರತದೊಳಗಿನ–ಹೆದರಿತು, ಕೆದರಿತು, ಬೆದರಿತು, ಒದರಿತು, ಉದುರಿತು, ಕದಡಿತು, ಕದಲಿತು, ಹುದುಗಿತು, ಹದಗಿತು, ಕವಿದು, ತಿವಿದು, ಹಾರಿ, ತೂರಿ, ಏರಿ, ಚೀರಿ, ಸವರಿ, ಜಡಿದು, ಜಗ್ಗಿ, ನುಗ್ಗಿ, ಮುಂತಾದ ನಡುವಣ ಕಾಲದ ಸಹಜ ಶಬ್ದಗಳನ್ನು ಬಳಸಿಕೊಂಡಿದ್ದರೆ ಭಾಷೆಯಲ್ಲಿ ವೀರದ ಬಿಗಿತವು ಇನ್ನೂ ಹೆಚ್ಚಬಹುದಾಗಿತ್ತು. ಮುಂದಿನ ಮುದ್ರಣದಲ್ಲಿಯಾದರೂ ಹೀಗೇ ಮಾಡಿಯಾರೆಂದು ಆಶೆ.

ಕಥೆಗಳ ಸಂಗ್ರಹವೆಂದ ಬಳಿಕ ವಿವಿಧತೆಯು ಬೇಕೇ ಬೇಕು. ಆದರೆ ಲೇಖಕರಿಗೆ ಈ ವಿಷಯದಲ್ಲಿಯೂ ತುಸು ಅವಸರವಾಗದೆ ಬಿಟ್ಟಿಲ್ಲ. ಪ್ರಸ್ತುತ ಪುಸ್ತಕದಲ್ಲಿ ವೈರಿರಾಜರನ್ನು ಸದೆಬಡಿಯುವದಕ್ಕಿಂತ ಹೆಚ್ಚಿನ ವಿವಿಧ ಚಮತ್ಕೃತಿಗಳಿಲ್ಲದ ಕತೆಗಳೇ ಮುಕ್ಕಾಲು ಮೂರು ಪಾಲಿಗಿರುವದರಿಂದ ಕೊನೆಕೊನೆಯ ಭಾಗಕ್ಕೆ ಓದುತ್ತ ಬಂದಂತೆ ತುಸು ಬೇಸರಾಗುತ್ತದೆ. ಚಾಲುಕ್ಯ, ರಾಷ್ಟ್ರಕೂಟ, ಗಂಗ, ಹೊಯಿಸಳರ ಕತೆಗಳನ್ನೋದಿ ತದ್ರೂಪವಾಗಿ ಅವುಗಳಂತೆ ಇರುವ ವಿಜಯನಗರದವರ ಕಥೆಗಳನ್ನು ಓದಲಿಕ್ಕೆ ಜೀವಕ್ಕೆ ಒಲ್ಲೆನಿಸುತ್ತದೆ. ವಾಸ್ತವಿಕವೆಂದರೆ ವಿಜಯನಗರದ ಇತಿಹಾಸವು ಅರ್ವಾಚೀನವಾಗಿರುವದರಿಂದ ನಮಗೆ ಸಮೀಪದ್ದೆನಿಸಿ ಹೆಚ್ಚು ಅಭಿಮಾನವುಂಟಾಗಬೇಕು.

ಕುವರಲಕ್ಷ್ಮ, ಕುಮಾರರಾಮ, ಹೊಯ್ಸಳ, ಅಕ್ಕಾದೇವಿ, ಓಬವ್ವ ಮುಂತಾದವರ ಕತೆಗಳು ಈ ಪುಸ್ತಕದಲ್ಲಿ ವಿವಿಧತೆಯನ್ನು ವಿಶೇಷವಾಗಿ ಅಲಂಕರಿಸಿವೆ. ಇವುಗಳ ಜೊತೆಗೆ ಬೆಳವಡಿಯ ಮಲ್ಲಮ್ಮ, ಕಿತ್ತೂರ ಚನ್ನಮ್ಮ ಮುಂತಾದ ವಿಖ್ಯಾತ ವೀರಮಹಿಳೆಯರ ಕಥೆಗಳು ಸೇರಿದ್ದರೆ ಹೆಚ್ಚು ಸೊಗಸಾಗುತ್ತಿತ್ತು.

ಲೇಖಕರು ಪುಸ್ತಕದ ಕೊನೆಗೆ ಸುಮಾರು ನೂರಾ ಐವತ್ತು ಪ್ರಾಚೀನ ವೀರಶಬ್ದಗಳ ಕೋಶವೊಂದನ್ನು ಜೋಡಿಸಿದ್ದು ಬಹಳ ಒಳಿತಾಗಿದೆ. ೧೫೦ ಪುಟದ ಈ ಪುಸ್ತಕಕ್ಕೆ ಒಂದು ರೂಪಾಯಿ ಬೆಲೆಯು ಅಷ್ಟೇನು ಹೆಚ್ಚಲ್ಲ. ಇದನ್ನು ಧಾರವಾಡದ ಶಿಕ್ಷಣ ಸಮಿತಿಯು ಪ್ರಸಿದ್ಧಿಸಿದೆ. ಸ್ತುತ್ಯ.

ನನ್ನ ಗೋಪಾಲ–(ನಾಟಕ) ಬರೆದವರು ಕೆ. ವ್ಹಿ. ಪುಟ್ಟಪ್ಪನವರು ಎಮ್. ಎ; ಪ್ರಕಟನಾಸ್ಥಳ ಮೈಸೂರು ಮಕ್ಕಳು ಕಚೇರಿ ಮೈಸೂರು. (ಮೇಲ್ಸಂಚಿಕೆ) ಬೆಲೆ ೪ ಆಣೆ.

ಇದು ಶ್ರೀ ಪುಟ್ಟಪ್ಪನವರು ಚಿಕ್ಕಮಕ್ಕಳಿಗಾಗಿ ಬರೆದು ದೊಂದು ಚಿಕ್ಕನಾಟಕ. ನಾಟ್ಯವಿಷಯ—ಚಿಕ್ಕಮಕ್ಕಳ ಪರಿಶುದ್ಧವಾದ ಭಾವನೆಗಳ ಗೋಪಾಲಬಾಲನ ಭಕ್ತಿ, ವಾತ್ಸಲ್ಯ ಹಾಗೂ ಲೀಲೆಗಳ ಆವಿಷ್ಕರಣ ! ನಾಟಕಕಾರರು—ಯಮುನ ಸೋಲು ಬರೆದು ಮುದಿಯ ಮನ ಸೋಲ ಹಚ್ಚಿದ, 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ಬರೆದು ಎಳೆಮಕ್ಕಳನ್ನು ಮರುಳುಗೊಳಿಸಿದ ಕವಿಗಳು ! ಕೇಳುವದೇನಿದೆ ? ಹುವ್ವಿಗೆ ತಕ್ಕ ಹೂಗಾರ ! ನಾಟಕದಲ್ಲಿ ಆದರ್ಶಜೀವನದ ಚೆಲುವನ್ನು ಹರಡಿ ಸಾಧನವನ್ನೂ ಸೂಚಿಸಿರುವರು. ಆದರೆ ಇಲ್ಲೊಂದು ಮಾತು; 'ಶ್ರೀನಿವಾಸ'ರಂದರಂತೆ ಮಗುವಿನ ಮಾತಿನಲ್ಲಿಯ ಸೊಗಸು ಅದರ ವಿಷಯವನ್ನು ಮಾತ್ರವಲ್ಲ, ರೀತಿಯನ್ನೂ ಅವಲಂಬಿಸಿರಬೇಕಾಗಿತ್ತು.

ಗೋಪಾಲನೆಂಬೊಬ್ಬ ಚಿಕ್ಕಹುಡುಗ, ಆತನ ತಾಯಿ ತೀರ ಬಡವೆ, ದಿನವೂ ವೇಣುಗೋಪಾಲನನ್ನು ಪೂಜಿಸಿ ಆತನನ್ನೇ ನೆರೆನಂಬಿ ದಿನದ ಕಷ್ಟನಿಷ್ಠುರಗಳನ್ನು—ತಾಯಿ ತನ್ನ ಹಿರಿಯ ಮಗನೆದುರಿಗೆ ಆಡಿಕೊಳ್ಳುವಂತೆ ಆಡಿಕೊಳ್ಳುವಳು. ಅವಳ ಭಾವನೆಯಂತೆ ನಟಿಸಲು ಆ 'ಕಪಟನಾಟಕ ಸೂತ್ರಧಾರ'ನೂ ಸಿದ್ಧ! ಗೋಪಾಲ (ಹುಡುಗ) ತನ್ನ ಹಿರಿಯಣ್ಣನಂತೆ ಆತನನ್ನು ಕಾಣುವನು, ತಾಯಿಯ ಭಾವನೆಯಲ್ಲಿ ತಿಲಮಾತ್ರವಾದರೂ ಅಶ್ರದ್ಧೆಯಿರಬಹುದು ಈತನ ಭಾವನೆ ಅಶ್ರದ್ಧೆಯ ಗಾಳಿ ಕೂಡ ತಾಗದಂತಹದು. ತಿಳಿವಿಗೆ ಸಿಲುಕದ ಶ್ರೀಕೃಷ್ಣನು ಒಲವಿಗೆ ಅಡಿಯಾಳು ! 'ಬನದ ಗೋಪಾಲ'ನ ತಾಯಿಯ 'ಆತ್ಮನಿವೇದನ' ಹಾಗು ಗೋಪಾಲನ 'ಸಖ್ಯ' (ಸಲಿಗೆ) ಇವುಗಳಿಗೆ ಮೆಚ್ಚಿ ಕಾಣುವನೇ ಹೊರತು ಗೋಪಾಲನ ತಿಳಿವುಳ್ಳ ಗುರುವಿಗೆ ಕಾಯ್ದುಕೊಡಿರಲು ಹೇಳುವನು. ಅಂತೂ ವಿಷಯವು ಬಹಳ ಚನ್ನಾಗಿ ಚಿತ್ರಿತವಾಗಿದೆ.

'ಸಾವಿರ ಮಳೆಬಿಲ್ಲುಗಳು ಕುಣಿದಾಡಿದಂತೆ' ಕಂಡ ಬನಸಿರಿ, 'ಬಣ್ಣದಕಣ್ಣು' ತಲೆಯಲ್ಲಿಟ್ಟ ಬನದ ಗೋಪಾಲ, 'ನಿಂತ ನದಿ' 'ಕುಣಿದ ಕಲ್ಮರ' 'ಕಿವಿ ನಿಮಿರಿ ನಿಂತ ಜಿಂಕೆಗಳು' 'ಕಡೆದ ಕಲ್ಲಿನಂತಿರುವ ತುರುವೃಂದ' 'ಮಲಯದೆಲರು ತಳಿರ ನಡುವೆ ಮೆಲಮೆಲನೆ ಸುಳಿಸುಳಿದು ನಲಿದಾಡುವ' ಬೃಂದಾವನ ಇವೆಲ್ಲವುಗಳನ್ನು ಬಣ್ಣಿಸುವಾಗ ಕವಿಯ ಪ್ರಕೃತಿ ಪ್ರೇಮ ಕಾವ್ಯಪ್ರತಿಭೆಗಳು ಹೊರಹೊಮ್ಮಿವೆ.

ತಮ್ಮ ಕಿಟ್ಟು (!) ವಿಗೆ ಕೊಟ್ಟ ಈ ಅಂದವಾದ ತಿಂಡಿಯಲ್ಲಿ ಅಲ್ಲಲ್ಲಿ ಸಣ್ಣ ಹರಳುಗಳೂ ಇವೆ. ಹಲ್ಲಿಗೆ ಸಿಕ್ಕಾಗ ಬಲು ಆಯಾಸ ! ೧ನೆಯ ನೋಟದಲ್ಲಿ ಗೋಪಾಲನಾಡುವನು 'ಮನೆಗಿಂತ ಬನವೆ ಸೊಗಸಮ್ಮ ನೀನಿಲ್ಲಿದ್ದರೆ(!)'; ಹೀಗೆ ಆಡುವಾಗ ಮನೆಯಲ್ಲಿರುವನು ! ಇಲ್ಲಿ ಅರ್ಥ ತಿಳಿಯುವದು ಬಲುಕಷ್ಟ ! ಇದೇ ನೋಟದ ಮತ್ತೊಂದೆಡೆಯಲ್ಲಿ ತಾಯಿಯಾಡಿದ 'ಪರಮಾತ್ಮ ! ನಾನು ಇದುವರೆಗೆ ಬಡವೆಯೆಂದು ತಿಳಿದಿರಲಿಲ್ಲ.... ಅವನಿಗೆ ಬಡತನದ ಸುದ್ದಿಯನ್ನು ತಿಳಿಸದೇ ಇದ್ದೆ' ಎಂಬಲ್ಲಿ ಒಂದೇ ಮಾತಿನಲ್ಲಿ ಪರಸ್ಪರ ವಿರೋಧಾರ್ಥಗಳು ಕಂಡು ಬರುವವು. ೩ ನೇ ನೋಟದಲ್ಲಿ ತಾಯಿಯ ಪ್ರಾರಂಭದ ಮಾತಿನಲ್ಲಿಯ ನಿಪಾತಗಳ ಸುರಿಮಳೆಯು ಕೇಳುವವರನ್ನು ಕಿವುಡುಗೊಳಿಸುವಂತಿದೆ. ನಿಪಾತಗಳಿಲ್ಲದಿದ್ದರೂ ನಡೆಯುತ್ತಿತ್ತಲ್ಲವೇ ? ೪ ನೇ ನೋಟದಲ್ಲಿ ಗುರುಗಳು 'ತಾಯಿಯ ಮೇಲ್ಮೆ'ಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಡಿದ ಬೋಧನೆಯು ಚಿಕ್ಕಮಕ್ಕಳಿಗೆ ತಿಳಿಯಬಹುದೋ ಇಲ್ಲವೋ ಸಂಶಯ.

ಒಟ್ಟಾರೆ ಪುಸ್ತಕವು ಬಹಳ ಚೆನ್ನಾಗಿದೆ. ಚಿಕ್ಕಮಕ್ಕಳಿಗಾಗಿ ಹೆಚ್ಚಾಗಿ ನಾಟಕಗಳಿಲ್ಲದಿರುವಾಗ ಪುಟ್ಟಪ್ಪನವರು ತಮ್ಮ ಕಿರಿಯ ತಮ್ಮಂದಿರನ್ನು ಮೆಚ್ಚಿಸಲು ಬರೆದಿರುವರು. ಹೀಗೆಯೇ ಅವರು ಕಿರಿಯರ ಸೇವೆಗೆ ಆಗಾಗ ಮನಸ್ಸು ಹಾಕುತ್ತಿರಲೆಂದು ಬೇಡಿಕೆ. ಎಲ್ಲ ಹಿರಿಯರೂ ತಮ್ಮ ಕಿರಿಯರಿಗೆ ಈ ಪುಸ್ತಕವನ್ನು ಅಗತ್ಯವಾಗಿ ಓದಲು ಕೊಡಬೇಕು.

—o—

"ಎಲ್ಲೆಲ್ಲೂ ಹೀಗಾಗಬೇಕೇ !" — (ಒಂದು ಸಣ್ಣ ಕಥೆ) 'ಕಥಾಂಜಲಿ'ಯಲ್ಲಿ ಪ್ರಕಟವಾದುದು. ಬರೆದವರು 'ಶಾರದಾ' ಎಂಬವರು. ಜಯ ಕರ್ನಾಟಕದ ವಾಚಕರಿಗೆ ಪರಿಚಿತರಾದ ಕತೆಗಾರ ಕೆ. ಗೋಪಾಲಕೃಷ್ಣರಾಯರ ಸಹಧರ್ಮಿಣಿಯವರು. 'ವೆಂಕಮ್ಮನವರು ಗಂಡನನ್ನು ಪ್ಲೇಗಿನಲ್ಲಿ ಕಳಕೊಂಡ ಮೇಲೆ ಅವರ ಒಬ್ಬಳೇ ಒಬ್ಬ ಮಗಳ ಮದುವೆಯನ್ನು ಅವರ ಭಾವನವರು (ಕತೆಗಾರ್ತಿಯ ಮಾವನವರು) ಮಾಡುವರು. ಆದರೆ ಅಳಿಯನಿಗೆ ಉಡುಗರೆ ಚೆನ್ನಾಗಿ ಕೊಡಲಿಲ್ಲವೆಂದು ಭಾವನವರ ಮೇಲೆ ವೆಂಕಮ್ಮನವರು ಕೋಪಿಸಿಕೊಂಡರು. ಒಬ್ಬಂಟಿಗರಾದ ಅವರು ಎಲ್ಲಿಯೂ ಹೊಂದಿಕೊಂಡಿರದ ಚಂಚಲ ಸ್ವಭಾವದವರು. ಮುಂದೆ ಬೀಗರ ಮನೆಯಲ್ಲಿಯೂ ಇರಲಾರದೆ ಹೊರಟೆದ್ದು ಹೋಗುವರು. ಒಬ್ಬೊಂಟಿಗರಾದ ಇವರ ತಪ್ಪುಗಳೇನಿದ್ದರೂ ಅವನ್ನು ಮನ್ನಿಸಿ ಮುಂದಕ್ಕೆ ಕರೆಯುವ ಬಂಧುಗಳೊಬ್ಬರೂ ಇಲ್ಲ. ಇಂಥ ಹೊತ್ತಿನಲ್ಲಿ ಪುಣ್ಯಾತ್ಮರೊಬ್ಬರ ಸಹಾಯದಿಂದ

ಮನೆಯಲ್ಲಿ ಅಡಿಗೇ ಮಾಡುವರು. ಆದರೆ ಇವರ ಹುಟ್ಟುಗುಣಕ್ಕನುಸರಿಸಿ ಅಲ್ಲಿಯೂ ಕೆಲಸ ಬಿಟ್ಟುಕೊಟ್ಟು ಕೈಯಲ್ಲಿ ಬಂದ ನಾಲ್ಕು ದುಡ್ಡಿನ ದಮ್ಮಿನ ಮೇಲೆ ಮಗಳನ್ನು ಊರಿಗೆ ಕರದೊಯ್ಯುವದಕ್ಕೆ ಅವಳ ಮನೆಗೆ ಹೋಗುವರು. ಒಳ್ಳೇ ಹೇವದ ಹೆಣ್ಣು ಮಗಳು. ಮಾತಿಗೆ ಮಾತು ಬೆಳೆದು ಅಳಿಯನೊಡನೆಯೂ ಅಳಿಯನ ಅಣ್ಣನೊಡನೆಯೂ ಅತ್ತಿಗೆಯೊಡನೆಯೂ ವಾದಿಸಿ ಊಟವನ್ನು ಮಾಡದೆ ಅಲ್ಲಿಂದ ಎದ್ದು ಹೋಗುವರು. ಮತ್ತೊಮ್ಮೆ ಮಗಳ ಮನೆಗೆ ಹೋಗುವರು. ಆದರೆ ಮಗಳನ್ನು ಮಾತನಾಡಿಸದೆ ಊರಿಗೆ ಹೊರಟು ಹೋಗುವರು. ಅಲ್ಲಿ ಕತೆಗಾರ್ತಿಗೂ ಇವರಿಗೂ ಭೆಟ್ಟಿಯಾದಾಗ ಸ್ವಾಭಿಮಾನದ ಮೂಲಕ ಏನೇನೋ ಸುಳ್ಳು ಹೇಳಿ ತನಗೆ ಬೀಗರಲ್ಲಿ ಆದರಾತಿಥ್ಯವಾಯಿತೆಂದೂ ೨೦೦ ರೂ. ಗಳಿಸಿ ಮಗಳಿಗೆ ಚೈನು ಮಾಡಿಸಿಕೊಟ್ಟು ಬಂದೆನೆಂದೂ ಹೇಳುವರು. ಆದರೆ ನಿಜಸ್ಥಿತಿ ಮಾತ್ರ ಯಾರೂ ಅವರನ್ನು ಮುಂದಕ್ಕೆ ಕರೆಯಲಿಲ್ಲ; ಅವರು ಕರೆಯುವಂತೆ ಇವರ ಸ್ವಭಾವವಿರಲಿಲ್ಲ.' ಇದು ಕಥಾವಸ್ತು. ಡೆಮ್ಮೈ ೮ ಪುಟಗಳ ಇಷ್ಟು ಚಿಕ್ಕ ಕತೆಯಲ್ಲಿ ಕಥಾನಾಯಕಿ ವೆಂಕಮ್ಮ, ಕತೆಗಾರ್ತಿ, ವೆಂಕಮ್ಮನ ಅಳಿಯ ಅಳಿಯನ ಅಣ್ಣ ಮತ್ತು ಅತ್ತಿಗೆ ಹಾಗೂ ಒಬ್ಬ ಪೋಸ್ಟ ಮಾಸ್ತರ ಇಷ್ಟು ಪಾತ್ರಗಳು ಬಂದಿವೆ. ಕಥಾವಸ್ತುವಿನಲ್ಲಿ ನಡೆದ ಸಂಗತಿಗಳ ವರ್ಣನೆಯಿಂದಲೇ ಕಥಾಪಾತ್ರಗಳ ಸ್ವಭಾವ ಚಿತ್ರದ ರೂಪರೇಷೆಯನ್ನು ಬರೆಯುವದರಲ್ಲಿ ಶ್ರೀಮತಿಯವರ ಕೌಶಲ್ಯವಿದೆಯೆಂದು ಕಂಡು ಬರುವದು. ಈ ಕಥೆಯಲ್ಲಿ ಅದು ಗರ್ಭಿತವಾಗಿದ್ದರೂ ಅದು ಮುಂದೆ ಅಭಿವೃದ್ಧಿಯನ್ನು ಹೊಂದುವದರಲ್ಲಿ ಸಂದೇಹವಿಲ್ಲ.

गीर्वाणभाषाप्रवेश ಅಥವಾ ಗೀರ್ವಾಣ ವಾಣಿಯ ಗುರುತು:— ಮಾಡಿಕೊಡುವವರು, ಶ್ರೀ. ವ. ಶ್ರೀ. ದೇಶಪಾಂಡೆ, ಅಥಣಿ. ಕ್ರೌನ ಸು. ೧೨೫ ಪುಟಗಳು ಬೆಲೆ ೧೨ ಆಣೆ.

ಸಂಸ್ಕೃತ ಭಾಷೆಯನ್ನು ಕಲಿಸುವ ಪುಸ್ತಕಗಳನ್ನು ಕನ್ನಡಿಗರು ಇದುವರೆಗೂ ಬರೆದಿರಲಿಲ್ಲವೆನ್ನಬಹುದು. ಮುಂಬೈ ಕರ್ನಾಟಕದಲ್ಲಿ ಭಾಂಡಾರಕರರ ಇಂಗ್ಲಿಷ ಪುಸ್ತಕದ ಕನ್ನಡ ಅನುವಾದವೇ ಇದುವರೆಗೆ ಇದ್ದ ಒಂದೇ ಒಂದು ಪುಸ್ತಕ. ಮೈಸೂರ ಮೊದಲಾದ ಕರ್ನಾಟಕದ ಇತರ ಭಾಗಗಳಲ್ಲಿಯೂ ಇದ್ದುದು ನಮಗಂತೂ ಕಂಡುಬಂದಿಲ್ಲ. ಈ ಕೊರತೆಯನ್ನು ಕಳೆದುದಕ್ಕಾಗಿ ಶ್ರೀ. ದೇಶಪಾಂಡೆಯವರಿಗೆ ಕನ್ನಡಿಗರು ಕೃತಜ್ಞರಾಗಿರಬೇಕಾಗಿದೆ.

ವ್ಯಾಕರಣಪ್ರಧಾನವಾದ ಭಾಂಡಾರಕರರ ಕ್ಲಿಷ್ಟ ಪದ್ಧತಿಯನ್ನು ತ್ಯಜಿಸಿ ಸುಭಾಷಿತಗಳ ಸಹಾಯದಿಂದ ಇವರು ತಮ್ಮ ಹೊಸ ಪದ್ಧತಿಯನ್ನು ಏರ್ಪಡಿಸಿರುತ್ತಾರೆ. ತಮ್ಮ ಶಾಲೆಯಲ್ಲಿ ಇದರ ಪ್ರಯೋಗ ಮಾಡಿ ವಿದ್ಯಾರ್ಥಿಗಳಿಗೆ ರುಚಿಸುವಂತೆ ಆಯಿತೆಂದು ತಮ್ಮ ಅನುಭವವನ್ನು ಮುನ್ನುಡಿಯಲ್ಲಿ ಹೇಳಿದುದು ಯುಕ್ತವಾಗಿಯೇ ಇದೆ. ' ಮೊದಲು ಭಾಷೆ; ತರುವಾಯ ವ್ಯಾಕರಣ ' ಎಂಬ ತತ್ವವನ್ನನುಸರಿಸಿ ಪುಸ್ತಕವು ಬರೆಯಲ್ಪಟ್ಟಿದೆ.

ಈ ಪುಸ್ತಕವು ಮೊದಲನೆಯ ವಿಭಾಗವಿದ್ದು ಇಂಗ್ಲಿಷ ೪ ನೆಯ ಇಯತ್ತೆಗೆ ಯೋಗ್ಯವಾಗಿದೆ. ಹೀಗೆಯೆ ಇನ್ನು ಮೂರು ಪುಸ್ತಕಗಳನ್ನು ೫-೬-೭ ನೆಯ ತರಗತಿಗಳಿಗಾಗಿ ಬರೆಯಬೇಕೆಂದಿರುವೆನೆಂದು ವಚನಕೊಟ್ಟಿದ್ದಾರೆ. ಸಕಲ ಕರ್ನಾಟಕಸ್ಥರು ಇದರ ಉಪಯೋಗ ಮಾಡಿಕೊಂಡರೆ ಮುಂದಿನ ೩ ಪುಸ್ತಕಗಳಿಗೆ ಅವಕಾಶವುಂಟಾಗುವದು. ಭಾಂಡಾರಕರ ಪುಸ್ತಕದ ವ್ಯಾಕರಣವೂ ಇದರಲ್ಲಿರುವದಲ್ಲದೆ ಸುಭಾಷಿತದ ಬೆಣ್ಣೆಯೂ ಇದರಲ್ಲಿದೆ.

ಬರೀ ಸುಭಾಷಿತಗಳೇ ಆದ್ದರಿಂದ ಬಾಲಕರಿಗೆ ಬೇಸರವಾಗಬಹುದೆಂದು ಕಡೆಗೆ ೨ ಕಥೆಗಳನ್ನೂ ಕೊಟ್ಟಿದ್ದಾರೆ. ಆದರೆ ಈ ಕಥಾಪ್ರಮಾಣವು ತೀರ ಸ್ವಲ್ಪವೇ ಸರಿ. ಮುಂದಿನ ಆವೃತ್ತಿಯಲ್ಲಿ ಪ್ರತಿಪಾಠಕ್ಕೂ ಒಂದೊಂದು ಪುಟ್ಟ ಕಥೆಯನ್ನು ಸೇರಿಸಬೇಕೆಂದು ಸೂಚಿಸುತ್ತೇವೆ.

ಪ್ರತಿಯೊಂದು ಪಾಠವನ್ನು ೧ ಸುಭಾಷಿತಗಳು. ೨ ಶಬಗಳು. ೩ ವ್ಯಾಕರಣ ವಿಶೇಷ. ೪ ಪರೀಕ್ಷೆ ಎಂದು ನಾಲ್ಕು ವಿಭಾಗಗಳಲ್ಲಿ ಕಲಿಸಿದುದು ಸಮಂಜಸವೇ ಸರಿ. 'ಪರೀಕ್ಷೆ'ಯ ವಿಭಾಗದಲ್ಲಿದ್ದ ಪ್ರಶ್ನೆಗಳಿಗೆ ಉತ್ತರಗಳನ್ನು ಪರಿಶಿಷ್ಟದಲ್ಲಿ ಕೊಟ್ಟರೆ ಮನೆಯಲ್ಲಿ ಸ್ವಸಹಾಯದಿಂದಲೇ ಕಲಿಯುವವರಿಗೂ ಉಪಯೋಗವಾಗುವದಾದ್ದರಿಂದ ಮುಂದೆ ಹಾಗೆ ಮಾಡಬೇಕೆಂದೂ ಸೂಚಿಸುತ್ತೇವೆ.

ಮುದ್ದಾದ ಬೆಂಗಳೂರಿನ ಮುದ್ರಣ. ಬೆಲೆಯು ಕಡಿಮೆಯೇ ಸರಿ. ಆದ್ದರಿಂದ ಎಲ್ಲ ಶಾಲೆಯವರೂ ಈ ಹೊಸ ಪದ್ಧತಿಯ ಪುಸ್ತಕವನ್ನು ತರಿಸಿ ಲೇಖಕರಂತೆ ಅನುಭವ ಪಡೆಯುವರೆಂದು ನಂಬಿದ್ದೇವೆ.

ರಾಷ್ಟ್ರೀಯ ಧರ್ಮ ಪದ್ಯ ರತ್ನಾವಳಿ:— ಶ್ರೀ. ವ್ಹಿ. ಸತ್ಯಾರ್ಥಿ, ಸಿದ್ಧಾಂತ ವಿಶಾರದ ಮುಂಬಯಿ ಇವರಿಂದ

ರಚಿತವಾದುದು. ಕಾಲೋಚಿತವಾದ ನಾಡಿನ ಹಾಡುಗಳು ಇದರಲ್ಲಿವೆ. ಶ್ರೀ. ಸತ್ಯಾರ್ಥಿಯವರಂಥ ಸಾಹಸಿಗಳ ಈ ಹಾಡುಗಳನ್ನು ದೇಶಪ್ರೇಮಿಗಳು ಒಮ್ಮೆಯಾದರೂ ಓದಬೇಕು. ನಗರ ಸಂಕೀರ್ತನಕ್ಕಾಗಿಯೂ ಇವುಗಳಲ್ಲಿ ಕೆಲವನ್ನು ಉಪಯೋಗಿಸಬಹುದು.

ನಗರ ಸಂಕೀರ್ತನೆಯ ಪದ್ಯಗಳು–ಬೆಲೆ ೧ ಆಣೆ, ಕನ್ನಡಿಗರ ಕೂಟದ ಸಾಹಿತ್ಯಶಾಖೆಯ ೩ನೆಯ ಪುಸ್ತಕವು. ೧೧ ಪದ್ಯಗಳಿದ್ದು ಕರ್ನಾಟಕದ ಹಾಗೂ ಭಾರತ ಮಾತೆಯ ವಿಷಯಕವಾಗಿ ಪ್ರೀತಿ, ಅಭಿಮಾನ, ವೀರಾವೇಶ ಮೊದಲಾದವುಗಳನ್ನು ಉದ್ದೀಪನೆ ಮಾಡುವ ಒಳ್ಳೇ ಹಾಡುಗಳಿವು. ಈಗಿನ ಕಾಲಕ್ಕೆ ಕಾಂಗ್ರೆಸ್ಸಿನವರು ಕೈಕೊಂಡ ನಗರ ಸಂಕೀರ್ತನೆಗಾಗಿ ಉಪಯುಕ್ತವಾದ ಹಾಡುಗಳಿವು. ಸಾಹಿತ್ಯ ಹಾಗೂ ರಾಷ್ಟ್ರ ಸಭೆಯ ಭಕ್ತರೆಲ್ಲರೂ ಈ ಹಾಡಿನ ಪುಸ್ತಕವನ್ನು ತರಿಸುವರೆಂದು ಆಶಿಸುತ್ತೇವೆ.

ಪತಿವ್ರತೆ ಲೇಖಕರು:—ಶ್ರೀ ವೆಂಕಟೇಶ ನರಸಿಂಗರಾವ ತಲವಾಯಿ, ಹೆಬ್ಬಳ್ಳಿ. ಪಾತಿವ್ರತ್ಯ ಪ್ರಭಾವದಲ್ಲಿ ನಮ್ಮ ತಾತ್ವಿಕ ವಿಶ್ವಾಸವಿದ್ದರೂ ಈ ಕಥೆಯು ನಮ್ಮ ನಂಬಿಗಸ್ತತನದ ಪರೀಕ್ಷೆಯನ್ನು ತಕ್ಕೊಳ್ಳುವದು. ಮಗನ ಜೀವ-ಗಂಡನ ನಿದ್ರೆ ಇವೆರಡರ ನಡುವೆ ಪ್ರಸಂಗಬಂದಾಗ ನಿದ್ರೆಗಾಗಿ, ಮಗನು ಬೆಂಕಿಯಲ್ಲಿ ಬೀಳುವದನ್ನು ಕಣ್ಣಾರೆ ಕಂಡು ಸುಮ್ಮನಿರುವವಳು ಅಮಾನುಷಳೇಸರಿ. ಆಹುತಿಯ ಯೋಗ್ಯತೆಗೆ ಒಪ್ಪುವಂತೆ ಧ್ಯೇಯವು ಸಾಧ್ಯವು ಉಚ್ಚವಾಗಿರಬೇಕು. ಇಲ್ಲವಾದರೆ ಯಜ್ಞವು ಮೂರ್ಖತನವೇ ಸರಿ.

ಆಧುನಿಕ ಕನ್ನಡ ಕವಿತೆ ಲೇಖಕರು:–ಸಂಗಪ್ಪ ಸಾಸನೂರ ಬಿ. ಎ., ಲಾ ಕಾಲೇಜ ಪುಣೆ. ಬೆಲೆ ೪ ಆಣೆ. ಡೆಕ್ಕನ್ ಕಾಲೇಜಿನ ನಿಬಂಧಸ್ಪರ್ಧೆಯಲ್ಲಿ ಬಹುಮಾನವನ್ನು ಪಡೆದ ಈ ಪ್ರಬಂಧವು ಶ್ರೀ ಬೇಂದ್ರೆಯವರ ಮುನ್ನುಡಿಯಿಂದಲೂ ಅಲಂಕೃತವಾಗಿದೆ. ಈ ಮುನ್ನುಡಿಯಲ್ಲಿ ಶ್ರೀ ಬೇಂದ್ರೆಯವರು ವಿಹಂಗಮದೃಷ್ಟಿಯಿಂದ ಆಧುನಿಕ ಕಾವ್ಯವನ್ನು ಅವಲೋಕಿಸಿದ್ದಲ್ಲದೆ ಈ ನಿಬಂಧದ ವಿಮರ್ಶೆಯನ್ನೂ ಅಲ್ಲಿಯೇ ಸೂಚಿಸಿದ್ದಾರೆ. ಈಗಿನ ಎಲ್ಲ ಕವಿಗಳ ವಿಚಾರವು ಇದರಲ್ಲಿ ಆಗಿಲ್ಲ. ಆದರೆ ಇಲ್ಲಿದ್ದ ಅನೇಕರ ಕಾವ್ಯ ನಿರೀಕ್ಷಣೆಯು ಲೇಖಕರಲ್ಲಿ ಸಹಜವಾಗಿದ್ದ ವಿಮರ್ಶಾಶಕ್ತಿಯನ್ನು ಸೂಚಿಸುತ್ತದೆ. ಅವರ ಕೆಲವು ಅಭಿಪ್ರಾಯಗಳು ಸರ್ವರಿಗೂ ಸಮ್ಮತವಾಗಲಾರವು; "Lead kindly light" ಇದನ್ನು "ದಾರಿದೋರು ಕರುಣಾಳು ಬೆಳಕೆ" ಎಂದು ಭಾಷಾಂತರಿಸುವದರಲ್ಲಿ ನಮಗಂತೂ ಏನೂ ನ್ಯೂನತೆ ಕಂಡು ಬರುವದಿಲ್ಲ. ಆದರೆ ವಿಮರ್ಶಕನು ನಿಜವಾಗಿ ತನಗೆ ಹೊಳೆದದ್ದನ್ನೇ ಹೇಳಿರುವನಲ್ಲದೆ ಕಲುಷಿತ ಮನಸ್ಸಿನಿಂದ ಅದನ್ನು ಹೇಳಿರುವದಿಲ್ಲ. ಇದೇ ದೃಷ್ಟಿಯಿಂದ ಅವರು ಮಾಡಿದ ಶ್ರೀನಿವಾಸ, ಅಂಬಿಕಾತನಯ ದತ್ತ, ಆನಂದಕಂದ, ಶ್ರೀ ಡಿ. ವ್ಹಿ. ಗುಂಡಪ್ಪ ಮುಂತಾದವರ ಕವಿತೆಗಳ ವಿಮರ್ಶೆಯು ಮನನೀಯವಾಗಿದೆ.

ಭಾರ್ಗವಿ:—ಲೇ. ದೇವಡು ನರಸಿಂಹಶಾಸ್ತ್ರಿ. ಪ್ರಕಾಶಕರು ತುಂಟೆರ ತಂಡ ಬೆಳಗಾಂವಿ. ಬೆಲೆ ೧ ಆಣೆ.

ಇದೊಂದು ಮನೋಹರವಾದ ಸಣ್ಣ ಕಥೆ. ಮಾಹಿಷ್ಮತಿ ಕುಮುದ್ವತಿ ನಗರಗಳ ವೈರವು ವಿಕ್ರಮನ ಪ್ರಾಣಾಹುತಿಯಿಂದ ಹೇಗೆ ಶಾಂತವಾಯಿತೆಂಬದು ಇಲ್ಲಿ ವರ್ಣಿತವಾಗಿದೆ. ಶಾಸ್ತ್ರಿಗಳ ಕಥಾನಕದಲ್ಲಿರುವ ಚಿತ್ತಾಕರ್ಷತೆಯೂ ಶೈಲಿಯಲ್ಲಿರುವ ಸರಳತನವೂ ಇಲ್ಲಿಯೂ ಇವೆ. ಆದರೆ ವಿಕ್ರಮನು ಭಾರ್ಗವಿಯನ್ನು 'ಭಾಗು' ಎಂದು ಕರೆಯುವದು ಸರಿಬೀಳುವದಿಲ್ಲ. ಕಥೆಯು ಕೊನೆಯಾದರೂ ಅಷ್ಟು ತೃಪ್ತಿಕರವಾಗಿಲ್ಲ.

ಸತ್ಯಾಗ್ರಹ ವಿಜಯ:—ಈ ಚಿಕ್ಕ ನಾಟಕವು ಕರ್ನಾಟಕ ಶಾರದಾ ಪುಷ್ಪಮಾಲೆಯ ೧ ನೇ ಪುಷ್ಪವು. ಇದರ ಲೇಖಕರು ಶೇಷಶರ್ಮಾ ಹೆಬ್ಬಾಳಕರ ಸುರಪುರ (ನಿಜಾಮ ಕರ್ನಾಟಕ) ಕಾರ್ಯದರ್ಶಿ ಕರ್ನಾಟಕ ಶಾರದಾ ವಾಚನಾಲಯ. ಲೇಖಕರ ಮೊದಲನೆ ಪ್ರಯತ್ನವು. ಇದರಲ್ಲಿ ಸತ್ಯಾಗ್ರಹದ ವಿಜಯವು ಹೇಗಾಗಿದೆಂಬ ಮಾತನ್ನು ಪ್ರಲ್ಹಾದನ ಚರಿತ್ರೆಯಿಂದ ಚಿಕ್ಕ ದೃಶ್ಯದ ರೂಪದಲ್ಲಿ ಹೇಳಿದೆ. "ನಿಃಶಸ್ತ್ರ ಸಮಾಜಗಳ ಮೇಲೆ ಆಗುವ ಘೋರ ಅನ್ಯಾಯಗಳನ್ನು ತಡೆಯಲಿಕ್ಕೆ ಸತ್ಯಾಗ್ರಹದ ಹೊರ್ತು ಇನ್ನೊಂದು ಮಾರ್ಗವೇ ಇಲ್ಲ." ಎಂಬ ಮುನ್ನುಡಿಕಾರರಾದ ದಿವಾಕರರ ವಚನವನ್ನು ಈ ಚಿಕ್ಕ ನಾಟಕವು ಯಥಾರ್ಥಗೊಳಿಸಲು ಹವಣಿಸಿದೆ. ಇದರಲ್ಲಿ ೫ ನೋಟಗಳಿವೆ. ಸರಳ ಶೈಲಿಯಲ್ಲಿ ಬರೆದಿದೆ. ಬೆಲೆ ೧ ಆಣೆ.

ಆನಂದಮಾಲೆಯ ೨ನೇ ಹೂವು:— ಲೇಖಕರು ಆನಂದಕವಿ, ಕುರುಗುಂದ. ಪುಸ್ತಕ ದೊರೆಯುವ ಸ್ಥಳ ಅಜ್ಜಪ್ಪ ಮಂತ್ರಪ್ಪ ಮಂತ್ರಣ್ಣವರ. ಬುಕ್‌ಸೇಲರ. ಮುರಗೋಡ ಜಿಲ್ಲಾ ಬೆಳಗಾಂವ:—೨೨ ಪುಟಗಳುಳ್ಳ ಈ ಚಿಕ್ಕ ಪುಸ್ತಕದಲ್ಲಿ "ಚಹಾ ಚುಟ್ಟಾ ಮೊದಲಾದ ಕೆಟ್ಟ ಚಟಗಳ ಮೇಲೆ"

Private Papers - 67 Volume